ಅಧ್ಯಕ್ಷರು.—ಸರ್ಕಾರಕ್ಕೆ ಉತ್ತರ ಕಳಿಸಿದ್ದೇನೆ

ಶ್ರೀ ಪಿ. ರಾಮದೇವ್.—ನಿನ್ನೆ ದಿನ ನಮ್ಮ ಮುಸ್ಲಿಂ ಬಾಂಧವರು ಈದ್ ಹಬ್ಬವನ್ನು ಬಹಳ ಚೆನ್ನಾಗಿ ಆಚರಿಸಿದ್ದಾರೆ. ನಾವೂ ಅವರ ಜೊತೆಯಲ್ಲಿ ಸಹಕರಿಸಿದ್ದೇವೆ. ಬಹಳ ಸಂತೋಷದಿಂದ ಗ್ರೀಟಿಂಗ್ಸ್ ಕಳಿಸಿದ್ದೇವೆ. ಪ್ರತಿ ವರ್ಷ ಮಾಡುವಂತೆ ಮೊನ್ನೆ ಸಾಯಂಕಾಲ ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಔತಣವನ್ನು ಕೊಟ್ಟಿದ್ದಾರೆ, ಬಹಳ ಸಂತೋಷ. ನಮ್ಮನ್ನು ಯಾರೂ ಕರೆದಿಲ್ಲ, ಕರೆದಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು. – ಮಾನ್ಯ ಬೊಮ್ಮಾಯಿಯವರು ಎಲ್ಲಾ ಬಂದಿದ್ದರು.

ಶ್ರೀ ಪಿ. ರಾಮದೇವ್.—ನಮ್ಮನ್ನು ಕರೆದಿಲ್ಲ, ಬಹಳ ಸಂತೋಷ. ಈದ್ ಹಬ್ಬದ ಸಂದರ್ಭದಲ್ಲಿ ಮುಸಲ್ಮಾನ್ ಬಾಂಧವರಿಗೆ ಕೊಟ್ಟಿರತಕ್ಕ ಔತಣ ಎಲ್ಲಾ ಒಳ್ಳೆಯದು. ಆದರೆ ಇದೇ ರೀತಿ ಕ್ರಿಶ್ಚಿಯನ್‌ಗೆ ಕ್ರಿಸ್‌ಮಸ್ ಈವ್‌ನಲ್ಲಿ, ಹಿಂದೂಗಳ ಹಬ್ಬವಾದ ಗಣೇಶ ಹಬ್ಬದಲ್ಲಿ ಅಥವಾ ದೀಪಾವಳಿಯಲ್ಲಿ......

ಅಧ್ಯಕ್ಷರು.—ಕೆಲವರು ಯುಗಾದಿಗೆ ಕರೆಯಿರಿ ಎಂದು ಹೇಳಬಹುದು, ಕೆಲವರು ದಸರಾಗೆ ಕರೆಯಿರಿ ಎಂದು ಹೇಳಬಹುದು. ಕೆಲವರು ಗೌರಿ ಹಬ್ಬಕ್ಕೆ ಕರೆಯಿರಿ ಎಂದು ಹೇಳಬಹುದು

ಶ್ರೀ ಪಿ. ರಾಮದೇವ್.—ಯಾವುದಾದರೂ ಒಂದು ಮತಕ್ಕೆ, ಯಾವುದಾದರೂ ಒಂದು ಹಬ್ಬಕ್ಕೆ ಕರೆಯಿರಿ.

ಅಧ್ಯಕ್ಷರು.—ಅಂಥಾದ್ದು ಯಾವುದು ಎಂದು ತೀರ್ಮಾನವಾಗಬೇಕಲ್ಲ.

ಶ್ರೀ ಪಿ. ರಾಮದೇವ್.—ಇದೇ ರೀತಿ ಕರೆಯಬೇಕು. ಆಯಾ ಜನಾಂಗದ ಮುಖಂಡರನ್ನು ಮೀಟ್ ಮಾಡಬೇಕು. ಈಗ ಬುದ್ಧಿಸ್ಟ್ ಕರೆಯುವುದಿಲ್ಲ, ಕ್ರಿಶ್ಚಿಯನ್ಸ್ ಕರೆಯುವುದಿಲ್ಲ, ಹಿಂದೂಗಳನು ಕರೆಯುವುದಿಲ್ಲ. ಆದ್ದರಿಂದ ಆಯಾ ಜನಾಂಗದ ಮುಖಂಡರನ್ನು ಮೀಟ್ ಮಾಡಿ, ತೀರ್ಮಾನ ಮಾಡಿ' ದಯವಿಟ್ಟು ಆ ಒಂದು ಸಂಪ್ರದಾಯವನ್ನು ಹಾಕಬೇಕು.

ಶ್ರೀ ಪಿ.ಎನ್, ರೆಡ್ಡಿ.—ಮಾನ್ಯ ಮುಖ್ಯ ಮಂತ್ರಿಗಳು ಯುಗಾದಿ ಹಬ್ಬಕ್ಕೆ ಕರೆದಿದ್ದರು.

ಅಧ್ಯಕ್ಷರು.—ಈಗ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣ.

SRI Y. RAMAKRISHNA (Minister for Law and Parliamentary and Animal Husbandry).—Since yesterday was holiday, it is under cyclostyle. In the course of the day I will make the statement.

ಅಧ್ಯಕ್ಷರು. —ಮಧ್ಯಾಹ್ನ ತೆಗೆದುಕೊಳ್ಳೋಣ.

FINANCIAL BUSINESS

Discussion and Voting of Demands for grants for the year 1982-83

DEMAND No. 1

AGRICULTURE—(EXCLUDING HORTICULTURE AND DROUGHT PRONE AREAS PROGRAMME)

SRI H.C. SRIKANTAIAH (Minister for Co-operation).-Sir, on behalf of the Chief Minister on the recommendation of the Governor, I beg to move

"That a sum not exceeding Rs.25,10,67,000 on Revenue Account and Rs. 4,21,04,000 on Capital Account inclusive of the sum granted 'on account' be granted to the Government to defray the charges which will come in course of

payment during the financial year ending 31st day of March 1983 in respect of 'Agriculture (evcluding Horticulture and Drought Prone Areas Programme)''.

DEMAND NO. 3

SOIL AND WATER CONSERVATION

"That a sum not exceeding Rs. 7,12,50,000 on Revenue Account and Rs. 1,62,50,000 on Capital Account inclusive of the sum granted 'on Account' be granted to the Government to defray the charges which will come in course of payment during the financial year ending 31st day of March 1983 in respect of "Soil and Water Conservation".

The question was proposed

DEMAND NO. 2

HORTICULTURE

SRI K. VENKATAPPA (Minister of State for Horticulture and Prisons).—Sir, on the recommendation of the Governor, I beg to move.

"That a sum not exceeding Rs. 7,26,38,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Horticulture."

DEMAND NO. 25

JAILS

"That a sum not exceeding Rs. 2 53,45.,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day March 1983 in respect of "Jails."

The question was proposed

† ಶ್ರೀ ಎಂ. ವಿ. ರಾಜಶೇಖರನ್ (ಉತ್ತರಹಳ್ಳಿ).—ಮಾನ್ಯ ಅಧ್ಯಕ್ಷರೆ, ಈಗ ತಾನೆ ಈ ಸದನದ ಮುಂದೆ ಮಂಡಿಸಿರತಕ್ಕಂಥ ವ್ಯವಸಾಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳ ಬೇಡಿಕೆಗಳನ್ನು ವಿರೋಧಿಸಿ ಕೆಲವು ಅಂಶಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಇವತ್ತಿನ ದಿವಸ ಈ ಒಂದು ಬೇಡಿಕೆಯನ್ನು ಸದನದ ಮುಂದೆ ಮಂಡಿಸುವಾಗ, ಈ ಒಂದು ಇಲಾಖೆಯನ್ನು ಹೊಂದಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಪ್ರಸ್ತುತರಾಗಿ ಇರಬೇಕಾದ್ದು ಬಹಳ ಮುಖ್ಯವಾಗಿತ್ತು. ತಮಗೆ ಗೊತ್ತಿರುವ ಹಾಗೆ. ಈ ರಾಜ್ಯದಲ್ಲಿ ಮತ್ತು ಈ ರಾಷ್ಟ್ರ

† Indicates that remarks or speeches have not been revised by the member concerned.

ದಲ್ಲಿ ೧೦೦ಕ್ಕೆ ೮೦ ಭಾಗ ಜನಗಳು ಏನು ಈ ವ್ಯವಸಾಯವನ್ನು ನಂಬಿ ಜೀವನವನ್ನು ನಡೆಸುತ್ತಾ ಇದ್ದಾರೆ ಅಂಥಾ ಒಂದು ಬೇಡಿಕೆಯ ಬಗ್ಗೆ ಚರ್ಚೆ ಮಾಡುವಾಗ ಈ ಸದನದ ನಾಯಕರಾಗಿರತಕ್ಕ ಮತ್ತು ರಾಜ್ಯದ ಮುಖ್ಯ ಮಂತ್ರಿಗಳಾಗಿರತಕ್ಕ ಶ್ರೀಮಾನ್ ಗುಂಡೂರಾಯರು ಪ್ರಸ್ತುತರಾಗಿ ಇರಬೇಕಾಗಿರ ತಕ್ಕಂಥಾದ್ದು ಔಚಿತ್ಯ ಮತ್ತು ಸಾಧುವಾಗಿತ್ತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ಶ್ರೀಕಂಠಯ್ಯನವರು ರೈತರ ಮಕ್ಕಳು, ಅವರಿಗೆ ರೈತರ ಕಷ್ಟ ಸುಖ ಗೊತ್ತಿದೆ. ಅವರು ಸರ್ಕಾರದ ಪರವಾಗಿ ಈ ಒಂದು ಬೇಡಿಕೆಗಳನ್ನು ಮಂಡನೆ ಮಾಡಿದ್ದಾರೆ ಬಹಳ ಸಂತೋಷ. ಆದರೆ ಈ ಬೇಡಿಕೆಗಳನ್ನು ಮಂಡಿಸುವಾಗ ಅವರ ಕಷ್ಟ ಸುಖಗಳನ್ನು ಮಾನ್ಯ ಮಂತ್ರಿಗಳವರು ಅರಿಯ ಬೇಕಾದಂಥದ್ದು ಬಹಳ ಮುಖ್ಯ. ಏತಕ್ಕೆಂದರೆ ಇವರು ನೇರವಾಗಿ ಈ ಬೇಡಿಕೆಗಳ ಹೊಣೆಯನ್ನು ಹೊತ್ತಿದ್ದಾರೆ ಎಂದರೆ ತಪ್ಪಾಗಲಾರದು ಮತ್ತೆ ಈ ಬೇಡಿಕೆಗಳಲ್ಲಿರತಕ್ಕ ಅಂಶವೇನಿದೆ. ಇದು ರೈತನ ಭವಿಷ್ಯವನ್ನು ತೀರ್ಮಾನ ಮಾಡತಕ್ಕ ಅಂಶವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸ್ವಾಮಿ, ಈ ವಿಚಾರವನ್ನು ಅಷ್ಟಕ್ಕೆ ಬಿಡುತ್ತೇನೆ ಈ ವರದಿಯನ್ನು ವಿರೋಧಿಸುತ್ತಾ ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಇದು ಜುಲೈ ತಿಂಗಳ ೨೪ನೇ ತಾರೀಖು. ಆದರೆ ನಮ್ಮ ಮುಂದಿಟ್ಟಿರತಕ್ಕ ವರದಿ ಏನಿದೆ ಅದು ೧೯೮೧ನೇ ಇಸ್ವಿ ಡಿಸೆಂಬರ್‌ನವರೆಗಿನ ಕಾರ್ಯಕ್ರಮ ಗಳ ವಿವರವನ್ನು ನಮ್ಮ ಮುಂದಿಟ್ಟಿದ್ದಾರೆ. ಅಂದರೆ ಈ ಸದನದ ಸದಸ್ಯರನ್ನು ಸರ್ಕಾರ ಎಷ್ಟು ಲಘು ವಾಗಿ ಕಾಣುತ್ತಿದೆ ಎಂಬುದನ್ನು ಇದರಿಂದ ತೋರಿಸಿ ಕೊಟ್ಟಂತಾಗಿದೆ. ಕಡೆಯ ಪಕ್ಷ ೧೯೮೨ರ ಮಾರ್ಚಿ ವರೆಗಿನ ಅಂಕಿಅಂಶಗಳನ್ನಾದರೂ ಈ ಸದನದ ಮುಂದಿಡುವುದಕ್ಕೆ ಏನು ಕಷ್ಟವಿತ್ತು ? ನನಗೆ ಗೊತ್ತಿದೆ. ಮಾರ್ಚಿಯೊಳಗೆ ಈ ಒಂದು ವರದಿಯನ್ನು ಈ ಸದನ ಪರಿಶೀಲನೆ ಮಾಡುತ್ತದೆಂದು ಹೇಳಿ ಇದನ್ನು ಅಚ್ಚು ಹಾಕಿಸಿದ್ದಾರೆ. ಆದರೆ ಇದನ್ನು ಅಚ್ಚು ಹಾಕಿಸಿದ ಮೇಲೆ ಸಪ್ಲಿಮೆಂಟರಿ ರಿಪೋರ್ಟ್‌ನ್ನು ಇಡ ಬಹುದಾಗಿತ್ತು ಆದರೆ ಏತಕ್ಕೆ ಇಡಲಿಲ್ಲ ಎನ್ನುವ ಕಾರಣವನ್ನು ಮಾನ್ಯ ಶ್ರೀ ಶ್ರೀಕಂಠಯ್ಯನವರು ಕೊಡ ಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಒತ್ತಾಯ ಸಲ್ಲಿಸುತ್ತೇನೆ. ಕೆಲವು ಇಲಾಖೆಗಳನ್ನು ಕೊಟ್ಟಿ ದ್ದಾರೆ, ವ್ಯವಸಾಯ ಇಲಾಖೆಯ ವಿಚಾರದಲ್ಲಿ ಇದುವರೆಗೂ ಕೆಲಸಗಳನ್ನು ಮಾಡಿಲ್ಲ. ಸ್ವಾಮಿ ೩೧ನೇ ಮಾರ್ಚಿವರೆಗೆ ನಡೆದಿರತಕ್ಕ ಕಾರ್ಯಕ್ರಮಗಳು ನಮ್ಮ ಮುಂದೆ ಇಲ್ಲಿದೆ ಅದರ ಬಗ್ಗೆ ಸತ್ವಪೂರ್ಣ ವಾಗಿ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಸರ್ಕಾರದವರು ಮನಗಾಣಬೇಕು. ಸರ್ಕಾರದವರು ಕೊಟ್ಟಿರತಕ್ಕ ವರದಿಯಲ್ಲಿ ಹಲವಾರು ನ್ಯೂನತೆಗಳು ಇವೆ ತಮಗೆ ಹೇಳುವುದಾದರೆ, ಪೇಜ್ ೨೧ರಲ್ಲಿ ಐಟಂ ೨, ೩, ೪ರಲ್ಲಿ ಕೊಟ್ಟಿರುವುದನ್ನು ಮಾನ್ಯ ಶ್ರೀ ಶ್ರೀಕಂಠಯ್ಯನವರು ಪರಿಶೀಲನೆ ಮಾಡಬೇಕು. ಡಿಸ್ಟ್ರಿಬ್ಯೂಷನ್ ಆಫ್ ಇಂಪ್ರೂವ್ಡ್ ಸೀಡ್ಸ್ ಎಂದು ಇದೆ ಅದು ಕೆ.ಜಿ. ನೇ ಕ್ವಿಂಟಾಲೇ ? ಯಾವುದು ಎಂಬುದನ್ನು ಸರಿಯಾಗಿ ಹೇಳಿಲ್ಲ. ಅನಂತರ ಏರಿಯಾ ಅಂಡರ್ ಇಂಪ್ರೂವ್ಡ್ ಸೀಡ್ಸ್ ಎಂದರೆ ಇದು ಏನು ? ಮತ್ತು ಏರಿಯಾ ಅಂಡರ್ ಫರ್ಟಿಲೈಜರ್ಸ್ ಎಂದರೆ ಇದು ಏನು ? ಪುನಃ ೨೩ನೇ ಪುಟ ತೆಗೆದುಕೊಂಡರೆ ಅಲ್ಲಿಯೂ ಸಹ ಏರಿಯಾ ಅಂಡರ್ ಇಂಪ್ರೂವ್ಡ್ ಸೀಡ್ಸ್ ಎಂದು ಇದೆ.

ಶ್ರೀ ಪಿ. ರಾಮದೇವ್.—ಇದು ಬಹಳ ಮುಖ್ಯವಾದ ಪೋರ್ಟ್‌ಫೋಲಿಯೋ ಇದಕ್ಕೆ ಸಂಬಂಧ ಪಟ್ಟ ಮಂತ್ರಿಗಳವರು ಇಲ್ಲ. ಡಿಪಾರ್ಟ್‌ಮೆಂಟಿನ ಸೆಕ್ರಟರಿಗಳವರು ಇಲ್ಲ, ಸೆಕ್ರಟರಿ ಬರದೇ ಹೋದರೆ ಈ ಸದನಕ್ಕೆ ಎಷ್ಟರಮಟ್ಟಿನ ಗೌರವವನ್ನು ಕೊಡುತ್ತಿದ್ದಾರೆಂಬುದು ಇದರಿಂದಲೇ ಗೊತ್ತಾಗುತ್ತದೆ, ಆದ್ದರಿಂದ ಈ ಜವಾಬ್ದಾರಿಯನ್ನು ಯಾರ ಮೇಲೆ ಫಿಕ್ಸ್ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹೇಳಿ ಕಳುಹಿಸುತ್ತೇನೆ ಬರುತ್ತಾರೆ.

ಶ್ರೀ ಎಂ. ವಿ. ರಾಜಶೇಖರನ್.—ಮೂರನೆಯ ವಿಚಾರ ಎಷ್ಟರಮಟ್ಟಿಗೆ ಗಮನವನ್ನು ಕೊಡು ತ್ತಿದ್ದಾರೆಂದು ಹೇಳಿದರೆ, ಪುಟ ೨೩ರಲ್ಲಿ ನೋಡಿ, ಅಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳು ಏರಿಯಾ ಅಂಡರ್ ಇಂಪ್ರೂವ್ಡ್ ಸೀಡ್ಸ್ ಮತ್ತು ಏರಿಯಾ ಅಂಡರ್ ಫರ್ಟಿಲೈಜರ್ಸ್‌ನ್ನು ನೋಡಿ ಅವು ಏನೆಂಬುದು ಗೊತ್ತಾಗುವುದಿಲ್ಲ. ಅದೇ ರೀತಿ ೨೩ನೇ ಪುಟದ ಐಟಂಗಳಲ್ಲಿ ಏನೆಂಬುದನ್ನು ಕೊಟ್ಟಿಲ್ಲ, ಅದೇ ರೀತಿ ೩೧ನೇ ಪುಟ ತೆಗೆದು ನೋಡಿ ಅದರಲ್ಲಿಯೂ ಸರಿಯಾದ ವಿವರಣೆಯನ್ನು ಕೊಟ್ಟಿಲ್ಲ, ಇದನ್ನು ನೋಡಿದರೆ ಏನು ತೋರಿಸುತ್ತದೆ ಎಂದರೆ ಇಷ್ಟು ಲಘುವಾಗಿ ಈ ತರಹದ ವರದಿಯನ್ನು ಈ ಸದನದ ಮುಂದೆ ಇಟ್ಟು ಈ ಸದನವನ್ನು ಯಾವ ರೀತಿಯಾಗಿ ಈ ಇಲಾಖೆಯವರು ಮತ್ತು ಸರ್ಕಾರದವರು ಕಾಣು ತ್ತಿದ್ದಾರೆಂಬುದನ್ನು ತೋರಿಸಿಕೊಡುತ್ತದೆ. ಇದು ಸಾಧುವೇ ? ಶ್ರೀಮಾನ್ ಶ್ರೀಕಂಠಯ್ಯನವರು ಈ

ವರದಿಯನ್ನು ದಯವಿಟ್ಟು ಕೈಗೆ ತೆಗೆದುಕೊಂಡು ನೋಡಬೇಕು. ೩೮ನೇ ಪುಟದಲ್ಲಿ ನೋಡಿ, Award of prizes to Gramapanchayats for doing best rural compost working. probably total expenditure upto end of March 1982 ಎಂದು ಹೇಳಿದ್ದೀರಿ, ಅಂದರೆ ಏನದು ? ಗೊತ್ತಿಲ್ಲ. ಪುನಃ ಸ್ವಾಮಿ, ೪೩ನೇ ಪುಟ ತೆಗೆದು ನೋಡಿ ಅದರಲ್ಲಿ ಇವರು ಅಚೀವ್ ಮಾಡಿರತಕ್ಕ ಫಿಜಿಕಲ್ ಟಾರ್ಜೆಟ್ ಎಷ್ಟೆಂದು ಹೇಳಿದ್ದಾರೆ. ಸ್ಟೇಟ್ ಸಾಯಿಲ್ ಸರ್ವೆ ಆರ್ಗನೈಜೇಷನ್ ಬೆಂಗಳೂರು, ಸ್ಟೇಟ್ ಸಾಯಿಲ್ ಸರ್ವೆ, ಧಾರವಾಡದಲ್ಲಿನ ಕಾಲಂಗಳಲ್ಲಿ ಖಾಲಿ ಇದೆ, ಅಂದರೆ ಇದರ ಅರ್ಥವೇನು ? ದಯವಿಟ್ಟು ಸರ್ಕಾರದವರು, ಈ ಸದನಕ್ಕೆ ತಿಳಿಸಬೇಕು. ಸ್ವಾಮಿ ಇದೇ ರೀತಿ ಪುನಃ ೪೫ನೇ ಪುಟ ನೋಡಿ, ೩೧–೩–೧೯೮೨ರ ವರೆಗೆ ಪ್ರಾಬಬಲ್ ಎಕ್ಸ್‌ಪೆಂಡೀಚರ್ ಕಾಲಂ ಕೂಡ ಖಾಲಿ ಇದೆ. ಇದಕ್ಕೆ ಕಾರಣರು ಯಾರು ? ಇದನ್ನೆಲ್ಲಾ ಸರಿಯಾದ ರೀತಿಯಲ್ಲಿ ನಾವು ಪರಿಶೀಲನೆ ಮಾಡಬೇಕಾಗಿದೆ. ಈ ಸದನದಲ್ಲಿ ಇಂಥಾ ವಿಚಾರಗಳ ಬಗ್ಗೆ ಚರ್ಚೆ ಬಂದಾಗ ಸರಿಯಾದ ಮಾಹಿತಿಯನ್ನು ಈ ಸದನಕ್ಕೆ ಒದಗಿಸಿ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ. ಮಾಹಿತಿ ಇಲ್ಲದೇ ಹೋದರೆ ಸದಸ್ಯರು ಆದ ನಾವು ಸತ್ವಪೂರ್ಣವಾದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಕಷ್ಟವಾಗುತ್ತದೆ, ಕೆಲವು ಮಾಹಿತಿಯನ್ನು ಕೊಟ್ಟಿದ್ದಾರೆ ಅದು ತಪ್ಪು ತಿಳುವಳಿಕೆಗೆ ದಾರಿಯನ್ನು ಮಾಡಿಕೊಡತಕ್ಕಂಥ ಒಂದು ಕೆಲಸವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಇದು ಸರಿಯಲ್ಲವೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಒಂದು ಎಚ್ಚರಿಕೆಯನ್ನು ಸಹ ಕೊಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಈಗ ಅವರು ಏನೇ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು ಮಾತನಾಡಿದರೂ ನಮ್ಮ ರಾಜ್ಯದಲ್ಲಿ ವ್ಯವಸಾಯದ ಪ್ರಗತಿ ಎಷ್ಟರಮಟ್ಟಿಗೆ ನಡೆಯಬೇಕಾಗಿತ್ತೋ ಅಷ್ಟರ ಮಟ್ಟಿಗೆ ನಡೆಯದೇ ಕುಂಠಿತವಾಗಿದೆ ಎನ್ನುವ ಚಿತ್ರ ನಮ್ಮ ಮುಂದೆ ಕಾಣುತ್ತಿದೆ. ಇವಕ್ಕೆ ಹಲವಾರು ಕಾರಣಗಳು ಇದೆ. ವ್ಯವಸಾಯ ಇಲಾಖೆ ಏನಿದೆ ಇದರಲ್ಲಿ ಸಾಕಷ್ಟು ಸಿಬ್ಬಂದಿ ವರ್ಗದವರ ಕೊರತೆ ಇದೆ. ಆದುದರಿಂದ ಈ ಇಲಾಖೆ ಸತ್ವಪೂರ್ಣವಾಗಿ ಕೆಲಸ ಮಾಡಬೇಕಾಗಿದ್ದರೆ ಸರ್ಕಾರದವರು ಇದಕ್ಕಾಗಿ ಸೂಕ್ತವಾದ ಆಜ್ಞೆಗಳನ್ನು ಹೊರಡಿಸಿ ಈ ಇಲಾಖೆಗೆ ಎಲ್ಲಾ ಅನುಕೂಲತೆಗಳನ್ನು ಕಲ್ಪಿಸಿ ಕೊಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಇವತ್ತಿನ ದಿವಸ ಈ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿ ಬಿದ್ದಿದೆ ಇದಕ್ಕೆ ಕಾರಣರ್ಯಾರು ? ಇವತ್ತಿನ ದಿವಸ ವ್ಯವಸಾಯವೇ ಬಹಳ ಮುಖ್ಯವಾಗಿರತಕ್ಕ ನಮ್ಮ ರಾಜ್ಯದಲ್ಲಿ ವ್ಯವಸಾಯ ವಿಸ್ತರಣಾ ಯೋಜನೆಗಳನ್ನು ನೀವು ಜಾರಿಗೆ ತರಬೇಕಾದರೆ ಅವನ್ನು ಮಾಡುವಾಗ ಅದಕ್ಕೆ ಬೇಕಾದಂಥ ಸಿಬ್ಬಂದಿ ವರ್ಗ ಇಲ್ಲದೇ ಹೋದರೆ ಅದರ ಕೆಲಸ ಎಷ್ಟರಮಟ್ಟಿಗೆ ನಡೆಯುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ.

೧೧–೦೦ ಎ. ಎಂ.

ಇದರ ಹಿಂದೆ ಇರತಕ್ಕ ವ್ಯವಸ್ಥೆ ಏನಿದೆ ಅದು ಪೂರ್ಣವಾಗಿ ಬದಲಾವಣೆಯಾಗಬೇಕು. ಅದು ಬದಲಾವಣೆ ಆಗದೆ ಹೋದರೆ ರೈತನಿಗೆ ಅನುಕೂಲತೆ ದೊರೆಯುವುದು ಕಷ್ಟವಾಗುತ್ತದೆ. ಇವತ್ತಿನ ದಿವಸ, ವ್ಯವಸಾಯಗಾರರ ವಿಚಾರದಲ್ಲಿ ನಮ್ಮ ದೇಶವನ್ನು ಬಿಟ್ಟು ಹೊರ ದೇಶದ ಎಲ್ಲ ಸರ್ಕಾರಗಳೂ ಸಾಕಷ್ಟು ಪ್ರೋತ್ಸಾಹ ನೀಡುತ್ತಿವೆ ಎಂದರೆ ತಪ್ಪಾಗಲಾರದು. ಇವತ್ತು ಔದ್ಯೋಗಿಕವಾಗಿ ಮುಂದುವರಿದ ರಾಷ್ಟ್ರಗಳಲ್ಲಿ ಆ ಸರ್ಕಾರಗಳು ಆ ರಾಷ್ಟ್ರದ ರೈತನಿಗ ಕೊಡುತ್ತಿರುವ ಸವಲತ್ತುಗಳು ಮತ್ತು ವ್ಯವಸಾಯ ಇಲಾಖೆಗೆ ಸರ್ಕಾರದವರು ಕೊಡುತ್ತಿರತಕ್ಕ ಹಣ ಸಹಾಯ ಏನಿದೆ ಅದನ್ನು ಗಮನಿಸಿದರೆ ನಾವು ಬಹಳ ದುರ್ದೈವದ ಸ್ಥಿತಿಯಲ್ಲಿದ್ದೇವೆ. ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಅಗ್ರಿಕಲ್ಚರಲ್ ಪ್ರೊಡ್ಯೂಸರ್ಸ್ ಸಂಸ್ಥೆ ಏನಿದೆ ಇದು ವಿಶ್ವವ್ಯಾಪಿಯಾದ ರೈತರ ದೊಡ್ಡ ಸಂಸ್ಥೆ. ಆ ರಾಷ್ಟ್ರಗಳ ಸರ್ಕಾರಗಳು ರೈತರ ವಿಚಾರದಲ್ಲಿ ಈ ರೀತಿ ಹೇಳಿವೆ:

> "Even the past Governments have recognised from the past failed policies that what is bad for farmers is also bad for the country".

ಇಲ್ಲಿ ಆ ರೀತಿ ಇಲ್ಲ. ಇವರ ಒಂದು ಕಾಲದಲ್ಲಿ ರೈತನಿಗೆ ಏನು ದುರಾದೃಷ್ಟ ವ್ಯವಸ್ಥೆ ಇದೆ ಅದನ್ನು ಹೋಗಲಾಡಿಸಲು ಸರ್ಕಾರ ಸರ್ವ ಪ್ರಯತ್ನ ಮಾಡಬೇಕು. ಜನಗಳಿಗೆ ಅನುಕೂಲತೆ ಕಲ್ಪಿಸಿಕೊಡತಕ್ಕ ದಿಸೆಯಲ್ಲಿ ಸರ್ಕಾರದವರು ಕೆಲಸ ಮಾಡಬೇಕು. ಇವತ್ತಿನ ದಿವಸ, ನಿರಂಕುಶ ಪ್ರಭುತ್ವದಲ್ಲಿರತಕ್ಕ

ರಾಷ್ಟ್ರಗಳನ್ನು ತೆಗೆದುಕೊಳ್ಳೋಣ. ಸೋವಿಯತ್ ಯೂನಿಯನ್‌ನಲ್ಲಿರತಕ್ಕ ಮುಖ್ಯಸ್ಥರೇನಿದ್ದಾರೆ (ಬ್ರೆಜ್ನೋ) ಅವರು ರೈತರ ಬಗ್ಗೆ ಏನು ಹೇಳಿದ್ದಾರೆಂಬುದು ತಮಗೆ ಗೊತ್ತಿದೆ. ಆ ರಾಷ್ಟ್ರಕ್ಕೆ ತಾವು ಹೋಗಿದ್ದೀರಿ ಮತ್ತು ಅವುಗಳ ಪ್ರಗತಿಯನ್ನು ನೋಡಿದ್ದೀರಿ. ಅಲ್ಲಿರತಕ್ಕ ಕೆಲವು ಫರ್ಮ್‌ಗಳು ಆ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಬಹಳ ಪ್ರಮುಖವಾದ ಪಾತ್ರವಹಿಸುತ್ತವೆ. ಆದರೂ ಸಹ ಆ ರಾಷ್ಟ್ರದ ನಾಯಕರಾದ ಬ್ರೆಜ್ನೋ ಅವರು ಸಣ್ಣ ರೈತರ ಅಭಿವೃದ್ಧಿ ಬಗ್ಗೆ ಹೇಳಿರತಕ್ಕ ಮಾತನ್ನು ಹೇಳಬಯಸುತ್ತೇನೆ. ಅವರು ೨೬ನೇ ಕಾಂಗ್ರೆಸ್ ಸೋವಿಯತ್ ಯೂನಿಯನ್‌ನ ಅಧಿವೇಶನದಲ್ಲಿ ಮಾತನಾಡುತ್ತಾ ಈ ರೀತಿ ಹೇಳಿದ್ದಾರೆ:

> "Collective and State farms have been and remained the backbone of socialist agriculture. This doesn't mean however that we have to neglect the opportunities provided by individual holdings, Our experience testifies to the fact that such holdings come out as a major supplement in the production of meat, milk and other food-stuffs. The orchards, the vegetable gardens, poultry and cattle privately owned by the working people constitute the part of our general resources. The Soviet Government has deemed it necessary to adopt a special resolution on the development of individual holdings in agriculture. This document envisages various incentives for the development of individual food production, individual holdings and food production particu arly cattle, poultry and agriculture."

ಈ ರೀತಿಯಾಗಿ ಆ ರಾಷ್ಟ್ರಗಳು ಮತ್ತು ಆ ರಾಷ್ಟ್ರದ ಸರ್ಕಾರಗಳು ಯೋಚನೆ ಮಾಡುತ್ತಿರುವಾಗ ನಮ್ಮ ನಿಲುವು ಏನಿದೆ, ನಮ್ಮ ಸರ್ಕಾರದವರು ಎಷ್ಟರಮಟ್ಟಿಗೆ ರೈತನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಪ್ರಯತ್ನಿಸುತ್ತಿವೆ ಮತ್ತು ರೈತನಿಗೆ ಸಹಾಯ ಮಾಡುತ್ತಿರತಕ್ಕ ಇಲಾಖೆಗಳು ಸತ್ವಪೂರ್ಣವಾಗಿ ಕೆಲಸ ಮಾಡುವುದಕ್ಕೆ ಎಷ್ಟರಮಟ್ಟಿಗೆ ಅನುಕೂಲತೆ ಕಲ್ಪಿಸಿಕೊಡುತ್ತಿದ್ದಾರೆಂಬುದನ್ನು ತಾವು ಈ ಸದನದಲ್ಲಿ ತಿಳಿಸಬೇಕಾಗುತ್ತದೆ. ಇವತ್ತಿನ ದಿವಸ, ತಮ್ಮ ಈ ಒಂದು ವರದಿಯಲ್ಲಿ (ಪುಟ ೪ರಲ್ಲಿ) ಅಕ್ಕಿ, ರಾಗಿ, ಜೋಳ ಇವುಗಳನ್ನು ಅಖಿಲ ಭಾರತ ಸರಾಸರಿ ಉತ್ಪಾದನೆ ಏನಿದೆ ಅದಕ್ಕೆ ಹೋಲಿಕೆ ಮಾಡಿದ್ದೀರಿ. ನನಗೆ ತಿಳಿದ ಹಾಗೆ ನೀವು ಈ ರೀತಿ ಹೋಲಿಕೆ ಮಾಡಿ ಈ ಒಂದು ಅಂಕಿ ಅಂಶಗಳನ್ನು ಕೊಟ್ಟರೆ ಈ ಸದನವನ್ನು ತಪ್ಪುದಾರಿಗೆ ಎಳೆದಂತಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉದಾಹರಣೆಗೆ ಅಕ್ಕಿಯನ್ನೇ ತೆಗೆದುಕೊಳ್ಳುವುದಾದರೆ ನೆರೆ ರಾಜ್ಯಗಳಾದ ಆಂಧ್ರ ಮತ್ತು ತಮಿಳ್ನಾಡಿನಲ್ಲಿ ಎಷ್ಟು ಇಳುವರಿ ಬರುತ್ತಿದೆ ಆ ಅಂಕಿಅಂಶಗಳನ್ನು ಕೊಡತಕ್ಕದ್ದು ಮುಖ್ಯ. ಅದೇ ರೀತಿ ರಾಗಿ ಮತ್ತು ಜೋಳವನ್ನು ತೆಗೆದುಕೊಂಡು ಅದರ ಇಳುವರಿಯನ್ನು ಹೋಲಿಸಿ ನೋಡುವುದಾದರೆ ಆ ದವಸ ಧಾನ್ಯಗಳನ್ನು ಬೆಳೆಯುತಕ್ಕ ಬೇರೆ ಬೇರೆ ರಾಜ್ಯಗಳೇನಿವೆ ಆ ರಾಜ್ಯಗಳಲ್ಲಿ ಬರುತ್ತಿರತಕ್ಕ ಇಳುವರಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನೆಲ್ಲ ನೀವು ಸದನದ ಮುಂದಿಟ್ಟು (ಈ ಅಂಕಿ ಅಂಶಗಳನ್ನು ಇಟ್ಟು) ನಾವು ಪರಿಶೀಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಆಗ ನಮ್ಮ ಒಂದು ನಿರ್ದಿಷ್ಟವಾದ ಅಭಿಪ್ರಾಯವನ್ನು (ನಾವು ಇಡೀ ರಾಷ್ಟ್ರದಲ್ಲಿ ಎಲ್ಲರಿಗಿಂತ ಮುಂದಿದ್ದೇವೆಯೋ ಇಲ್ಲವೇ ಎಂಬುದನ್ನು) ಹೇಳುವುದಕ್ಕೆ ಸಾಧ್ಯವಾಗುತ್ತದೆ. ಅಖಿಲ ಭಾರತದ ಸರಾಸರಿಯಲ್ಲಿ ಅಕ್ಕಿಯನ್ನು ತೆಗೆದುಕೊಳ್ಳುವುದಾದರೆ ಎಲ್ಲಿ ಭತ್ತದ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿಲ್ಲ ಅಲ್ಲಿನ ಕನಿಷ್ಟ ಇಳುವರಿಯನ್ನು ಮತ್ತು ಎಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ ಅದರ ಲೆಕ್ಕವನ್ನು ತೆಗೆದುಕೊಂಡು ಎರಡನ್ನು ಸಮನ್ವಯಗೊಳಿಸಿದ ಅಂಕಿಅಂಶಗಳನ್ನು ಇಡದಿದ್ದರೆ ಅದು ಸಾಧುವಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮ್ಮ ವರದಿಯಲ್ಲಿ ನಾನಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಆದರೆ ನಾನು ಎಲ್ಲ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡದೆ ಪ್ರಮುಖವಾದ ಕೆಲವು ವಿಷಯಗಳ ಮೇಲೆ ಮಾತ್ರ ನನ್ನ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ಏಕೆಂದರೆ ಬಹಳ ಜನ ಸ್ನೇಹಿತರು

ಹಲವಾರು ವಿಚಾರಗಳನ್ನು ಚರ್ಚೆ ಮಾಡುವವರಿದ್ದಾರೆ. ಈ ವರದಿಯಲ್ಲಿ ಸಾಯಿಲ್ ಕನ್ಸರ್ವೇಷನ್ ವಿಚಾರವನ್ನು ಪ್ರಸ್ತಾಪ ಮಾಡಲ್ಪಟ್ಟಿದೆ. ಅದರಲ್ಲಿ ಕೆಲವು ಅಂಕಿಅಂಶಗಳು ಕೊಡಲ್ಪಟ್ಟಿವೆ. ಅವರು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ ಯೋಜನೆ ಮಾಡುವುದಾದರೆ, ೧೩೦೦ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಬಂಡಿಂಗ್ ಹಾಕಬೇಕಾಗಿರುವ ಜಾಗದಲ್ಲಿ ಇಲ್ಲಿಯವರೆಗೆ ಕೇವಲ ೨೨.೫೫ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ಹಾಕಿದ್ದಾರೆ. ಇನ್ನುಳಿದ ಎಲ್ಲ ಪ್ರದೇಶಕ್ಕೂ ಬಂಡಿಂಗ್ ಹಾಕಬೇಕಾದರೆ ಕಡೇಪಕ್ಷ (ಈಗಿನ ದಾಟಿಯಲ್ಲಿ ಕೆಲಸ ಮಾಡಿಕೊಂಡು ಹೋದರೆ) ೪೦ ವರ್ಷಗಳ ಕಾಲ ಹಿಡಿಯುತ್ತದೆ. ಆದುದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಸೂಚನೆ ಕೊಡಬಯಸುವುದೇನೆಂದರೆ ಆದಷ್ಟು ಜಾಗ್ರುತಿ ಈ ಕಾರ್ಯವನ್ನು ಮುಗಿಸುವುದಕ್ಕೆ ಬೇಕಾದ ಸವಲತ್ತುಗಳನ್ನು ಮತ್ತು ಹಣವನ್ನು ಕೊಡಿ. ಇವತ್ತಿನ ದಿವಸ ಸಾಯಿಲ್ ಕನ್ಸರ್ವೇಷನ್ನಿಗಾಗಿ ಕೊಟ್ಟಿರತಕ್ಕ ಹಣ ಬಹಳ ಕಡೆ ದುರ್ವಿನಿಯೋಗವಾಗಿದೆ. ಕೆಲವು ಕಡೆ ಮಾತ್ರ ಆಗಿಲ್ಲ. ಕೆಲವು ಕಡೆ ಲೂಟಿಯಾಗಿದೆ ಎಂದರೆ ತಪ್ಪಾಗುವುದಿಲ್ಲ. ಅದನ್ನು ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದು ಬಹಳ ಪ್ರಮುಖವಾಗಿ ಆಗಬೇಕಾದ ಕೆಲಸ. ಇದು ಆಗದಿದ್ದರೆ ಬರೀ ಮಳೆ ನೀರಿನ ಆಧಾರದ ಮೇಲೆ ವ್ಯವಸಾಯ ಮಾಡತಕ್ಕ ಜನರೇನಿದ್ದಾರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಮಳೆ ಬಂದಾಗ ಮೇಲಿನ ಮಣ್ಣೆಲ್ಲಾ ಕೊಚ್ಚಿಕೊಂಡು ಹೋಗುತ್ತಿರುತ್ತದೆ. ಅದು ಕೊಚ್ಚಿಕೊಂಡು ಹೋಗದ ಹಾಗೆ ಬಂಡಿಂಗ್ ಹಾಕಿ ನೀರನ್ನು ತಡೆಯುವುದು ಬಹಳ ಮುಖ್ಯ. ಇವತ್ತು ಸಾಯಿಲ್ ಕನ್ಸರ್ವೇಷನ್ ಬಂಡಿಂಗ್ ಪ್ರೋಗ್ರಾಂ ಪ್ರಕಾರ ಬಂಡಿಂಗ್ ಹಾಕಿದರೆ ನಮ್ಮ ಕೆಲಸ ಮುಗಿಯಿತು ಎಂದು ಕುಳಿತರೆ ಅವರಿಂದ ರೈತ ಪೂರ್ಣ ಲಾಭ ಪಡೆಯುವುದಕ್ಕೆ ಕಷ್ಟವಾಗುತ್ತದೆ. ತಾವು ಬಂಡಿಂಗ್ ಹಾಕಿದ ಮೇಲೆ ರೈತರಿಗೆ ಡ್ರೈಲ್ಯಾಂಡ್ ಟೆಕ್ನಿಕ್ಸ್ ಅನ್ನು ಹೇಳಿ ಕೊಡಬೇಕಾಗುತ್ತದೆ.

ಅದರ ಜೊತೆಗೆ ಆ ಬಂಡನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಸರಿಯಾದ ತರಪೇತಿ ಕೊಡಬೇಕಾಗುತ್ತದೆ. ಇವೆರಡರ ಕಡೆಗೆ ಸರ್ಕಾರದವರು ಗಮನ ಕೊಡಬೇಕೆಂದು ತಮ್ಮ ಮೂಲಕ ಈ ಸಲಹೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ವರದಿಯಲ್ಲಿ ಕೊಟ್ಟಿರುವ ಪ್ರಕಾರ ವ್ಯವಸಾಯ ಇಲಾಖೆಯವರು ೧೧೧ ಬೇರೆ ಬೇರೆ ಸ್ಕೀಂಗಳನ್ನು ನಡೆಸುತ್ತಿದ್ದಾರೆ. ೧೧೧ ಸ್ಕೀಂಗಳಲ್ಲಿ ಅವರು ಮಾಡಿರತಕ್ಕ ಖರ್ಚನ್ನು ಕೊಟ್ಟಿರತಕ್ಕ ಹಣವನ್ನು ಲೆಕ್ಕಹಾಕಿ ನೋಡುವುದಾದರೆ ೧೯೮೦-೮೧ನೇ ಇಸವಿಯಲ್ಲಿ ಸುಮಾರು ೪೪೪ ರಿಂದ ೪೫೧ ಲಕ್ಷ ರೂಪಾಯಿವರೆಗೆ ಲ್ಯಾಪ್ಸ್ ಆಗಿರುವುದು ಕಂಡುಬರುತ್ತದೆ. ಇದು ಏತಕ್ಕಾಗಿದೆ ? ಈ ರೀತಿ ಲ್ಯಾಪ್ಸ್ ಮಾಡುವುದು ಸರಿಯಾದುದಲ್ಲ. ಕೊಟ್ಟಂಥ ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದು ಬಹಳ ಮುಖ್ಯವಾದುದು. ಆದರೆ ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೇ ಇರುವುದಕ್ಕೆ ಮೊದಲೇ ಹೇಳಿದಹಾಗೆ ಸಾಕಷ್ಟು ಸಿಬ್ಬಂದಿ ಇಲ್ಲದೇ ಇರುವುದೇ ಕಾರಣ ಎಂಬುದನ್ನು ಮನಗಾಣಬೇಕು. ೧೯೮೧-೮೨ನೇ ಇಸವಿಗೆ ಬಂದರೆ ಲ್ಯಾಪ್ಸ್ ಆಗಿರುವ ಹಣ ಸುಮಾರು ೧ ಸಾವಿರ ಲಕ್ಷ ರೂಪಾಯಿಗಳಷ್ಟು ಬರುತ್ತದೆ ಎಂಬ ಭಾವನೆ ನೀವು ಕೊಟ್ಟಿರತಕ್ಕ ವರದಿಯಿಂದ ಕಂಡುಬರುತ್ತದೆ. ಇದು ಸಾಧುವೆ ? ಇಂಥ ಲ್ಯಾಪ್ಸ್ ಅನ್ನು ತಪ್ಪಿಸುವುದಕ್ಕೆ ನೀವು ಕೈಗೊಳ್ಳತಕ್ಕ ಕ್ರಮವಾದರೂ ಏನು ಎಂಬುದನ್ನು ಈ ಸದನಕ್ಕೆ ತಿಳಿಸಬೇಕಾದುದು ಅತಿ ಮುಖ್ಯ. ಲ್ಯಾಂಡ್ ರಿಕ್ಲಮೇಷನ್ ಬಗ್ಗೆ ವರದಿಯಲ್ಲಿ ಕೊಟ್ಟಿದ್ದೀರಿ. ನಮ್ಮ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಗಮನವನ್ನು ಸೆಳೆಯುತಕ್ಕ ಕಾರ್ಯಕ್ರಮವನ್ನಾಗಿ ಇದನ್ನು ಪಾಲನೆ ಮಾಡಬೇಕು. ನಾವು ಪ್ರತಿ ವರ್ಷ ನೀರಾವರಿ ಅನುಕೂಲವನ್ನು ಮಾಡಿಕೊಟ್ಟು ಆ ಮೂಲಕ ನೀರಿನ ಸೌಕರ್ಯವನ್ನು ರೈತರಿಗೆ ಕಲ್ಪಿಸಿಕೊಡುತ್ತಿದ್ದೇವೆ. ನೀರಾವರಿ ವ್ಯವಸಾಯವನ್ನು ಮಾಡುವಾಗ ತಮಗೆ ಗೊತ್ತಿರುವ ಹಾಗೆ ಸಲಿನಿಟಿ ಮತ್ತು ಆಲ್ಕಿನ್ ಸಮಸ್ಯೆ ಹೆಚ್ಚಾಗುತ್ತಾ ಬರುತ್ತದೆ. ತಾವು ಕೊಟ್ಟಿರತಕ್ಕ ಅಂಕಿಅಂಶದ ಪ್ರಕಾರ ೨೧೨ ಹೆಕ್ಟೇರಿನಲ್ಲಿ ರೀಕ್ಲೇಮ್ ಮಾಡಿದ್ದೀರಿ. ಅದಕ್ಕೆ ೭.೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ನೀರಾವರಿ ವ್ಯವಸಾಯ ಮಾಡುವಾಗ ಪ್ರತಿ ದಿವಸ ಪ್ರತಿ ಗಂಟೆಯಲ್ಲೂ ಸಲಿನಿಟಿ ಮತ್ತು ಆಲ್ಕಿನ್ ಸಮಸ್ಯೆ ಬರುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಕ್ರಾಪಿಂಗ್ ಪ್ಯಾಟರ್ನನ್ನು ಹೆಚ್ಚಿನ ರೀತಿಯಲ್ಲಿ ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ ತರಬೇಕಾಗುತ್ತದೆ. ಅದನ್ನು ಕೂಡ ಸತ್ವಪೂರ್ಣವಾಗಿ ಮಾಡುವುದಕ್ಕೆ ಇಲಾಖೆಯವರಿಗೆ ಸಾಕಷ್ಟು ಸಿಬ್ಬಂದಿಯನ್ನು ಕೊಟ್ಟು ಶೀಘ್ರವಾಗಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಮತ್ತು ರೈತರಲ್ಲಿ ಸರಿಯಾದ ತಿಳುವಳಿಯನ್ನು ಉಂಟು ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಈ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡು

ತ್ತೇನೆ. ದ್ವಿದಳಧಾನ್ಯಗಳ ಬಗ್ಗೆ ಹೇಳಬೇಕೆಂದರೆ ತಮಗೆ ಗೊತ್ತಿರುವಹಾಗೆ ದ್ವಿದಳಧಾನ್ಯಗಳ ಅವಶ್ಯಕತೆ ನಮ್ಮ ಬಡರೈತರಿಗೆ ಅದರಲ್ಲೂ ಹಳ್ಳಿಗಾಡಿನ ಜನರಿಗೆ ಬಹುಮುಖ್ಯವಾಗಿ ಇದೆ. ಬಡಜನರಿಗೆ ಬೇಕಾದ ಪ್ರೋಟೀನ್ ಇರತಕ್ಕದ್ದು ಈ ದ್ವಿದಳ ಧಾನ್ಯದಲ್ಲಿ. ಎಲ್ಲರೂ ಕುರಿ ಮಾಂಸ, ಕೋಳಿ ಮಾಂಸ ತಿನ್ನುವುದು ದುಸ್ಸಾಧ್ಯ. ನಮ್ಮ ರಾಜ್ಯದಲ್ಲಿ ಎಷ್ಟು ಜನರಿಗೆ ಮಾಂಸ ತಿನ್ನತಕ್ಕ ಶಕ್ತಿ ಇದೆ ? ಮಾಂಸ ತಿನ್ನಲು ಶಕ್ತಿ ಇಲ್ಲದಿರುವ ಜನರಿಗೆ ಅಥವಾ ಮಾಂಸವನ್ನು ತಿನ್ನದೇ ಇರತಕ್ಕ ಜನರಿಗೆ ಪ್ರೋಟೀನ್ ದೊರಕತಕ್ಕ ಸಾಧನ ಎಂದರೆ ಈ ದ್ವಿದಳ ಧಾನ್ಯಗಳು. ಆದರೆ ಈ ದ್ವಿದಳ ಧಾನ್ಯದ ಅಭಿವೃದ್ಧಿ ಕಾರ್ಯ ನಮ್ಮ ರಾಜ್ಯದಲ್ಲಿ ಅಷ್ಟಾಗಿ ನಡೆದಿಲ್ಲ ಎಂದರೆ ತಪ್ಪಾಗಲಾರದು. ಈ ಕಾರ್ಯ ಬಹಳ ಮಂದಗತಿಯಿಂದ ಸಾಗುತ್ತಿದೆ. ಇವತ್ತು ಕೃಷಿ ವಿಶ್ವವಿದ್ಯಾನಿಲಯದವರು ಹಲವಾರು ಒಳ್ಳೆಯ ತಳಿಗಳನ್ನು ಕಂಡುಹಿಡಿದಿದ್ದಾರೆ. ಆ ತಳಿಗಳ ವಿಚಾರದಲ್ಲಿ ಒಂದು ಅಂಶ ಕೂಡ ಈ ವರದಿಯಲ್ಲಿ ತಿಳಿಸಿಲ್ಲ. ಇದಕ್ಕೆ ಕಾರಣ ಏನೋ ಗೊತ್ತಾಗಲಿಲ್ಲ. ನಾನು ಸ್ವಲ್ಪ ಮಟ್ಟಿನ ವ್ಯವಸಾಯಗಾರನಾಗಿರುವುದರಿಂದ ಈ ಬಗ್ಗೆ ಸ್ವಲ್ಪ ತಿಳಿದು ಕೊಂಡಿದ್ದೇನೆ. ವಿಶ್ವವಿದ್ಯಾನಿಲಯದವರು ಕಂಡುಹಿಡಿದಿರುವ ಒಳ್ಳೆಯ ತೊಗರಿ ತಳಿಯನ್ನು ತೆಗೆದು ಕೊಂಡು ಹೋಗಿ ಬೇಸಾಯ ಮಾಡಿ ಈ ಸಲ ೩೦ ಕ್ವಿಂಟಾಲ್ ತೊಗರಿಯನ್ನು ಬೆಳೆದಿದ್ದೇನೆ. ಚೆನ್ನಾಗಿ ಇಳುವರಿ ಬಂದಿದೆ. ಅದನ್ನು ಎಷ್ಟು ಬೆಲೆಗೆ ಮಾರಿದ್ದೇನೆ ಎಂಬ ಬಗ್ಗೆ ವಿವರಣೆ ಕೊಡುತ್ತೇನೆ. ರೈತನಿಗೆ ಸಿಗಬೇಕಾದ ಬೆಲೆ ಸಿಗದೆ ರೈತನ ಆರ್ಥಿಕ ಸ್ಥಿತಿ ಏನಾಗಿದೆ ಎಂಬುದನ್ನು ಮುಂದೆ ಹೇಳುತ್ತೇನೆ. ಒಳ್ಳೆಒಳ್ಳೆಯ ತಳಿಗಳನ್ನು ವಿಶ್ವವಿದ್ಯಾನಿಲಯದವರು ಮತ್ತು ಇಲಾಖೆಯವರು ಕಂಡುಹಿಡಿದು ಕೆಲಸ ಮಾಡುತ್ತಿದ್ದರೂ ಅದರ ಅಭಿವೃದ್ಧಿಯಾಗುತ್ತಿಲ್ಲ. ಅದನ್ನು ಮಾಡಬೇಕು ಮೊದಲೇ ಹೇಳಿದಹಾಗೆ ದ್ವಿದಳ ಧಾನ್ಯಗಳ ಮುಖಾಂತರವೇ ನಮ್ಮ ಬಡಜನರು ಪ್ರೋಟೀನನ್ನು ತೆಗೆದುಕೊಳ್ಳಬೇಕಾಗುತ್ತದೆ. ತಾವು ವಿಶ್ವ ಆರೋಗ್ಯ ಸಂಸ್ಥೆಯ ವರದಿಯನ್ನು ನೋಡುವುದಾದರೆ ನಮ್ಮ ದೇಶದಲ್ಲಿ ಲಕ್ಷಾಂತರ ಮಕ್ಕಳು ಕುರುಡರಾಗುತ್ತಿದ್ದಾರೆ, ಅಂಗವಿಕಲರಾಗುತ್ತಿದ್ದಾರೆ. ಇದಕ್ಕೆ ಕಾರಣ ಅವರಿಗೆ ಸಾಕಷ್ಟು ಸತ್ವಪೂರ್ಣವಾದ ಆಹಾರದ ಕೊರತೆ ಸತ್ವಪೂರ್ಣ ಆಹಾರದ ಮೂಲ ಎಂದರೆ ಈ ದ್ವಿದಳ ಧಾನ್ಯಗಳು. ಆದ್ದರಿಂದ ಈ ದ್ವಿದಳ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ವ್ಯವಸಾಯ ಶಿಕ್ಷಣ ಮತ್ತು ತರಬೇತಿ ವಿಚಾರದಲ್ಲಿ ಕೆಲವು ವರದಿಗಳನ್ನು ಇಲ್ಲಿ ಕೊಟ್ಟಿದ್ದಾರೆ ೧೦೦ಕ್ಕೆ ೮೦ ಭಾಗ ರೈತರಿರತಕ್ಕ ಈ ರಾಷ್ಟ್ರದಲ್ಲಿ, ಈ ರಾಜ್ಯದಲ್ಲಿ ರೈತರಿಗೆ ಸಂಬಂಧಿಸಿದ ತರಬೇತಿ ಕೇಂದ್ರಗಳು ವ್ಯವಸಾಯ ತಂತ್ರವನ್ನು ಪ್ರಚಾರ ಮಾಡತಕ್ಕ ಸಂಸ್ಥೆಗಳು ಎಷ್ಟಿರಬೇಕು ಎಂಬುದನ್ನು ಪರಿಶೀಲನೆ ಮಾಡಿದರೆ ಈಗಿರತಕ್ಕದ್ದು ಬಹಳ ಕಡಿಮೆ ಎಂಬ ವಿಚಾರ ನಮ್ಮ ಗಮನಕ್ಕೆ ಬರುತ್ತದೆ. ಇರತಕ್ಕ ಶಾಲೆಗಳಲ್ಲೂ ಕೂಡ ಸರಿಯಾದ ಕಾರ್ಯಕ್ರಮಗಳಿಲ್ಲವೆಂಬ ಅಂಶವನ್ನು ವಿಷಾದದಿಂದ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ವರದಿಯಲ್ಲಿ ಕೊಟ್ಟಿರುವ ಪ್ರಕಾರ ನಮ್ಮ ರಾಜ್ಯದಲ್ಲಿ ರೂರಲ್ ಡೆವಲಪ್ಮೆಂಟ್ ಟ್ರೈನಿಂಗ್ ಸೆಂಟರ್‌ಗಳು ೫ ಇವೆ ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್ ೮ ಇವೆ ವ್ಯವಸಾಯ ಶಾಲೆಗಳು ೧೬ ಇವೆ. ಸ್ವಾಮಿ, ಎಲ್ಲದರ ವರದಿಯನ್ನು ಪರಿಶೀಲನೆ ಮಾಡಿ ಅಂಕಿಅಂಶಗಳನ್ನು ಜೊತೆಗೂಡಿ ನಾವು ನೋಡುವುದಾದರೆ ಸುಮಾರು ೪೦–೫೦ ಸಾವಿರ ಜನರಿಗೆ ವ್ಯವಸಾಯ ಶಾಲೆಗಳಲ್ಲಿ ೧೦ ತಿಂಗಳ ಕೋರ್ಸ್ ನಡೆಯುತ್ತಿದೆ. ಇನ್ನು ಫಾರ್ಮರ್ಸ್ ಟ್ರೈನಿಂಗ್ ಸೆಂಟರ್‌ಗಳು ಮತ್ತು ರೂರಲ್ ಡೆವಲಪ್ಮೆಂಟ್ ಟ್ರೈನಿಂಗ್ ಸೆಂಟರ್‌ಗಳಲ್ಲಿ ೫–೧೦ ದಿನಗಳ ಕೆಲವು ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದಾರೆ.

ಇವೆಲ್ಲದರ ಅಂಕಿಸಂಖ್ಯೆಗಳನ್ನು ತೆಗೆದುಕೊಂಡರೂ ಸಹ ಪ್ರತಿ ವರ್ಷ ನಮ್ಮ ರೈತರಿಗೆ ಕೊಡು ತ್ತಿರುವ ವ್ಯವಸಾಯದ ಬೋಧನೆ ಏನಿದೆ ; ತಂತ್ರಜ್ಞಾನದ ಬೋಧನೆ ಏನಿದೆ ಅದನ್ನು ಪರಿಶೀಲನೆ ಮಾಡಿದರೆ ೪೦ ರಿಂದ ೫೦ ಸಾವಿರ ಒಳಗೆ ಬರುತ್ತೆ. ಆದರೆ, ಈ ರಾಜ್ಯದ ರೈತರ ಸಂಖ್ಯೆ ಎಷ್ಟು ? ನೀವು ನಡೆಸುತ್ತಿರುವ ಕಾರ್ಯಕ್ರಮ ಏನೇನೂ ಸಾಕಾಗುವುದಿಲ್ಲ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ತಮ್ಮ ಮೂಲಕ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ ರೈತರ ತರಬೇತಿ ಕೇಂದ್ರಗಳನ್ನು ಮತ್ತು ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರಗಳನ್ನು ಅತ್ಯಂತ ಹೆಚ್ಚಿನ ರೀತಿಯಲ್ಲಿ ತೆರೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸೂಚಿಸುತ್ತೇನೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ೧೬ ವ್ಯವಸಾಯದ ಶಾಲೆಗಳು ಇವೆ. ೧೯೬೬ನೇ ಇಸವಿಯಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಕನಿಷ್ಠ ಪಕ್ಷ ಒಂದೊಂದು ತಾಲ್ಲೂಕಿಗೆ ವ್ಯವಸಾಯ ಶಾಲೆ ಕೊಡಬೇಕೆಂದು ಮಾಡಿದ್ದರೂ ಸಹ ೭ ವರ್ಷ ಗಳು ಕಳೆದರೂ ಕೂಡ ಕನಿಷ್ಟ ಪಕ್ಷ ಪ್ರತಿಯೊಂದು ಜಿಲ್ಲೆಗಳಲ್ಲಿ ಒಂದೊಂದು ಕೃಷಿ ಶಾಲೆಗಳನ್ನು ತೆರೆಯಲಿಲ್ಲ. ಇದರಿಂದ ಕೃಷಿ ವಿದ್ಯಾಭ್ಯಾಸದ ಬಗ್ಗೆ ಸರ್ಕಾರಕ್ಕೆ ಇರತಕ್ಕ ನಿಷ್ಠೆ ಎಷ್ಟೆಂಬುದು

ಗೊತ್ತಾಗುತ್ತದೆ. ಸ್ವಾಮಿ, ವ್ಯವಸಾಯ ಪ್ರಧಾನವಾಗಿರತಕ್ಕಂಥ ನಮ್ಮ ರಾಜ್ಯದಲ್ಲಿ ಕನಿಷ್ಟ ಪಕ್ಷ ಒಂದು ತಾಲ್ಲೂಕಿಗೆ ಒಂದರಂತೆ ಕೃಷಿ ಶಾಲೆಗಳನ್ನು ತೆಗೆಯುವಂತಾದ್ದು ಬಹಳ ಮುಖ್ಯ. ಸರ್ಕಾರ ಹಣದ ಕೊರತೆಯಿದೆ ಎಂದು ಹೇಳಬಹುದು ; ಈ ಶಾಲೆಗಳಿಗಾಗಿ ಸುಮಾರು ೫-೬ ಕೋಟಿ ರೂಪಾಯಿಗಳು ಆಗಬಹುದು. ಅವುಗಳನ್ನು ನಡೆಸುವುದಕ್ಕೆ ಕ್ಯಾಪಿಟಲ್ ಎಕ್ಸ್‌ಪೆಂಡೀಚರ್ ೧೦-೧೨ ಕೋಟಿಯಾಗಬಹುದು. ಇಷ್ಟೊಂದು ಹಣ ಖರ್ಚು ಮಾಡಿದರೂ ಬರತಕ್ಕಂಥ ಅನುಕೂಲ ಏನಿದೆ ಅದು ಬಹಳ ಅಸಾಧಾರಣವಾದಂತಾದ್ದು. ಈ ರೀತಿ ಶಾಲೆಗಳನ್ನು ತೆರೆಯುವುದರಿಂದ ರೈತನಿಗೆ ಬೇಕಾದಂತ ತಾಂತ್ರಿಕ ಜ್ಞಾನವನ್ನು ಪ್ರಸಾರ ಮಾಡುವುದಕ್ಕೆ, ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಈ ಸಮಯದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕೃಷಿ ಶಾಲೆಗಳಲ್ಲಿ ಕೃಷಿಯ ಬಗ್ಗೆ ಭೋದನೆ ಮಾಡುವುದರ ಜೊತೆಗೆ ರೈತನಿಗೆ ಬೇಕಾದಂತ ಹಲವಾರು ವಿಷಯಗಳಲ್ಲಿ ತಾಂತ್ರಿಕ ಜ್ಞಾನವನ್ನು ಸಹ ಭೋದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ತರಬೇತಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಸಾವಿರಾರು ನೀರಾವರಿ ಪಂಪು ಸೆಟ್ಟುಗಳನ್ನು ಪ್ರಾರಂಭ ಮಾಡಿದ್ದೇವೆ. ವಿದ್ಯುಚ್ಛಕ್ತಿ ಇಲ್ಲದೇ ಇರುವ ಕಡೆ ಡೀಸಲ್ ಇಂಜಿನ್ ಉಪಯೋಗಿಸಿಕೊಂಡು ನೀರಾವರಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ. ಹಳ್ಳಿಗಾಡಿನಲ್ಲಿ ಪಂಪುಸೆಟ್ಟುಗಳು ಕೆಟ್ಟುಹೋದರೆ, ರೈತರು ಹತ್ತಾರು ಮೈಲಿಗಳ ದೂರ ಯಂತ್ರಗಳನ್ನು ತಂದು ಸರಿಪಡಿಸಿಕೊಂಡು ಹೋಗುವಂತ ದೃಶ್ಯಗಳನ್ನು ನಾವು ನೋಡುತ್ತಿದ್ದೇವೆ. ಸ್ವಾಮಿ, ಇಲ್ಲಿ ಶಿವಲಿಂಗೇಗೌಡರು ಇದ್ದಾರೆ ; ಕನಕಪುರ ತಾಲ್ಲೂಕಿನ ರೈತರು ದಿನಬೆಳಗಾದರೆ ಪಂಪು ಸೆಟ್ಟುಗಳ ರಿಪೇರಿಗಾಗಿ ಬೆಂಗಳೂರಿಗೆ ಬರಬೇಕಾಗುತ್ತದೆ. ಡೀಸೆಲ್ ಇಂಜಿನ್‌ಗೆ ಸಂಬಂಧಪಟ್ಟ ಬಿಡಿಭಾಗಗಳ ಬಗ್ಗೆಯೂ ಕೂಡ ತೊಂದರೆ ಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನೀರಾವರಿ ಪಂಪುಸೆಟ್ಟುಗಳ ದುರಸ್ತಿ ಮಾಡುವ ತರಬೇತಿ, ನೇಗಿಲು ಇನ್ನಿತರ ವ್ಯವಸಾಯದ ಉಪಕರಣಗಳನ್ನು ದುರಸ್ತಿ ಮಾಡುವ ತರಬೇತಿ ಅಲ್ಲದೆ, ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ಕುಡಿಯುವ ನೀರನ್ನು ಕೊಡುವುದಕ್ಕಾಗಿ ಹಾಕಿರುವಂತ ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸುವ ತರಬೇತಿ ಕೊಡುವಂತ ಅವಕಾಶಗಳನ್ನು ಕಲ್ಪಿಸಿಕೊಟ್ಟರೆ ಬಹಳ ಉಪಕಾರವಾಗುತ್ತದೆಂದು ತಮ್ಮ ಮುಖಾಂತರ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಹಳ್ಳಿಗಾಡಿನಲ್ಲಿ ಬಡಗಿಗಳು ಸಿಗುವುದು ದುರ್ಲಭವಾಗಿದೆ. ಮೇಜು, ಕುರ್ಚಿಗಳು ಬೇಕಾದರೆ ಬೆಂಗಳೂರಿನಿಂದ ಕೊಂಡು ಕೊಂಡು ಹೋಗುವಂತ ಪರಿಸ್ಥಿತಿ ಇದೆ.

ಶ್ರೀ ಟಿ. ಚೌಡಯ್ಯ.—ಸ್ವಾಮಿ, ಮೇಜು ಕುರ್ಚಿ ಇರಲಿ ; ನೇಗಿಲು, ನೊಗ ಮಾಡುವುದಕ್ಕೇ ಇಲ್ಲ

ಶ್ರೀ ಎಂ. ವಿ ರಾಜಶೇಖರನ್.—ಮಾನ್ಯ ಚೌಡಯ್ಯನವರು ಹೇಳಿದಹಾಗೆ ರೈತನಿಗೆ ಅಗತ್ಯವಾಗಿ ಬೇಕಾದಂತ ಸಲಕರಣೆಗಳನ್ನು ಪಡೆಯಲು ಪಟ್ಟಣಗಳಿಗೆ ಹುಡುಕಿಕೊಂಡು ಬರುವುದನ್ನು ನಾವು ನೋಡುತ್ತಿದ್ದೇವೆ. ಇದನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ಬಡ ರೈತನಿಗೆ ಬಾಯಿ ಇಲ್ಲ ; ಕೇಳತಕ್ಕಂಥ ಶಕ್ತಿಯನ್ನು ಕಳೆದುಕೊಂಡಿದ್ದಾನೆಂದು ಇಷ್ಟು ತುಚ್ಛವಾಗಿ ನೋಡುವುದಾದರೆ, ನಾನು ಈ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ರಾಷ್ಟ್ರದಲ್ಲಿ ರೈತರು ಕ್ರಾಂತಿ ಮಾಡತಕ್ಕಂಥ ಕಾಲ ಬಹಳ ದಿನ ಉಳಿದಿಲ್ಲ ಎಂಬುದನ್ನು ಈ ಸರ್ಕಾರ ಮನಗಾಣಬೇಕು. ಅದರ ಒಂದು ಸೂಚನೆ ಈಗಾಗಲೇ ಕಂಡುಬರುತ್ತಿದೆ. ಅದಕ್ಕೆ ಹೊಣೆ ಯಾರು ? ಈ ಸರ್ಕಾರವೇ ಹೊಣೆ ಎಂದು ಹೇಳುವಂತ ಮೂರ್ಖತನಕ್ಕೆ ನಾನು ಹೋಗುವುದಿಲ್ಲ ; ಗುಂಡೂರಾಯರು ಮತ್ತು ಶ್ರೀಕಂಠಯ್ಯನವರೇ ಕಾರಣರು ಎನ್ನುವ ಮೂರ್ಖತನಕ್ಕೆ ನಾನು ಹೋಗುವುದಿಲ್ಲ. ನಾವೆಲ್ಲರೂ ಕಾರಣರಾಗಿದ್ದೇವೆ. ಇವತ್ತಿನ ದಿವಸ ರೈತರ ಸಮಸ್ಯೆಗಳ ಬಗ್ಗೆ ಸಿಗಬೇಕಾದ ಪುರಸ್ಕಾರ ಸಿಗಬೇಕಾದ ಪ್ರಾಧಾನ್ಯತೆ ಸಿಗುತ್ತಿಲ್ಲ. ಅದಕ್ಕೋಸ್ಕರ ಪ್ರತಿಯೊಂದು ತಾಲ್ಲೂಕಿಗೆ ಒಂದರಂತೆ ಕೃಷಿ ಶಾಲೆಗಳನ್ನು ತೆರೆದು, ಕೃಷಿ ಶಾಲೆಗಳಲ್ಲಿ ತರಬೇತಿ ಕೊಡುವಂತ ಅವಕಾಶಗಳನ್ನು ಕಲ್ಪಿಸಿಕೊಡುವಂತ ದೊಡ್ಡ ಮನಸ್ಸನ್ನು ಸರ್ಕಾರದವರು ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯಿಸಲು ಇಷ್ಟಪಡುತ್ತೇನೆ.

ಇನ್ನು ತಮ್ಮ ವರದಿಯಲ್ಲಿ ಫಾರಂ ಮ್ಯಾನೇಜ್‌ಮೆಂಟ್ ಸ್ಟಡೀಸ್ ಬಗ್ಗೆ ಪುಟ ೫೫ರಲ್ಲಿ ಬರೆದಿದ್ದೀರಿ. ಇದು ಬಹಳ ಮುಖ್ಯವಾದುದು. ೧೯೫೮-೫೯ರಲ್ಲಿ ಮೊಟ್ಟ ಮೊದಲಿಗೆ ಈ ತರಹ ಒಂದು ಸಂಸ್ಥೆ ಕಟ್ಟಬೇಕೆಂದು ಸರ್ಕಾರದವರು ಈ ವಿಚಾರದಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಅದನ್ನು ನಡೆಸಿಕೊಂಡು ಬರುತ್ತಿದ್ದರು. ಇದರ ಮುಖ್ಯ ಉದ್ದೇಶವನ್ನು ವರದಿಯಲ್ಲಿ ಈ ರೀತಿ ಬರೆದಿದ್ದೀರಿ.

11-30 A. M.

In your anual report you have stated about the farm management studies. The main objective of the farm mangement studies as given in this book are.--

a) to work out cost cultivation per hectare and cost of producion per quintal of the important principal crops of the State.

b) to study physical input, output and cost return relationship of commodity crop enterprise.

The results of the studies are helpful in formulating policy decisions, fixing remunerative prices for farmers, advisory work such as enabling the farmers to use the farm to the best advantage taking into consideration their limited resources like land, labour, inputs and obtain maximum profits. ಅಧ್ಯಕ್ಷರೆ ತಮ್ಮ ಮುಖಾಂತರ ಒಂದು ಪ್ರಶ್ನೆಯನ್ನು ನಾನು ಸರ್ಕಾರಕ್ಕೆ ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದನ್ನು ತಾವು ಏನು ಮಾಡಿದ್ದೀರಿ, ಇದು ಬಹಳ ಸಂತೋಷ ಆದರೆ ಇದರ ಮೂಲಕ ಇಲ್ಲಿಯವರೆಗೆ ಯಾವ ಯಾವ ಪಾಲಿಸಿಗಳನ್ನು ಬದಲಾವಣೆ ಮಾಡಿದ್ದೀರಾ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕು. ಸ್ವಾಮಿ, ಈದರ ಜೊತೆಗೆ to work out cost of cultivation p r hectare and cultavation per h ctare and cost of production per quintal of important principal crops of the State. ಅದನ್ನು ಸ್ವಾಮಿ ನಾನು ತಮ್ಮ ಮೂಲಕ ಈ ಸರ್ಕಾರಕೆ ಒತ್ತಾಯತರಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ರಾಗಿಯನ್ನು ಬೆಳೆಯುತಕ್ಕ ರೈತನಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಾಗುತ್ತದೆ. ಪರ್ ಹೆಕ್ಟೇರ್ ಮತ್ತು ಪರ್ ಕ್ವಿಂಟಾಲ್ ಭತ್ತ ಬೆಳೆಯುತ್ತಕ್ಕ ರೈತನಿಗೆ ಕಾಸ್ಟ್ ಆಫ್‌ಪ್ರೊಡಕ್ಷನ್ ಎಷ್ಟಾಗಿದೆ. ಕಬ್ಬು ಬೆಳೆಯುತಕ್ಕವನಿಗೆ ಅವರೆ ಬೆಳೆಯುತಕ್ಕವನಿಗೆ ಎಲ್ಲಾ ಧಾನ್ಯಗಳ ವಿಚಾರದಲ್ಲಿ ಮಾಹಿತಿಯನ್ನು ಏನು ಈ ಒಂದು ಸ್ಕೀಮ್ ಮುಖಾಂತರ ತೆಗೆದುಬಿಟ್ಟಿದ್ದೀರಿ ಅದನ್ನು ಸರ್ಕಾರದವರು ಈ ಸದನದ ಮುಂದೆ ಇಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡಲಿಕ್ಕೆ ಇಷ್ಟಪಡುತ್ತೇನೆ ಅದನ್ನು ಈ ಸದನದ ಮುಂದೆ ಇಡತಕ್ಕ ಮನಸ್ಸು ಇದೆಯೇ ಎನ್ನುವುದನ್ನು ತಿಳಿಸಬೇಕು. ಇವೊತ್ತಿನ ದಿವಸ ನಮ್ಮ ರೈತ ಅವನು ಬೆಳೆಯುತಕ್ಕ ಧಾನ್ಯಗಳನ್ನು ವಿಚಾರದಲ್ಲಿ ಆಗತಕ್ಕ ಖರ್ಚು ಆದಾಯವನ್ನು ಲೆಕ್ಕ ಇಟ್ಟಿದ್ದೇ ಆದರೆ ಆ ರೈತ ವ್ಯವಸಾಯ ಮಾಡಲಿಕ್ಕೆ ಆಗುವುದಿಲ್ಲ. ವ್ಯವಸಾಯವನ್ನು ಬಿಟ್ಟು ಬೇರೆ ಕೆಲಸಕ್ಕೆ ಹೋಗಲಿಕ್ಕೆ ಸಾಧ್ಯವಾಗುತ್ತದೆ. ಇವೊತ್ತಿನ ದಿವಸ ಅವನಿಗೆ ಬಂದಿರತಕ್ಕ ಕಷ್ಟ ಏನು ಎಂದರೆ ಆ ಲೆಕ್ಕ ಇರತಕ್ಕ ವ್ಯವಧಾನವನ್ನು ಆತ ಇಟ್ಟುಕೊಂಡು ಬಂದಿಲ್ಲ. ಈ ವ್ಯವಧಾನವನ್ನು ಜಾರಿಗೆ ತಂದಿದ್ದೀರಿ, ತಾವು ಎಲ್ಲಾ ಅಂಕಿಅಂಶಗಳನ್ನು ಈ ವರದಿಯನ್ನು ನಮ್ಮ ಮುಂದೆ ಮಂಡನೆ ಮಾಡಿದ್ದೀರಾ. ಅದಕ್ಕಾಗಿ ಹಣವನ್ನು ಬಯಸಿದ್ದೀರಾ, ಈ ವರದಿ ಚರ್ಚೆಯಾಗಿ ಈ ಸದನ ಹಣವನ್ನು ಮಂಜೂರು ಮಾಡುವ ಮೊದಲು ಈ ಎಲ್ಲಾ ಅಂಶಗಳನ್ನು ಈ ಸದನದ ಮುಂದೆ ಇಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ತರಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಈ ವರದಿಯಲ್ಲಿ ತರಬೇತಿ ವಿಚಾರದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಇದು ಬಹಳ ಸ್ವಾಗತಾರ್ಹ. ರೂರಲ್ ಯೂತ ಟ್ರೈನಿಂಗ್ ಸೆಂಟರ್ ಪ್ರೋಗ್ರಾಮ್ ಇದನ್ನು ಯಾರು ಯೋಚನೆ ಮಾಡಿ ತಂದಿದ್ದೀರಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಸಾವಿರಾರು, ಲಕ್ಷಾಂತರ, ಯುವಕರು ವಾಸ ಮಾಡುತ್ತಿದ್ದಾರೆ. ಇದರಿಂದ ಸತ್ವಪೂರ್ಣ ವ್ಯವಸಾಯ ತಂತ್ರಜ್ಞಾನವನ್ನು ವಯಸ್ಸಾಗಿರತಕ್ಕ ರೈತರಲ್ಲಿ ಮೂಡಿಸಲು ಆ ಮೂಲಕ ಅವರ ಜ್ಞಾನ ಭಂಡಾರ ಹೆಚ್ಚಿಸಲು ಈ ಯುವಕರನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಈ ಬಂದಿರತಕ್ಕ ಕಾರ್ಯಕ್ರಮ ಏನಿದೆ ಅದು ಬಹಳ ಸ್ವಾಗತಾರ್ಹ ಅಂಥ ಹೇಳುವುದರ ಜೊತೆಗೆ ಇದಕೆ ಇವರು ಕೊಟ್ಟಿರತಕ್ಕ ಹಣ ಏಷ್ಟಕ್ಕೂ ಸಾಲದು ಅಂಥ ಮಾನ್ಯ ಮಂತ್ರಿಗಳಗಮನಕ್ಕೆ ತರಲಿಕೆ

ಇಷ್ಟಪೂಡುತ್ತೇನೆ. ಈಗ ಇರತಕ್ಕ ೧೭೫ ತಾಲ್ಲೂಕುಗಳಿಗೆ ಒಂದು ವರ್ಷಕ್ಕೆ ಇಡೀ ರಾಜ್ಯಕ್ಕೆ ಒಂದ ಲಕ್ಷರೂಪಾಯಿ ಈ ಕಾರ್ಯಕ್ರಮಕ್ಕೆ ಇಡಲಾಗಿದೆ. ಮಾನ್ಯ ಶ್ರೀಕಂಠಯ್ಯನವರು ರೈತರ ಮಕ್ಕಳು ಈ ಕಾರ್ಯಮದಲ್ಲಿ ಇವರು ಇಟ್ಟಿರತಕ್ಕ ನಿಷ್ಟೆ ಎಷ್ಟು ಎಂದು ತೋರಿಸಿಕೊಡುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು. ಅಧ್ಯಕ್ಷರೆ, ನಾನು ಈ ವಿಚಾರದಲ್ಲಿ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ತರತಕ್ಕದ್ದು ಇಷ್ಟೆ ಕಡೆಯಪಕ್ಷ ೧೯೮೨-೮೩ನೇ ಸಾಲಿನಿಂದಲಾದರೂ ಪ್ರತಿ ತಾಲ್ಲೂಕಿಗೂ ೫ ಸಾವಿರ ರೂಪಾಯಿ ಪ್ರಕಾರ ಹಣವನ್ನು ಒದಗಿಸಬೇಕು. ನಾನು ಕಲೆಕ್ಟ್ ಮಾಡಿರತಕ್ಕ ಅಂಕಿಅಂಶದ ಪ್ರಕಾರ ೧೧ ಲಕ್ಷ ೨೫ ಸಾವಿರ ರೂಪಾಯಿ ಬೇಕಗುತ್ತದೆ. ಅಷ್ಟು ಹಣಕ್ಕೆ ರಾಜ್ಯ ಸರ್ಕಾರ ಮಂಜೂರು ಮಾಡಿ. ಈ ಯೋಜನೆಯನ್ನು ತಾವು ಏನು ತಂದಿದ್ದೀರಿ. ಇದು ಸತ್ವಪೂರ್ಣವಾಗಿ ನಡೆದು ಇದರ ಪೂರ್ಣ ಲಾಬ ನಮ್ಮ ರಾಜ್ಯದ ರೈತರಿಗೆ ಸಿಕ್ಕುವಂತಾಗಬೇಕೆಂದು ನಾನು ಬಯಸುತ್ತೇನೆ. ಸ್ವಾಮಿ, ಇನ್ನು ಈ ವರದಿಯಲ್ಲಿ ಲೋಕಲ್ ಮನ್ಯೂರಿಯಲ್ ರಿಸೋರಸಸ್ ವಿಚ ರದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇವೊತ್ತಿನ ದಿವಸ ಗೊಬ್ಬರದ ಬೆಲೆ ಆಕಾಶಕ್ಕೆ ಏರುತ್ತಿದೆ. ಅದಗ ನಿಯಂತ್ರಣ ಮಾಡಲಿಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ. ಅದರ ಬಗ್ಗೆ ನಿಜವಾದ ಅಂಶ ಏನೆಂದರೆ, ಈ ಎಲ್ಲಾ ಗೊಬ್ಬರಗಳಿಗೂ ಮೂಲಭೂತ ಏನಿದೆ ಎಲ್ಲಾ ಆಯಿಲ್ ರಿಸೋರ್ಸ್ ಮೇಲೆ ನಿಂತಿದೆ. ಇವೊತ್ತು ಈ ಲೋಕಲ್ ಮೆನ್ಯೂರಿಯಲ್ ರಿಸೋರಸಸ್ ವಿಚಾರ ಏನಿದೆ ಇದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡತಕ್ಕದ್ದು. ಹೆಚ್ಚು ಬೆಳೆಸತಕ್ಕದ್ದು ಬಹಳ ಮುಖ್ಯ ಇದೆ. ಅದರೆ-ಕಡೆ ತಾವು ಹೆಜ್ಜೆ ಇಟ್ಟಿದ್ದೀರಾ. ಆದರೆ ಇದು ಸಾಲುವುದಿಲ್ಲ. ಈ ಕಡೆ ಹೆಚ್ಚು ಗಮನ ಕೊಡ ಬೇಕೆಂದು ಹೇಳುತ್ತೇನೆ- ಇನ್ನು ಗೊಬ್ಬರಗ ವಿಚಾರದಲ್ಲಿ ಅಂಕಿಅಂಶಗಳನ್ನು ಕೊಟ್ಟಿದ್ದೀರಾ ಇನ್ನು ೩೭ನೇ ಪೇಜಿನಲ್ಲಿ ಬ್ಲೂ ಗ್ರೀನ್ ಆಲ್ಗೆ ಅಂಡ್ ಅಜೋಲಾ ಬಗ್ಗೆ ಹೇಳಿದ್ದೀರಿ. ಪ್ರೋಗ್ರಾಂ ಇನ್ ಆದು ಟನ್ಸ್ ಎಷ್ಟು ಅಂಥ ಅದೇ ಗೊತ್ತಿಲ್ಲ. ಪ್ರೋಗ್ರೆಸ್ ಇನ್ ಟನ್ಸ್ ೩,೧೦೬ ಕೆ. ಜಿ ಅಂಟಿಸಪೇಟಿಡ್ ಪ್ರೋಗ್ರೆಸ್ ೩,೪೦೦ ಕೆ. ಜಿ. ಅಜೋಲಾ ನಾಲ್ಕುಸಾವಿರ ಎಕರೆಯಲ್ಲಿ ಬೆಳೆಯಬೇಕೆಂದು ಪ್ರೋಗ್ರಾಮ್ ಹಾಕಿಕೊಂಡಿದ್ದೀರಿ. ಪ್ರೋಗ್ರೆಸ್ ಇನ್ ಟನ್ ೧೯೬೦ ಎಕರೆಯಲ್ಲಿ ಉತ್ಪಾದನೆ ಮಾಡಿದ್ದೀರಿ, ಮುಂದೆ ೨,೫೦೦ ಎಕರೆಯಲ್ಲಿ ಆಗುವಷ್ಟು ಉತ್ಪಾದನೆ ಮಾಡುತ್ತೇವೆಂದು ಹಾಕಿದ್ದೀರಿ. ಇದಕ್ಕೆ ತಾವು ಸಾಕಷ್ಟು ಪ್ರಾಮುಖ್ಯತೆ ಕೊಡತಕ್ಕ ಸೂಚನೆ ಇಲ್ಲ ಎಂದು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಇನ್ನು ಇತ್ತೀಚೆಗೆ ವಿಯಟ್ನಾಮ್‌ನಲ್ಲಿ ಒಂದು ದೊಡ್ಡ ಯುದ್ಧ ಏನು ನಡೆಯಿತು ಆ ಯುದ್ಧದ ಸಮಯದಲ್ಲಿ ಅಲ್ಲಿರತಕ್ಕ ರೈತರ ಜೀವನ ಅಸ್ಥವ್ಯಸ್ಥವಾಗಿದ್ದು ಅಲ್ಲಿಯ ವ್ಯವಸಾಯಗಾರರ ಜೀವನ ಬಹಳ ಕಷ್ಟದಲ್ಲಿತ್ತು ತಮಗೆ ಗೊತ್ತಿರುವ ಹಾಗೆ ಕೆಲವು ರಾಷ್ಟ್ರಗಳು ದಿಗ್ಬಂದನ ಹನಕಿ ಯಾವ ವಸ್ತುಗಳು ಆ ರಾಷ್ಟ್ರದೊಳಗೆ ಬರದಂತೆ ನೋಡಿಕೊಂಡವು, ಆ ರೀತಿ ಇರುವಾಗಿ ಆ ರೈತರಿಗೆ ಒಂದು ಚೂರು ಫರ್ಟಿಲೈಸರ್ ಸಿಕ್ಕಲಿಲ್ಲ. ಆದರೆ ಅವರು ಬೆಳೆಯತಕ್ಕ ಭತ್ತ ಏನಿತ್ತು ಆದರ ಉತ್ಪಾದನೆ ಅಷ್ಟಕ್ಕೆ ಇತ್ತು ಅದು ಕಡಿಮೇಯಾಗಲಿಲ್ಲ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದನ್ನು ಅವರು ಯಾವುದರಿಂದ ಮಾಡಿದರು ಅಂದರೆ ಇವರು ಇಲ್ಲಿ ಕೊಟ್ಟಿರತಕ್ಕ ಬ್ಲೂಗ್ರೀನ್ ಆಲ್ಗೆ ಅಂಡ್ ಅಜೋಲಾ ಏನಿದೆ ಇದನ್ನು ಬೆಳೆದುಕೊಂಡು ನೀರಾವರಿ ವ್ಯವಸಾಯ ಪಾತಿಗಳಲ್ಲಿ ಅವರು ಭತ್ತ ಇಳುವರಿ ಪಡೆದರು.

ಅದಾದಮೇಲೆ ಈ ಒಂದು ತಂತ್ರಜ್ಞಾನವನ್ನು ಇಡೀ ವಿಶ್ವಕ್ಕೇ ಹರಡುತ್ತಿದ್ದಾರೆ. ಇದರ ಒಂದ ಪೂರ್ಣ ಲಾಭವನ್ನು ಚೀನಾದವರು ಪಡೆದುಕೊಳ್ಳುತ್ತಿದ್ದಾರೆ. ಇಂಥ ಕಾರ್ಯಕ್ರಮಗಳನ್ನು ಗುರ್ತಿಸಿ ಅದಕ್ಕೆ ಸಾಕಷ್ಟು ಹಣವನ್ನೂ, ಸಿಬ್ಬಂದಿವರ್ಗವನ್ನೂ ಕೊಡುವುದು ಸರ್ಕಾರದ ಕರ್ತವ್ಯ. ಸುಮ್ಮನೆ ನಾವು ೩ ಸಾವಿರ ಕೆ.ಜಿ. ಬ್ಲೂ ಗ್ರೀಡ್ ಬೆಳೆದಿದ್ದೇವೆ, ೪ ಸಾವಿರ ಎಕರೆಯಲ್ಲಿ ಅಜೋಲಾವನ್ನು ಬೆಳೆದಿದ್ದೇವೆಂದು ಹೇಳುವುದು ಹಾಸ್ಯಾಸ್ಪದವಾಗುತ್ತದೆ. ತಾವು ಕೇವಲ ಬಾಯಲ್ಲಿ ಅನುಕಂಪವನು ತೋರಿಸುತ್ತಿದ್ದೀರೆಂದು ನಾನು ಸೂಚ್ಯವಾಗಿ ತಿಳಿಸುತ್ತಿದ್ದೇನೆ. ನಿಜವಾಗಿ ಇದು ನಮ್ಮ ರೈತನಿಗೆ ಬೇಡ. ಹಳ್ಳಿಗಾಡಿನಲ್ಲಿರತಕ್ಕ ರೈತರಿಗೆ ಅನುಕೂಲ ಆಗಬೇಕಾದರೆ ಹೆಚ್ಚಿಗೆ ಉತ್ಪಾದನೆ ಮಾಡುವುದಕ್ಕೆ ಬೇಕಾದಂಥ ಎಲ್ಲ ಸೌಲಭ್ಯಗಳನ್ನೂ, ಸಿಬ್ಬಂದಿ ವರ್ಗವನ್ನೂ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಎಣ್ಣೆಬೀಜಗಳ ಬಗ್ಗೆ ಹೇಳುವುದಾದರೆ ಇಡೀ ರಾಷ್ಟ್ರದಲ್ಲಿ ಎಣ್ಣೆ ಕೊರತೆ ಬಹಳವಾಗಿದೆ. ಪಾಮೋಲಿನ್ ಎಣ್ಣೆಯನ್ನು ಹೊರಗಡೆ ದೇಶದಿಂದ ತರಿಸಿಕೊಂಡು ಅದನ್ನು ನಮ್ಮ ಜನರಿಗೆ ಹಂಚುತ್ತಿದ್ದೀರಿ. ಆದರೆ ಯಾರಿಗೆ ಹಂಚುತ್ತಿದ್ದೀರಿ ಎಂಬ ಪ್ರಶ್ನೆ ಈಗ ಬೇಡ. ಆದರೆ ಆದಷ್ಟೂ ಈ ಎಣ್ಣೆಯನ್ನು ಪಟ್ಟಣ ಪ್ರದೇಶಗಳಲ್ಲೇ ಹಂಚುತ್ತಿದ್ದೀರಿ. ಏಕೆಂದರೆ ಪಟ್ಟಣದ ಜನರು ಅಬ್ಬರಿಸುತ್ತಾರೆ ಆದ್ದರಿಂದ ಈ ಜನರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡುತ್ತಿದ್ದೀರಿ. ಈ ರೀತಿ ಮಾಡುತ್ತಿರುವುದು ಕೇವಲ ನಿಮ್ಮ ಸರ್ಕಾರ ಒಂದೇ ಅಲ್ಲ. ಈ ಹಿಂದಿನ ಎಲ್ಲ ಸರ್ಕಾರಗಳೂ ಇದೇರೀತಿ ಮಾಡಿಕೊಂಡು ಬರುತ್ತಿವೆ. ಇದಕ್ಕೆ ತಕ್ಕಂತೆ ಪತ್ರಿಕೆಯವರೂ ತಾಳಮೇಳವನ್ನು ಮಾಡುತ್ತಾರೆ. ಪಟ್ಟಣಗಳಲ್ಲಿ ಏನು ನಡೆಯುತ್ತಿದೆ ಅದರ ಬಗ್ಗೆ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಹಾಕುತ್ತಾರೆ. ಆದರೆ ಹಳ್ಳಿಗಾಡುಗಳಲ್ಲಿ ನಡೆಯುತ್ತಿರುವ ವಿಚಾರದ ಬಗ್ಗೆ ಎಲ್ಲೋ ಅಲ್ಲೊಂದು, ಇಲ್ಲೊಂದು ವಿಚಾರ ಸಣ್ಣದಾಗಿ ಬರುತ್ತವೆ. ಮಾನ್ಯ ಸದಸ್ಯರಾದ ಚೌಡಯ್ಯನವರು ಹೇಳಿದಂತೆ ಅದಕ್ಕೂ ಇದಕ್ಕೂ ಬಹಳ ದೂರ. ಇವತ್ತಿನ ದಿವಸ ಎಣ್ಣೆ ಬೀಜಗಳನ್ನು ಬೆಳೆಯುತಕ್ಕ ರೈತನಿಗೆ ಸರಿಯಾದ ಅನುಕೂಲಗಳನ್ನು ಮಾಡಿಕೊಟ್ಟರೆ ನೀವು ಹೊರಗಡೆಯಿಂದ ಎಣ್ಣೆ ತರಿಸಬೇಕಾಗಿಲ್ಲ. ನಿಮಗೆ ಬೇಕಾದಂಥ ಎಣ್ಣೆಯನ್ನು ನಮ್ಮಲ್ಲೇ ಉತ್ಪತ್ತಿ ಮಾಡಿಕೊಡುವ ಶಕ್ತಿಯನ್ನು ನಮ್ಮ ರೈತರು ಹೊಂದಿದ್ದಾರೆ. ಆದರೆ ಅವರಿಗೆ ಬೇಕಾದಂಥ ಸಲಕರಣೆಗಳನ್ನು ಒದಗಿಸಿಕೊಡಬೇಕು. ಸುಮಾರು ೯೦೦ ಕೋಟಿ ರೂ. ಗಳಷ್ಟು ಹಣವನ್ನು ಕೇವಲ ಪಾಮೋಲಿನ್ ಎಣ್ಣೆಗೋಸ್ಕರ ಸರ್ಕಾರ ಖರ್ಚು ಮಾಡುತ್ತಿದೆ ಎಂದು ಮಾನ್ಯ ಸದಸ್ಯರಾದ ಜೆ. ಹೆಚ್. ಪಟೇಲ್ ರವರು ಹೇಳಿದರು.

ಸ್ವಾಮಿ, ನಾನಾದರೂ ಹೇಳುತ್ತೇನೆ ಸರ್ಕಾರದವರು ಈ ಎಣ್ಣೆಗೋಸ್ಕರ ಏನು ೯೦೦ ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದೀರಿ ಇದರಲ್ಲಿ ಹತ್ತನೇ ಒಂದು ಭಾಗ ಹಣವನ್ನು ಖರ್ಚುಮಾಡಿ ನಮ್ಮ ರೈತರಿಗೆ ಅನುಕೂಲಗಳನ್ನು ಕಲ್ಪಿಸಿಕೊಟ್ಟರೆ ೧೮೦೦ ಕೋಟಿ ರೂ.ಗಳಷ್ಟು ಎಣ್ಣೆಯನ್ನು ನಮ್ಮಲ್ಲೇ ಉತ್ಪತ್ತಿ ಮಾಡುತ್ತಾರೆ. ಎಣ್ಣೆಬೀಜಗಳನ್ನು ಉತ್ಪಾದನೆ ಮಾಡುವ ಬಗ್ಗೆ ತಾವು ಇಲ್ಲಿ ಏನು ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಇದು ಪ್ರಶಂಶನೀಯವಾದ ಅಥವಾ ಭೂಷಣಪ್ರಾಯದ ರೀತಿಯಲ್ಲಿಲ್ಲವೆಂದು ನಾನು ಹೇಳಬೇಕಾಗಿದೆ. ೧೯೮೦–೮೧ರಲ್ಲಿ ಇದರ ಗುರಿ ೧೮.೦೨ ಹೆಕ್ಟೇರ್ ಆದರೆ ಸಾಧನೆ ೧೩.೧೯ ಹೆಕ್ಟೇರ್. ೧೯೮೧–೮೨ರಲ್ಲಿ ಇದು ಇನ್ನೂ ಕಡಿಮೆ ಆಗಿದೆ. ಇವತ್ತು ಶ್ರೀಮತಿ ಇಂದಿರಾಗಾಂಧಿಯವರು ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾಗಿರುವುದರಿಂದ ನಾವು ಅವರನ್ನು ಗೌರವಿಸಬೇಕಾಗುತ್ತದೆ. ಅವರ ೨೦ ಅಂಶದ ಕಾರ್ಯಕ್ರಮದಲ್ಲಿ ಬಹಳ ಮುಖ್ಯವಾಗಿ ಪಲ್ಸಸ್ ಮತ್ತು ಎಣ್ಣೆ ವಿಚಾರದಲ್ಲಿ ಹೇಳಿದ್ದಾರೆ. ಅವರು ಇದರಲ್ಲಿ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದಾರೆಂದರೆ "To make special efforts to increase production of pulses and vegetable oil-seeds'' ಎಂದು. ಇದು ವಾಸ್ತವಿಕವಾಗಿ ಏನು ನಡೆಯುತ್ತಿದೆ ಎಂಬುದನ್ನು ಪರಿಶೀಲಿಸಿ ನೋಡಿದರೆ ೧೯೮೦–೮೧ರಲ್ಲಿ ಗುರಿಸಾಧನೆ ೧೩.೧೯ ಹೆಕ್ಟೇರ್ ಇದ್ದರೆ ಅವರ ಗುರಿ ೧೮.೦೨ ಹೆಕ್ಟೇರ್. ೧೯೮೧–೮೨ರಲ್ಲಿ ೧೬.೬೯ ಹೆಕ್ಟೇರ್ ಇದ್ದರೆ ಮಾರ್ಚಿ ೧೯೮೨ಕ್ಕೆ ಇದು ಕಡಿಮೆಯಾಗಿದೆಯೆಂಬುದು ಇವರು ಕೊಟ್ಟಿರತಕ್ಕ ವರದಿಯಿಂದಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಂದ ಹಿಡಿದು ಎಲ್ಲ ಮಂತ್ರಿಗಳೂ ಹಾಗೂ ನಾವುಗಳೂ ಸೇರಿ ನಮ್ಮ ನಮ್ಮ ತಾಲೂಕುಗಳಲ್ಲಿ ಮೀಟಿಂಗ್ ಆದಾಗ ೨೦ ಅಂಶದ ಕಾರ್ಯಕ್ರಮಗಳನ್ನು ಸತ್ವಪೂರ್ಣವಾಗಿ ಜಾರಿಗೆ ತರಬೇಕೆಂದು ಪಾಸ್ ಮಾಡಿದ್ದೇವೆ, ಆದರೆ ಎಣ್ಣೇಬೀಜ ಮತ್ತು ಪಲ್ಸಸ್‌ನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಏನು ಕಾರಣ ಎಂಬುದನ್ನು ಈ ವರದಿಯಿಂದ ನಾವು ತಿಳಿದುಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ನಮ್ಮಲ್ಲಿರತಕ್ಕ ಆಲಸ್ಯಕ್ಕೆ ಎರಡನೆಯದಾಗಿ ಈ ಬೆಳೆಗಳಿಗೆ ಬೆಲೆಗಳ ಮೂಲಕ ನಾವು ಕೊಡತಕ್ಕ ಪುರಸ್ಕಾರ. ಸ್ವಾಮಿ, ನಾನೂ ಒಬ್ಬ ರೈತ. ನಮ್ಮ ವ್ಯವಸಾಯ ವಿಶ್ವವಿದ್ಯಾನಿಲಯದವರು ಹೊಸದಾಗಿ ತೊಗರಿ ಕಾಳಿನ ತಳಿಯನ್ನು ಕಂಡುಹಿಡಿದಿದ್ದಾರೆ. ಅದನ್ನು ೧ ಕೆ.ಜಿ. ಗೆ ೮ ರೂ. ನಂತೆ ತೆಗೆದುಕೊಂಡು ಹೋಗಿ ನನ್ನ ಜಮೀನಿನಲ್ಲಿ ಹಾಕಿದೆ. ಸುಮಾರು ೩ ಎಕರೆಯಲ್ಲಿ ೩೦ ಕ್ವಿಂಟಾಲ್ ತೊಗರಿಯನ್ನು ಬೆಳೆದೆ. ಅದನ್ನು ಬೆಳೆದಮೇಲೆ ಮಾರಾಟ ಮಾಡುವುದಕ್ಕಾಗಿ ಬೆಂಗಳೂರು ಮಾರ್ಕೆಟ್‌ಗೆ ತೆಗೆದುಕೊಂಡು ಬಂದಾಗ ೧ ಕ್ವಿಂಟಾಲ್‌ಗೆ ೧೬೦–೧೭೫ ರೂ.ಗೆ ಕೇಳಿದರು. ಅವತ್ತು ನನಗೆ ಆದಂಥ ವ್ಯಥೆ ಅಷ್ಟಿಷ್ಟಲ್ಲ. ಏಕೆಂದರೆ ವ್ಯವಸಾಯ ವಿಶ್ವವಿದ್ಯಾನಿಲಯದವರು ಒಳ್ಳೆಯ ತಳಿಯ ತೊಗರಿಯನ್ನು ಕಂಡುಹಿಡಿದು ರೈತರು ಅದನ್ನು ಹೆಚ್ಚು ಹೆಚ್ಚಾಗಿ ಬೆಳೆಯಬೇಕೆಂದು ಪ್ರಚಾರ ಮಾಡಿ ೧ ಕೆ.ಜಿ.ಗೆ ೮

ರೂ.ನಂತೆ ಮಾರಾಟ ಮಾಡುತ್ತಿದ್ದಾರೆ. ಅದನ್ನು ತೆಗೆದುಕೊಂಡು ಬಂದು ಹೊಲದಲ್ಲಿ ಬಿತ್ತಿ ಅದಕ್ಕೆ ಬೇಕಾದಂಥ ಔಷಧೋಪಚಾರವನ್ನು ಮಾಡಿ ಚೆನ್ನಾಗಿ ಬೆಳೆದು ಬೆಂಗಳೂರು ಮಾರುಕಟ್ಟೆಗೆ ಮಾರಾಟಕ್ಕಾಗಿ ತಂದರೆ ೧೬೫–೧೭೦ ರೂ.ನಂತೆ ಕೇಳಿದರೆ ಬೆಳೆದವರಿಗೆ ಎಷ್ಟು ಹೊಟ್ಟೆ ಉರಿಯಬಹುದು ಎಂಬುದನ್ನು ತಾವೇ ಸ್ವಲ್ಪ ಯೋಚನೆ ಮಾಡಿನೋಡಿ. ಈ ರೀತಿ ತಂದಂಥ ತೊಗರಿಯನ್ನು ನಾನು ಮಾರಾಟ ಮಾಡದೆ ಹಾಗೆ ಇಟ್ಟೆ. ಆಗ ಅದನ್ನು ಬೇಳೆ ಮಾಡಿಸಿ ಇಟ್ಟರೆ ಅನುಕೂಲ ಆಗುತ್ತದೆಂದು ನನ್ನ ನನ್ನ ಸ್ನೇಹಿತರೊಬ್ಬರು ಹೇಳಿದಾಗ ನಾನು ರೋಲರ್ ಮಿಲ್‌ಗಳನ್ನು ಹುಡುಕಿಕೊಂಡು ಹೊರಗೆ ಕಾರಣ ಇದನ್ನು ಹಳ್ಳಿಗಳ ಕಡೆ ರೈತರು ಬೇಳೆ ಮಾಡುವಂತೆ ಮಾಡುವುದಕ್ಕೆ ಸಾಧ್ಯವಿರಲಿಲ್ಲ. ಈ ಬೆಂಗಳೂರಿನಲ್ಲಿ ಅವರೆ ಮತ್ತು ತೊಗರಿಯನ್ನು ಬೇಳೆ ಮಾಡತಕ್ಕ ಮಿಲ್‌ಗಳು ಕೇವಲ ೩ ಮಾತ್ರ ಇವೆ. ನಾನು ಆ ಮಿಲ್‌ನವರನ್ನು ಭೇಟಿಮಾಡಿ ಇದನ್ನು ಬೇಳೆ ಮಾಡಿಕೊಡುವಂತೆ ಕೇಳಿದೆ. ಅವರು ೧ ಕ್ವಿಂಟಾಲ್ ಬೇಳೆ ಮಾಡುವುದಕ್ಕೆ ೨೦ ರಿಂದ ೨೭ ರೂ.ವರೆಗೆ ಕೇಳಿದರು. ಕಾರಣ ಇದನ್ನು ಬೇಳೆ ಮಾಡುವುದಕ್ಕೆ ಹೆಚ್ಚು ಎಣ್ಣೆ ಬೇಕಾಗುತ್ತದಂತೆ. ಆದರೂ ಅವರು ಹೇಳಿದಷ್ಟಕ್ಕೇ ಒಪ್ಪಿಕೊಳ್ಳಬೇಕಾಯಿತು. ಕಾರಣ ಹಿಂದಿನವರ್ಷ ಕೂಡ ನಾನು ಇದೇ ರೀತಿ ನಷ್ಟವನ್ನು ಅನುಭವಿಸಿದ್ದೆ. ಆಗ ೩ ಕ್ವಿಂಟಾಲ್ ಬೆಳೆದು ಮಾರಾಟಕ್ಕಾಗಿ ತಂದಿದ್ದಾಗ ಕೇವಲ ೧೫೦ ರೂ ಗೆ ೧ ಕ್ವಿಂಟಾಲ್‌ನ್ನು ಕೇಳಿದ್ದರು. ನಾನು ಕೊಡದೆ ಹಾಗೆಯೇ ಇಟ್ಟಿದ್ದಾಗ ಅದಕ್ಕೆ ಹುಳು ಬಿದ್ದು ಎಲ್ಲಾ ಕೆಟ್ಟುಹೋದಮೇಲೆ ಮತ್ತೆ ಮಾರ್ಕೆಟ್‌ಗೆ ತಂದು ಕೇವಲ ೭೫ ರೂ.ನಂತೆ ಮಾರಿ ಹೋಗಿದ್ದೆ. ಈ ಹಿಂದಿನ ಅನುಭವ ಜ್ಞಾಪಕಕ್ಕೆ ಬಂದು ಈ ಸಾರಿ ಹಾಗೆ ಮಾಡದೆ ಬೇಳೆ ಮಾಡಿಸಿ ಇಡಬೇಕೆಂದು ಮಾಡಿದೆ. ಅದನ್ನು ರೆಗ್ಯುಲೇಟೆಡ್ ಮಾರ್ಕೆಟ್‌ಗೆ ತೆಗೆದುಕೊಂಡು ಹೋದಾಗ ೧ ಕ್ವಿಂಟಾಲ್‌ಗೆ ೩೭೫ ರೂ.ಗೆ ಕೇಳಿದರು. ಸ್ವಾಮಿ, ಆವತ್ತಿನ ದಿವಸ ಅಂಗಡಿಗಳಲ್ಲಿ ಬೇಳೆಯ ಬೆಲೆ ೫.೮೦ ರೂ. ನಿಂದ ಹಿಡಿದು ೬.೨೦ ರೂ.ವರೆಗೆ ಇತ್ತು. ಇದನ್ನು ನೋಡಿ ನನ್ನ ಮನಸ್ಸಿಗೆ ತುಂಬಾ ನೋವಾಗಿ ಆ ಬೇಳೆಯನ್ನೂ ಮಾರಲಿಲ್ಲ. ಚಾಮರಾಜಪೇಟೆಯ ೩ನೇ ಮುಖ್ಯ ರಸ್ತೆಯಲ್ಲಿರತಕ್ಕ ರೋಲರ್ ಮಿಲ್‌ನಲ್ಲೇ ಆ ೩೦ ಕ್ವಿಂಟಾಲ್ ಬೇಳೆಯನ್ನೂ ಹಾಗೇ ಇವತ್ತೂ ಇಟ್ಟಿದ್ದೇನೆ ಯಾರುಬೇಕಾದರೂ ಹೋಗಿ-ನೋಡಿಕೊಂಡು ಬರಬಹುದು. ಸ್ವಾಮಿ, ಇಷ್ಟೊಂದು ಅನ್ಯಾಯ ರೈತರಿಗೆ ಆಗುವುದಾದರೆ ಯಾವ ರೈತನಿಗೆ ತಾನೆ ಈ ತೊಗರಿಯನ್ನು ಬೆಳೆಯುವುದಕ್ಕೆ ಮನಸ್ಸು ಬರುತ್ತದೆ ? ಆದರೆ ನಿಮ್ಮ ೨೦ ಅಂಶದ ಕಾರ್ಯಕ್ರಮದಲ್ಲಿ ರೈತರಿಗೆ ಏನು ಹೇಳುತ್ತೀರಿ, ನೀವು ಹೆಚ್ಚು ಬೆಳೆಯಿರಿ, ಹೆಚ್ಚು ಉತ್ಪಾದನೆ ಮಾಡಿ ಎಂದು ಹೇಳುತ್ತೀರಿ. ಸ್ವಾಮಿ, The Prime Minister declared that under the new programme announced to the nation in her broadcast on 14th January, 1982.

ಸ್ವಾಮಿ ಇದರಿಂದ ತಾವು ಹೇಳತಕ್ಕಂಥದ್ದಕ್ಕೂ ಮತ್ತು ನಡೆಯುತ್ತಾ ಇರತಕ್ಕಂಥ ವ್ಯವಸ್ಥೆಗೂ ಅಂತರ ಎಷ್ಟರಮಟ್ಟಿಗೆ ಇದೆ ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಸ್ವಾಮಿ ರೈತರಿಗೆ ಸರಿಯಾದ ಧಾರಣೆಯನ್ನು ಸರ್ಕಾರದವರು ಕೊಟ್ಟು ಅವರಿಗೆ ನೆರವುಆಗಬೇಕೆಂದು ಹೇಳುತ್ತೇನೆ. ಭಾರತದೇಶದರೈತರು ಈ ರಾಷ್ಟ್ರಕ್ಕೆ ಸಾಕಾದಷ್ಟು ಆಹಾರಧಾನ್ಯಗಳನ್ನು ಬೆಳೆಯುವುದರ ಜೊತೆಗೆ ಇಡೀ ವಿಶ್ವಕ್ಕೆ ಕೊಡುವಷ್ಟು ಬೆಳೆಯುವ ಸಾಧ್ಯತೆ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ನಮ್ಮ ರಾಷ್ಟ್ರದಲ್ಲಿ ಅಮೇರಿಕಾದ ರಾಯಭಾರಿಯಾಗಿದ್ದ ಚೆಸ್ಟರ್ ಬೈಲ್ಸ್ ಈ ಮಾತನ್ನು ಹೇಳಿದ್ದಾರೆ. ಆದ್ದರಿಂದ ನಮ್ಮ ರೈತರಿಗೆ ಸರಿಯಾದ ರೀತಿಯಲ್ಲಿ ಅನುಕೂಲತೆಗಳನ್ನು ಕಲ್ಪಿಸಿಕೊಡುವತ್ತ ಸರ್ಕಾರದವರು ಗಮನವನ್ನು ಹರಿಸಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕ್ರಾಪ್ ಇನ್‌ಷೂರೆನ್ಸ್ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಒಂದೆರಡು ವಿಚಾರಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಸ್ವಾಮಿ ಸರ್ಕಾರದವರಿಗೆ ಈ ವಿಚಾರ ಗೊತ್ತಿದೆ. ಕ್ರಾಪ್ ಇನ್‌ಷೂರೆನ್ಸ್‌ನ ಅವಶ್ಯಕತೆ ಎಷ್ಟರಮಟ್ಟಿಗೆ ಇದೆ ಎನ್ನುವುದರ ನಮ್ಮ ರಾಜ್ಯಕ್ಕೆ ಅಷ್ಟೇ ಅಲ್ಲ, ಇಡಿ ಭಾರತಕ್ಕೆ ಗೊತ್ತಿರುತ್ತದೆ. ಮೊಟ್ಟಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ೧೯೧೭ನೇ ಇಸವಿಯಲ್ಲಿ ಚಕ್ರವರ್ತಿ ಎನ್ನತಕ್ಕಂಥವರು ಆಗ್ರಿಕಲ್ಚರ್ ಇನ್‌ಷೂರೆನ್ಸ್ ಎಂದು ಒಂದು ಪುಸ್ತಕವನ್ನು ಬರೆದಿದ್ದಾರೆ. ಇದನ್ನು ಅವರು ಬರೆದಿದ್ದು ೧೯೧೭ನೇ ಇಸವಿಯಲ್ಲಿ. ಅದರಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಒಂದು ಒಳ್ಳೆಯ ದಾಖಲೆಯಾಗಿರುತ್ತದೆಂದು ಹೇಳಿದರೆ ತಪ್ಪಾಗಲಾರದು ಇದರಲ್ಲಿ ಕೊಟ್ಟಿರುವ ವಿಚಾರವನ್ನು ಓದಿದಾಗ ನನಗೆ ಬಹು ಆಶ್ಚರ್ಯವಾಯಿತು. ೧೯೬೫ನೇ ಇಸವಿಯಲ್ಲಿ ಈ ರಾಜ್ಯದಲ್ಲಿ ಹಳ್ಳಿಗಳಲ್ಲಿ, ತಾಲ್ಲೂಕುಗಳಲ್ಲಿ ಎಷ್ಟರಮಟ್ಟಿಗೆ ಮಳೆ ಬೀಳುತ್ತದೆ ಎನ್ನು

ವುದನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರ ಎಲ್ಲ ವಿವರಗಳನ್ನೂ ಕೂಡ ಕೊಟ್ಟಿದ್ದಾರೆ. ಸ್ವಾಮಿ ಈವತ್ತಿನ ದಿವಸ ಕ್ರಾಪ್ ಇನ್‌ಷೂರೆನ್ಸ್ ಬೇಕಾಗಿರುವುದು ಯಾರಿಗೆ ಎಂದರೆ ನೀರಾವರಿ ಇರತಕ್ಕಂಥ ರೈತರಿಗೆ ಅಲ್ಲ. ಕ್ರಾಪ್ ಇನ್‌ಷೂರೆನ್ಸ್ ಬೇಕಾಗಿರುವುದು ಬಡರೈತರಿಗೆ, ಖುಷ್ಕಿ ಬೆಳೆಯನ್ನು ಬೆಳೆಯುತಕ್ಕಂಥ ರೈತರಿಗೆ. ತಮಗೆ ಗೊತ್ತಿರುವಂತೆ ಈ ಖುಷ್ಕಿ ಬೆಳೆ ಬೆಳೆಗಾರರನ್ನು ಬಹಳ ಮುಖ್ಯವಾಗಿ ನೋಡಿಕೊಳ್ಳಬೇಕಾಗಿದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದಹಾಗೆ ರಾಜ್ಯದಲ್ಲಿ ಮಳೆ ಇಲ್ಲದೆ ಭೀಕರವಾದಂಥ ಬರಗಾಲ ಪರಿಸ್ಥಿತಿ ಇದೆ. ಚರ್ಚೆಮಾಡಬೇಕೆಂದು ಪ್ರಶ್ನೆಯನ್ನು ತಮ್ಮ ಮುಂದೆ ಇಟ್ಟಾಗ ಚರ್ಚೆಮಾಡಲು ಅವಕಾಶ ಕೊಡುತ್ತೇವೆಂದು ತಾವು ಹೇಳಿದಿರಿ. ಇಂಥ ಒಂದು ಪರಿಸ್ಥಿತಿಯಲ್ಲಿ ಕ್ರಾಪ್ ಇನ್‌ಷೂರೆನ್ಸ್ ಪದ್ಧತಿಯನ್ನು ಜಾರಿಗೆ ತಂದು ಬಡತನದಲ್ಲಿ ತೊಳಲಾಡುತ್ತಿರುವ ರೈತರಿಗೆ ಸಹಾಯವನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕು. ಬಡತನವನ್ನು ಹೋಗಲಾಡಿಸಲು ಇಂಡಸ್ಟ್ರೀಸ್‌ಗಳನ್ನು ತೆಗೆಯುವುದರಿಂದ ಸಾಧ್ಯವೆಂದು ಹೇಳುವುದಾದರೆ ತಾವು ಎಷ್ಟು ಇಂಡಸ್ಟ್ರೀಸ್‌ಗಳನ್ನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ತಿಳಿಸಬೇಕು. ಸಾವಿರಾರು, ಲಕ್ಷಾಂತರ ಜನರಿಗೆ ಉದ್ಯೋಗವನ್ನು ಕೊಡತಕ್ಕಂಥ ವ್ಯವಧಾನ ಎಂದರೆ ವ್ಯವಸಾಯ. ಈ ವ್ಯವಸಾಯವನ್ನೇ ನಂಬಿರತಕ್ಕಂಥ ರೈತರು ಏನು ಇದ್ದಾರೆ ಅವರಿಗೆ ನೀವು ಎಲ್ಲ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು. ಅವರಿಗೆ ಆಗುತಿರತಕ್ಕಂಥ ನಷ್ಟವನ್ನು ತಪ್ಪಿಸಬೇಕಾದರೆ ಖುಷ್ಕಿ ಬೆಳೆಗೆ ಪ್ರಮುಖವಾಗಿ ಇನ್‌ಷೂರೆನ್ಸ್ ಕವರೇಜ್ ಕೊಡಬೇಕೆಂದು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸರ್ಕಾರದವರು ಬೇಕಾದರೆ ಶ್ರೀಮಾನ್ ಚಕ್ರವರ್ತಿಯವರು ಬರೆದಿರತಕ್ಕಂಥ ಪುಸ್ತಕವನ್ನು ತರಿಸಿ ನೋಡಿ ಆದರ ಹಿನ್ನೆಲೆ ಏನು ಎನ್ನುವುದನ್ನು ತಿಳಿದುಕೊಂಡರೆ ಬಹಳ ಒಳ್ಳೆಯದು. ಶ್ರೀಮಾನ್ ಚಕ್ರವರ್ತಿಯವರು ಮೈಸೂರು ಗೌವರ್ನಮೆಂಟ್ ಇನ್‌ಷೂರೆನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸೆಕ್ರೆಟರಿಗಳಾಗಿ ಸುಮಾರು ೧೧ ವರ್ಷಗಳ ಕಾಲ ಕೆಲಸಮಾಡಿದ್ದಾರೆ. ರೈತರ ಸಮಸ್ಯೆಗಳ ಬಗ್ಗೆ ಅದನ್ನು ಹೇಗೆ ಪರಿಹಾರ ಮಾಡಬೇಕು ಎನ್ನುವ ಬಗ್ಗೆ ಅನೇಕ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದವರು ಈ ಕೆಲಸವನ್ನು ಮಾಡಬೇಕು. ಖುಷ್ಕಿ ಬೆಳೆಗಾರರಿಗೆ ಇನ್‌ಷೂರೆನ್ಸ್ ಕವರೇಜ್ ಕೊಡತಕ್ಕಂಥ ಕೆಲಸವನ್ನು ಸರ್ಕಾರದವರು ಕೈಗೊಳ್ಳಬೇಕು. ರೈತರಿಂದ ಸರ್ಕಾರದವರು ಯಾವರೀತಿ ರೆವಿನ್ಯೂ ವಸೂಲು ಮಾಡುತ್ತಾರೆ ಅದೇ ರೀತಿಯಲ್ಲಿ ರೆವಿನ್ಯೂ ಅಧಿಕಾರಿಗಳು ಇನ್‌ಷೂರನ್ಸ್ ಕವರೇಜ್‌ಮಾಡಿ ರೈತರಿಗೆ ನಿಜಕ್ಕೂ ಆಗತಕ್ಕಂಥ ನಷ್ಟ ಏನು ಇದೆ ಅದನ್ನು ತಪ್ಪಿಸುವಂತಾಗಬೇಕು. ಸುಮಾರು ೭೫ ಪರ್ಸೆಂಟ್‌ಗಿಂತ ಕಡಿಮೆ ಮಳೆಯಾದರೆ ಇನ್‌ಷೂರೆನ್ಸ್ ಯಾವರೀತಿ ಕೊಡಬೇಕೆಂಬುದರ ಬಗ್ಗೆ ತಜ್ಞರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಇಂಥ ಒಂದು ಇನ್‌ಷೂರೆನ್ಸ್ ಕಾರ್ಯಕ್ರಮವನ್ನು ಖುಷ್ಕಿ ಬೆಳೆಗಾರರಿಗೆ ಆದಷ್ಟು ಜಾಗ್ರತೆಯಾಗಿ ಸರ್ಕಾರದವರು ತರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ ವರದಿಯಲ್ಲಿ ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ಪ್ರಾಜೆಕ್ಟ್ ವ್ಯವಸಾಯ ವಿಸ್ತರಣ ಯೋಜನೆ ಎಂದು ಇದೆ. ಇದು ಬಹಳ ಮುಖ್ಯವಾಗಿ ನಮ್ಮ ವ್ಯವಸಾಯ ಇಲಾಖೆಯವರು ಈ ರಾಜ್ಯದಲ್ಲಿ ನಡೆಸುತ್ತಿರತಕ್ಕಂಥ ಪ್ರಮುಖವಾದ ಒಂದು ಕೆಲಸಕಾರ್ಯಗಳಲ್ಲಿ ಒಂದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದು ಸತ್ವಪೂರ್ಣವಾಗಿ ನಡೆಯುತ್ತಿದೆ ಎನ್ನುವವರದಿ ಓದಿದರೆ ನಿಜವಾಗಿಯೂ ತಲೆತಗ್ಗಿಸಬೇಕೆಂದು ಅನಿಸುತ್ತದೆ. ಇದಕ್ಕೆ ಯಾರು ಕಾರಣಕರ್ತರು ಎಂಬುದನ್ನು ತಾವು ಸದನಕ್ಕೆ ತಿಳಿಸಬೇಕು. ೪೭ನೇ ಪೇಜ್‌ನಲ್ಲಿ ಸವಿಸ್ತಾರವಾಗಿ ಈ ಒಂದು ಪ್ರಾಜೆಕ್ಟ್ ವಿಚಾರದಲ್ಲಿ ವರದಿ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕಂಥ ವರದಿ ಮುಖಾಂತರವೇ ಸ್ಯಾಂಕ್ಷನ್ ಪೋಸ್ಟ್ಸ್ ಟೋಟಲ್ ಮಾಡಿ ಹೇಳಿರುತ್ತಾರೆ. ಸ್ಯಾಂಕ್ಷನ್ ಪೋಸ್ಟ್ ೭೪೪೪ ಇದ್ದರೆ ಇದರಲ್ಲಿ ಕಾಲಿ ಇರತಕ್ಕಥ ಪೋಸ್ಟ್ ಎಷ್ಟಿದೆ ಎಂದರೆ ೧೮೨೨ ಅಂದರೆ ೩೦ ಪರ್ಸೆಂಟ್‌ಗೂ ಹೆಚ್ಚು ಪೋಸ್ಟ್ ಖಾಲಿ ಇದೆ. ಸ್ವಾಮಿ ಇದಕ್ಕೆ ಈ ಒಂದ ವಿಶಿಷ್ಟ ಯೋಜನೆಗೆ ವಿಶ್ವಬ್ಯಾಂಕ್ ಸಹಾಯ ಯಾವಾಗ ಬಂದಿದೆ ಎಂದರೆ ೧೯೭೮ನೇ ಇಸವಿ ಅಕ್ಟೋಬರ್ ಜುಲೈ ೨೪, ೧೯೮೨ನೇ ಇಸವಿಗೆ ಮೂರು ವರ್ಷಗಳಾಗಿದ್ದರೂ ಸಹಿತ ೧೯೮೫ನೇ ಇಸವಿಗೆ ಪ್ರಾಜೆಕ್ಟ್ ಮುಗಿಯುತ್ತದೆಎಂದರೆ ೧೮೨೨ ಪೋಸ್ಟ್‌ಗಳನ್ನು ಖಾಲಿಇಟ್ಟಿರುವುದಕ್ಕೆ ಯಾರು ಜವಾಬ್ದಾರರು ಮಾನ್ಯ ಮುಖ್ಯಮಂತ್ರಿಗಳೆ ಈ ಇಲಾಖೆಯ ಜವಾಬ್ದಾರಿಯನ್ನ ಹೊತ್ತಿದ್ದರೂ ಇದರ ತೀರ್ಮಾನವನ್ನು ಕೊಡತಕ್ಕಂಥ ಇಲಾಖೆ ಏನು ಇದೆ ಜನರಲ್ ಅಡ್ಮಿನಿಸ್ಟ್ರೇಷನ್ ಡಿ.ಪಿ.ಎ.ಆರ್. ಅದರ ವತಿಯಿಂದ ಯಾವ ಕಾರ್ಯವಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇಡಿ ರಾಜ್ಯದಲ್ಲಿ ಪ್ರಮುಖವಾಗಿ ರೈತರಿಗೆ ಅನು

ಕೂಲವಾಗಬೇಕು ಎನ್ನುವ ಸಲುವಾಗಿ ವರ್ಲ್ಡ್‌ಬ್ಯಾಂಕ್‌ನವರು ೨೦.೫೮ ಕೋಟಿ ರೂಪಾಯಿ ವರ್ಲ್ಡ್ ಬ್ಯಾಂಕ್‌ನವರು ಕೊಟ್ಟಿದ್ದಾರೆ.

೧೨-೦೦ ಮಾಧ್ಯಾಹ್ನ

ಆ ಒಂದು ಸಹಾಯದಿಂದ ಯೋಜನೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲಾಯಿತು. ಆ ಯೋಜನೆಯ ಪ್ರಕಾರ ಮೂರು ಹಂತದಲ್ಲಿ ಫಸ್ಟ್‌ಫೇಸ್ ೩-೧೦-೧೯೭೮ರಲ್ಲಿ ಸೆಕೆಂಡ್ ಫೇಸ್‌ನ ೧-೪-೭೯ ರಲ್ಲಿಮತ್ತು ಮೂರನೆಯ ಫೇಸ್ ೧-೪-೧೯೮೧ ರಲ್ಲಿ ಆಯಿತು. ಇಷ್ಟಾದರೂ ಸಹಿತ ರಿಕ್ರೂಟ್‌ಮೆಂಟ್ ಪಾಲಿಸಿ ವಿಚಾರದಲ್ಲಿ ನಿಮ್ಮ ಡಿಪಿಎಆರ್ ಸರಿಯಾದ ಗೊತ್ತುವಳಿಯನ್ನು ತೆಗೆದುಕೊಳ್ಳದೆ ಸಾವಿರಾರು ಪೋಸ್ಟ್‌ಗಳು ಇವತ್ತಿನ ದಿವಸ ವೆಕೆಂಟ್ ಆಗಿ ಬಹಳ ವರ್ಷಗಳಿಂದ ಕಾರ್ಯಕ್ರಮ ನಡೆಯುತ್ತಿಲ್ಲವೆಂದು ಬಹಳ ವಿಷಾದದಿಂದ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಸಮಯದಲ್ಲಿ ಕಾರ್ಯಕರ್ತರಾದಂತಹ ಬೇನೂರ್‌ರವರು ಹೇಳಿರತಕ್ಕ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಅವರೇ ಬರೆದಿರತಕ್ಕ ಒಂದು ಪುಸ್ತಕದಲ್ಲಿ ಈ ವಿಚಾರವನ್ನು ಬಹಳ ಚೆನ್ನಾಗಿ ತಿಳಿಸಿದ್ದಾರೆ, ನಾವು ಅಗ್ರಿಕಲ್ಚರಲ್ ಅಸಿಸ್ಟೆಂಟ್ ಎಂದು ಕರೆಯುತ್ತೇವೆ. ಅವರು ವಿಲೇಜ್ ಎಕ್ಸ್‌ಟೆನ್‌ಷನ್ ವರ್ಕರ್ಸ್ ಎಂದು ಅವರು ಹೇಳುತ್ತಾರೆ.

"V.E.W. recruits undertake a four year programme of three months training followed by nine months of field work each year, A large number of Village Extension Workers can be put in the field quite rapidly this way and at the same time gain a good mix of formal instruction and practical experience. Generally pre-service training courses to Village Extension Workers where the candidates are secondary school graduates with agricultural background should take about one year".

೧೮೮೦ ಜನಗಳಿಗೆ ಕೆಲಸ ಸಿಗತಕ್ಕ ಯೋಜನೆ. ಮೂರು ವರ್ಷಗಳಿಗೆ ಈ ಯೋಜನೆ ಶುರುವಾಗಿದೆ. ಇನ್ನು ಎರಡು ವರ್ಷ ಉಳಿದಿದೆ. ರಿಕ್ರೂಟ್ ಮಾಡಲಿಕ್ಕೆ ಏತಕ್ಕೆ ತಡವಾಯಿತು ? ನೀವು ಅವರಿಗೆ ಟ್ರೈನಿಂಗ್ ಕೊಡುವುದು ಯಾವಾಗ ? ಅವರನ್ನು ಯಾವಾಗ ಪೋಸ್ಟ್ ಮಾಡುತ್ತೀರಿ ಇದನ್ನು ಸರ್ಕಾರದವರು ತಿಳಿಸಬೇಕು. ೨೮.೫೦ ಲಕ್ಷ ವಿಶ್ವ ಬ್ಯಾಂಕಿನಿಂದ ಸಾಲವಾಗಿ ಪಡೆಯಲಾಗಿದೆ. ವಿಶ್ವ ಬ್ಯಾಂಕಿನಲ್ಲಿ ತೆಗೆದುಕೊಂಡಿರುವ ಒಂದು ಪೈಸೆ ಕೂಡ ಅದು ಸಾಲ, ನಾವು ಈ ಹಣವನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕೆಂಬುದನ್ನು ಯೋಚನೆ ಮಾಡಬೇಕು. ನನಗೆ ಆಶ್ಚರ್ಯವಾಗುತ್ತಿದೆ, ಮುಖ್ಯಮಂತ್ರಿಗಳು ಇದರ ಕಡೆಗೆ ಗಮನ ಕೊಡಬೇಕು. ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹಾಜರಿರುತ್ತಾರೆಯೋ ಎಂದು ಕೇಳುತ್ತೇನೆ. ರೈತರ ವಿಚಾರವಾಗಿ ಸಾಕಷ್ಟು ಅನುಕಂಪ ಪಟ್ಟಿದ್ದಾರೆ. ನಾನು ಈ ವಿಷಯವನ್ನು ರಾಜಕೀಯವಾಗಿ ಮಾತನಾಡುತ್ತಿಲ್ಲ ವ್ಯಸನದಿಂದ ಹೇಳುತ್ತಿದ್ದೇನೆ. ಅವರ ಕೈಕೆಳಗೆ ಇರತಕ್ಕ ಈ ಇಲಾಖೆಯ ಕಾರ್ಯಕ್ರಮಗಳನ್ನು ನೋಡಿಲ್ಲವೆಂದು ಹೇಳಿದರೆ ನಾವು ಅತ್ಯಂತ ವ್ಯಸನಪಡಬೇಕಾಗಿದೆ. ಅದರ ಜೊತೆಗೆ ಇದಕ್ಕೆ ಬೇಕಾದಂತಹ ಬಿಲ್ಡಿಂಗ್ ವಿಚಾರ ಏನಾಗಿದೆ. ಅವರ ವರದಿಯ ಪ್ರಕಾರ ಅದು ೪೮ ಪುಟಗಳು ಇದೆ, ೧೨೯ ಬಿಲ್ಡಿಂಗ್‌ಗಳನ್ನು ಕಟ್ಟಬೇಕಾಗಿತ್ತು. ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್‌ಗಳು ವಾಸ ಮಾಡುವುದಕ್ಕೆ ಮನೆಗಳನ್ನು ಕಟ್ಟಿಕೊಡಬೇಕಾಗಿದೆ ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್‌ಗಳು ಸತ್ವಪೂರ್ಣವಾಗಿ ಕೆಲಸ ಮಾಡಬೇಕಾದರೆ ಆಯಾ ಪ್ರದೇಶಗಳಲ್ಲೇ ವಾಸ ಮಾಡಬೇಕು. ರೈತರ ಸಂಪರ್ಕ ಇಟ್ಟುಕೊಳ್ಳಬೇಕು. ಖರ್ಚು ಮಾಡಬೇಕಾಗಿರುವ ಹಣ ವಿಶ್ವಬ್ಯಾಂಕಿನದು, ೩ ವರ್ಷಗಳಲ್ಲಿ ೧೨೯ ಮನೆಗಳನ್ನು ಕಟ್ಟಬೇಕು. ಒಟ್ಟು ೩.೧೬ ಮನೆಗಳನ್ನು ಕಟ್ಟಬೇಕಾಗಿದೆ. ಮನೆಗಳನ್ನು ಕಟ್ಟಬೇಕಾದರೆ ಲೋಕೋಪಯೋಗಿ ಇಲಾಖೆ ಇದೆ, ಅವರು ಏನು ಮಾಡುತ್ತಾರೆ ? ಅವರಿಗೆ ಒಪ್ಪಿಸಿದ್ದರೆ. ಇಂತಹ ಪ್ರಾಮುಖ್ಯವಾದ ಯೋಜನೆ ಏನು ಇದೆ ರೈತರಿಗೆ ತಾಂತ್ರಿಕ ಜ್ಞಾನವನ್ನು ಹೆಚ್ಚಿಸಬೇಕು. ನಾನು ಕಳೆದ ವರ್ಷ ಹೇಳಿರುತ್ತೇನೆ. ನಾನು ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ. ಬೆನೂರ್‌ರವರು ಚೆನ್ನಾಗಿ ಬರೆದಿದ್ದಾರೆ. ಇದು ರೈತರಿಗೆ ಲಾಭ ಬರತಕ್ಕ ಯೋಜನೆ, ರೈತರಿಗೆ ತಾಂತ್ರಿಕ ಜ್ಞಾನವನ್ನು

ಹೆಚ್ಚಿಸತಕ್ಕ ಯೋಜನೆಯಾಗಿದೆ. ಇಂತಹ ಪ್ರಾಮುಖ್ಯವಾದ ಯೋಜನೆಯ ಕಡೆಗೆ ಸರ್ಕಾರ ಗಮನ ಹರಿಸಿಲ್ಲ ಎನ್ನುವುದು ಈ ವರದಿಯ ಮೂಲಕ ಗೊತ್ತಾಗುತ್ತದೆ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಒಂದು ಕೋ-ಆರ್ಡಿನೇಷನ್ ಕಮಿಟಿಯನ್ನು ಮಾಡಿ, ಮ್ಯಾನೇಟರಿಂಗ್ ಕಮಿಟಿಯನ್ನು ಮಾಡಲಿ. ಈಗ ಇರಬಹುದು ಇಲ್ಲದಿರಬಹುದು. ಇದ್ದರೂ ಅದು ಸತ್ವಪೂರ್ಣವಾಗಿ ಕೆಲಸ ಮಾಡಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ. ಅಡಿಷನಲ್ ಚೀಫ್ ಸೆಕ್ರೆಟರಿಯವರ ನೇತೃತ್ವದಲ್ಲಿ ಇದು ಆಗಬೇಕು. ಮ್ಯಾನೇಟರಿಂಗ್ ಕಮಿಟಿಯಲ್ಲಿ ಡೆವಲಪ್‌ಮೆಂಟ್ ಕಮೀಷನರ್, ವ್ಯವಸಾಯ ಇಲಾಖೆಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆಯ ಕಟ್ಟಡ ಮತ್ತು ಸಂಪರ್ಕಗಳ ಮುಖ್ಯ ಇಂಜನೀಯರ್ ಇವರನ್ನು ಆ ಕಮಿಟಿಯಲ್ಲಿ ಹಾಕಿ ಅವರು ತಿಂಗಳಿಗೆ ಒಂದುಸಾರಿ ಕುಳಿತು ಅವರ ಕಾರ್ಯ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ರೆವ್ಯೂಮಾಡಿ, ಆಗಿರತಕ್ಕ ಲೋಪಗಳನ್ನು ಗಮನಕ್ಕೆ ತೆಗೆದುಕೊಂಡು ಸರಿಪಡಿಸುವುದಕ್ಕೆ ಸತ್ವಪೂರ್ಣವಾದಂತಹ ಕೆಲಸವನ್ನು ಮಾಡುವುದಕ್ಕೆ ಅವಕಾಶ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯದಲ್ಲಿ ಬೆನೂರ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಏತಕ್ಕೆ ಕೋಟ್ ಮಾಡುತ್ತಿದ್ದೇನೆಂದರೆ ಆ ಒಂದು ಸಿಸ್ಟಮ್ ಈ ಯೋಜನೆ ಪೂರ್ಣವಾಗಬೇಕಾದರೆ ಕಟ್ಟಡ ದೊರೆಯಬೇಕು. ಈ ಯೋಜನೆಗೆ ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ ಅವರು ಏನು ಹೇಳಿದ್ದಾರೆಂದರೆ

"The simplicity of the system is notable. Before hastening to initiate something similar perhaps a ncte of caution should be sounded so that the readers will pause to reflect on what has led to its success. The fundamental requirements are firm decisions to set priorities and concentrate efforts to ensure success right from the start" ಮೊದಲೇ ಹೇಳಿದ ಹಾಗೆ ಶುರುವಾಗಿ ಮೂರು ವರ್ಷಗಳಾಯಿತು. ಇನ್ನು ಎರಡು ವರ್ಷಗಳು ಉಳಿದಿದೆ ಅವರು ಹೇಳುತ್ತಾರೆ.

"Such initial success generates growing enthusiasm for the system and the possibilities it offers of higher productivity in return for the hard work done both by the extension agent and by the farmers themselves".

ಎರಡು ದೃಷ್ಟಿಯಲ್ಲಿ ನೋಡುವುದಾದರೆ ಇದು ಸರ್ಕಾರಕ್ಕೆ ಭೂಷಣ ತರತಕ್ಕಂತಹ ವಿಚಾರವಲ್ಲ. ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಸತ್ವಪೂರ್ಣವಾಗಿ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ರಾಬರ್ಟ್ ಮ್ಯಾಕನಮಾರ ಹೇಳಿದ್ದಾರೆ ಅದನ್ನು ಕೋಟ್ ಮಾಡುವುದಕ್ಕೆ ಹೋಗುವುದಿಲ್ಲ, ಬಹಳ ಸಮಯವಾಗುತ್ತದೆ. ವರದಾನವಾಗಿ ನಮ್ಮ ರಾಜ್ಯಕ್ಕೆ ಯೋಜನೆ ಇದೆ ಆದಷ್ಟು ಶೀಘ್ರವಾಗಿ ಚೆನ್ನಾಗಿ ನಡೆಸುವುದಕ್ಕೆ ಬಡ ಮತ್ತು ಸಣ್ಣ ರೈತರಿಗೆ ವ್ಯವಸಾಯ ತಂತ್ರಜ್ಞಾನವನ್ನು ಅದರ ಲಾಭವನ್ನು ಪಡೆದುಕೊಳ್ಳಬೇಕಾಗಿತ್ತು. ತಂತ್ರಜ್ಞಾನ ಸಿಗತಕ್ಕದ್ದು ಬಹಳ ಸುಲಭವಾಗಿ ಹೇಳಬೇಕೆಂದರೆ ಕೃಷ್ಟಿ ಇಲಾಖೆಯನ್ನು ಹೋಗಿ ನೋಡಬಹುದು, ವ್ಯವಸಾಯ ಇಲಾಖೆಯ ಅಧಿಕಾರಿಗಳನ್ನು ಹೋಗಿ ನೋಡಬಹುದು, ತಂತ್ರಜ್ಞಾನವನ್ನು ಎಲ್ಲೆಲ್ಲಿ ಸಿಗುತ್ತದೆ ಅದನ್ನು ಹುಡುಕಿ ಅದನ್ನು ಅಭ್ಯಾಸಮಾಡಿ ಬೆಳೆಯನ್ನು ಉತ್ಪಾದನೆ ಮಾಡತಕ್ಕಂತಹದ್ದು ಬಹಳ ಸುಲಭ.

ಆದರೆ ಈ ತತ್ವಜ್ಞಾನದ ಅರಿವು ಬಡ ರೈತರಿಗೆ ಸಿಗುತ್ತಿಲ್ಲ. ನಾವು ಈ ತಂತ್ರಜ್ಞಾನ ಪ್ರಸಾರ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದೇವೆ. ಕೃಷಿ ವಿಶ್ವವಿದ್ಯಾನಿಲಯದ ಮೂಲಕ, ವ್ಯವಸಾಯ ಇಲಾಖೆ ಮೂಲಕ ಹಾಗೂ ನಾನಾ ತರಬೇತಿ ಕೇಂದ್ರಗಳ ಮೂಲಕ ಈ ತಂತ್ರಜ್ಞಾನವನ್ನು ಪ್ರಸಾರ ಮಾಡುತ್ತಿದ್ದೇವೆ. ಇದರ ಒಂದು ಪೂರ್ಣ ಲಾಭ ಬಡ ರೈತರಿಗೆ ಸಣ್ಣ ರೈತನಿಗೆ ಸಿಗಬೇಕಾದರೆ ಇಂತಹ ಯೋಜನೆ ಬಹಳ ಮುಖ್ಯವಾದದು. ಆದ್ದರಿಂದ ಇದನ್ನು ಸರ್ಕಾರದವರು ಲಘುವಾಗಿ ಭಾವಿಸದೆ ಆದಷ್ಟು ಶೀಘ್ರವಾಗಿ ಅಡಿಷನಲ್ ಚೀಫ್-ಸೆಕ್ರೆಟರಿ ಅವರ ಅಧ್ಯಕ್ಷತೆಯಲ್ಲಿ ಒಂದು ಸೆಲ್ ರಚನೆ ಮಾಡುವುದರ ಮೂಲಕ ಇದು ಸ್ವತಪೂರ್ಣವಾಗಿ ನಡೆಸಲು ಎಲ್ಲ ಕಾರ್ಯಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ರೆಕ್ರೂಟ್‌ಮೆಂಟ್ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಸರ್ಕಾರ ಇಷ್ಟೊಂದು ಅಗಾಧ ಸಂಖ್ಯೆಯಲ್ಲಿ ಜಾಗಗಳನ್ನು ಖಾಲಿ ಇಟ್ಟುಕೊಂಡಿರುವುದು ಸರ್ಕಾರಕ್ಕೆ ಭೂಷಣ ತರುವುದಿಲ್ಲ. ಸಾಮಾನ್ಯ ಆಡಳಿತದ ಬೇಡಿಕೆಗಳ ಮೇಲಿನ ಚರ್ಚೆ ಇಲ್ಲಿ ನಡೆಯುತ್ತಿದ್ದಾಗ ಅನೇಕ ಇಲಾಖೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿ ಬಿದ್ದಿವೆ ಎಂದು ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಕೇಳಿದ್ದೇನೆ. ನಮ್ಮ ಯೋಜನೆಗಳ ಪೂರ್ಣ ಲಾಭ ಪಡೆಯಬೇಕಾದರೆ We are running out of time. ಜನರು ಕಾಯುತ್ತಾ ಕೂರುವುದಿಲ್ಲ. ಇದು ಶ್ರೀಮಾನ್ ಶ್ರೀಕಂಠಯ್ಯನವರಿಗೂ ಗೊತ್ತಿವೆ. ೧೯೪೭ರಲ್ಲಿ ಏನು ಪರಿಸ್ಥಿತಿ ಇತ್ತು ಮತ್ತು ಜನರಲ್ಲಿ ಏನು ಮೌಢ್ಯತೆ ಇತ್ತು ಅದು ೧೯೮೨ನೇ ಇಸವಿ ಜುಲೈ ತಿಂಗಳ ೨೪ರಂದು ಇಲ್ಲ, ಆದ್ದರಿಂದ ಅಧಿಕಾರ ವಿಕೇಂದ್ರೀಕರಣ ಮೊದಲು ಆಗಬೇಕು. ಮತ್ತು ವ್ಯವಸಾಯ ಇಲಾಖೆಯಲ್ಲಿರುವ ಎಲ್ಲ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. Please decentralise the whole recruitment system. ರಾಜ್ಯಮಟ್ಟದಲ್ಲಿ ಏತಕ್ಕೆ ಈ ಅಧಿಕಾರ ಇಟ್ಟುಕೊಳ್ಳಬೇಕು ? ಸಾವಿರಾರು ಲಕ್ಷಾಂತರ ಯುವಕ ಯುವತಿಯರು ಪ್ರತಿ ಸಲ ರೆಕ್ರೂಟ್‌ಮೆಂಟ್ ಅನೌನ್ಸ್ ಮಾಡಿದಾಗಲೂ ಅರ್ಜಿಗಳನ್ನು ಹಾಕಿಕೊಳ್ಳುವುದು ಮತ್ತು ಈ ಮೂಲಕ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಪಡೆಯುವುದು ಕೊನೆಯಲ್ಲಿ ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಅದನ್ನು ರದ್ದು ಮಾಡಿ ಇನ್ನೊಂದು ರೆಕ್ರೂಟ್‌ಮೆಂಟ್ ಬಗ್ಗೆ ಅದೇ ಜಾಗದಲ್ಲಿ ಹೊರಡಿಸುವುದು ಈಗ ನಡೆಯುತ್ತಿದೆ. ಇದು ಸರಿಯೇ ಎಂಬುದನ್ನು ತಾವು ಯೋಚನೆ ಮಾಡಬೇಕು ? ವ್ಯವಸಾಯ ಇಲಾಖೆಯಲ್ಲಿಯೇ ೧೮೪೪ ಹುದ್ದೆಗಳು ಖಾಲಿ ಇವೆ. ಇದೇ ರೀತಿ ಬೇರೆ ಬೇರೆ ಇಲಾಖೆಗಳಲ್ಲಿಯೂ ಸಾವಿರಾರು ಹುದ್ದೆಗಳು ಖಾಲಿ ಇವೆ. ಇಷ್ಟೊಂದು ಹುದ್ದೆಗಳು ಖಾಲಿ ಇರುವಾಗ ತಾವು ರಾಜ್ಯಮಟ್ಟದಲ್ಲಿ ಅರ್ಜಿಗಳನ್ನು ಕರೆದರೆ, ಬಂದಂಥ ಅರ್ಜಿಗಳನ್ನು ಫೈಲ್ ಮಾಡಿ ಇಂಟರ್‌ವ್ಯೂ ಕರೆಯಬೇಕಾದರೆ ಆರೆಂಟು ತಿಂಗಳುಗಳು ಬೇಕಾಗುತ್ತದೆ. ಆದ್ದರಿಂದ ಡಿಸ್ಟ್ರಿಕ್ಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ರಚನೆ ಮಾಡಿ ವಾರ್-ಫುಟಿಂಗ್‌ನಲ್ಲಿ ಅಪ್ಲಿಕೇಷನ್‌ಗಳನ್ನು ಕರೆದು ಅವುಗಳನ್ನು ವಿತರಣೆ ಮಾಡುವುದರ ಮೂಲಕ ಎಲ್ಲ ಜಾಗಗಳನ್ನು ಭರ್ತಿ ಮಾಡಬೇಕೆಂದು ಹೇಳುತ್ತೇನೆ. ಇದು ವ್ಯವಸಾಯ ಇಲಾಖೆಯಲ್ಲಿ ಮಾತ್ರವಲ್ಲ ಎಲ್ಲ ಇಲಾಖೆಗಳ ಪರಿಮಿತಿಯಲ್ಲೂ ಆಗಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಪ್ರಾಮುಖ್ಯವಾಗಿ ಖುಷ್ಕಿ ಬೇಸಾಯ ಕ್ರಮದ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸುತ್ತೇನೆ. ನಮ್ಮ ರಾಷ್ಟ್ರದಲ್ಲಿ ೧೪೩ ಹೆಕ್ಟೇರ್‌ಗಳಷ್ಟು ಪ್ರದೇಶ ಖುಷ್ಕಿ ಬೇಸಾಯದಲ್ಲಿ ಬರುತ್ತದೆ. 75% of the total area is under dry land farming. It contributes approximately 132 million tonnes of annual grains, which is about 45% of the total national production. Nearly 92% of the pulses and 90% of oilseeds in our country comes from the dry land belt. Dry farming, therefore, assumes a prominent position in the Indian agriculture. 60.51% of total area is under cotton, 70.06% of the total area is under groundnut and 36.52% of the total area is under other oilseeds. ಅಂದ ಮೇಲೆ ಇದರ ಪ್ರಾಮುಖ್ಯತೆ ಎಷ್ಟೆಂಬುದು ಗೊತ್ತಾಗುತ್ತದೆ. ಇದರ ಜೊತೆಗೆ ಕೆಲವು ತಜ್ಞರು ಕೆಲವು ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಖುಷ್ಕಿ ಬೇಸಾಯ ಕ್ರಮವನ್ನು ಸರಿಯಾದ ರೀತಿಯಲ್ಲಿ ಮಾಡುವುದಾದರೆ ಇದರ ಒಂದು ಪೊಟೆನ್ಷಿಯಾಲಿಟಿ ಏನಿದೆ ಅಂದರೆ ಈಗ ಎಕರೆಗೆ ೪-೫ ಕ್ವಿಂಟಾಲ್ ಏನು ಬೆಳೆಯಲಾಗುತ್ತಿದೆ, ಇದನ್ನು ೨೦-೨೫ ಕ್ವಿಂಟಾಲ್‌ವರೆಗೆ ಹೆಚ್ಚಿಸಿ ಬೆಳೆದಿರತಕ್ಕಂಥ ಉಧಾಹರಣೆಗಳಿವೆ. ಡೆಮಾನ್‌ಸ್ಟ್ರೇಷನ್ ಮೂಲಕ ಕೃಷಿ ತಜ್ಞರು ಇದನ್ನು ಮಾಡಿ ತೋರಿಸಿಕೊಟ್ಟಿದ್ದಾರೆ ಹಲವಾರು ಪತ್ರಿಕೆಗಳ ಮೂಲಕ ಮತ್ತು ಇತರೆ ಪಬ್ಲಿಕೇಷನ್‌ಗಳ ಮೂಲಕ ಕೃಷಿ ತಜ್ಞರು ಈ ರೀತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಬಹುದು ಸಾಧ್ಯ ಎಂದು ಹೇಳಿದ್ದಾರೆ. ಖುಷ್ಕಿ ವ್ಯವಸಾಯವನ್ನು ಸತ್ವಪೂರ್ಣವಾಗಿ ಖುಷಿ ಮಾಡಿದ್ದೇ ಆದರೆ ನಮ್ಮ ರಾಷ್ಟ್ರಕ್ಕೆ ಹಾಗೂ ನಮ್ಮ ರೈತರಿಗೆ ಹಲವಾರು ಅನುಕೂಲಗಳಾಗುವುದರಲ್ಲಿ ಸಂಶಯವಿಲ್ಲವೆಂದು ಈ ಕೃಷಿ ತಜ್ಞರು ಹೇಳುತ್ತಾರೆ The average production of dry land is aboutr 5 quintals per hectare but the yield at the demonstration cente with new technology is about 25-30 quintals. Hence petentiality is very important. Average production in dryland can be raised

between 200 to 400 per cent. ಆದ್ದರಿಂದ ಇದನ್ನು ಸರ್ಕಾರದವರು ಯೋಚನೆ ಮಾಡ ಬೇಕು. ೧೪೩ ಮಿಲಿಯನ್ ಹೆಕ್ಟಾರ್ಸ್ ಜಮೀನ್‌ನಲ್ಲಿ ಪ್ರತಿ ಹೆಕ್ಟಾರ್‌ನಲ್ಲಿಯೂ ಒಂದು ಕ್ವಿಂಟಾಲ್ ಹೆಚ್ಚು ಉತ್ಪಾದನೆ ಮಾಡಿದರೂ ಸಹ ಈ ರಾಷ್ಟ್ರದಲ್ಲಿ ಆಹಾರದ ಸಮೃದ್ಧಿಯನ್ನು ತಾವು ಕಾಣುತ್ತೇವೆ. ಆದ್ದರಿಂದ ಡ್ರೈ-ಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮನ್ನು ಆದಷ್ಟೂ ಶೀಘ್ರವಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ಈಗ ನಮ್ಮ ಸರ್ಕಾರ ಕೆಲವು ಕಡೆಗಳಲ್ಲಿ ಮಾಡುತ್ತಿದ್ದರೆ, ಅದು ಸಾಲುವುದಿಲ್ಲ ಈ ವಿಚಾರದಲ್ಲಿ ಡೆಮಾನ್ಸ್‌ಟ್ರೇಷನ್ ಒದೇ ಸಾಲುವುದಿಲ್ಲ. ಈ ವಿಚಾರದಲ್ಲಿ ನಾನು ವಿರೋಧ ಪಕ್ಷದಲ್ಲಿದ್ದರೂ ಸಹ ನಾವೂ ನೀವೂ ಕುಳಿತು ಯೋಚನೆ ಮಾಡಿ ಈ ರಾಜ್ಯದ ಸಮಸ್ಯೆಯನ್ನು ಬಗೆಹರಿಸಬೇಕಾಗುತ್ತದೆ. ರಾಜಕೀಯವಾಗಿ ಇಲ್ಲಿ ಕೆಲವು ಆರೋಪಗಳನ್ನು ಮಾಡಬಹುದು ಮತ್ತು ಕೆಲವು ವಿಚಾರ ಗಳನ್ನು ಪ್ರಸ್ತಾಪ ಮಾಡಬಹುದು. ಆದರೆ ಕಟ್ಟಕಡೆಯಲ್ಲಿ ಈ ರಾಷ್ಟ್ರದ ಅಭಿವೃದ್ಧಿಯಾಗಬೇಕಾ ದರೆ ಮತ್ತು ಈ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ನಾವೂ ನೀವೂ ಜೊತೆಗೂಡಿ ಕೆಲಸ ಮಾಡಬೇಕಾ ಗುತ್ತದೆ. ನಾವೂ ನೀವೂ ಈ ದೇಶದ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳನ್ನು ಹೋಗಲಾಡಿ ಸಲು ಒಗ್ಗೂಡಿ ಕೆಲಸ ಮಾಡಬೇಕಾಗುತ್ತದೆ. ಕಾರ್ಮಿಕರೇ ಆಗಲಿ, ರೈತರೇ ಆಗಲಿ, ರಾಜಕಾರಣಿಯೇ ಆಗಲಿ, ಅಧಿಕಾರಿಯೇ ಆಗಲಿ, ಎಲ್ಲರೂ ಸೇರಿ ಕೆಲಸ ಮಾಡಬೇಕಾಗುತ್ತದೆ. ಈ ಕಾರಣದಿಂದಲೇ ನಾನು ನಮ್ಮ ಸರ್ಕಾರ ಎಂದು ಹೇಳಿದ್ದು ಇಂತಹ ವಿಚಾರಗಳನ್ನು ರಾಜಕೀಯವಾಗಿ ಉಪಯೋಗಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡ ಬೇಡಿ. ಇಂತಹ ಕೆಲಸ ಇವೊತ್ತಿನ ದಿವಸ ಏತಕ್ಕಾಗಿ ನಡೆಯುತ್ತಿಲ್ಲ ವೆನ್ನುವುದಕ್ಕೆ ತಜ್ಞರು ಕೊನೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ.

"Deficiency in dissemination of information is there. Supply of inputs to the interior area particularly to the dryland area is unsatisfactory,"

ಎಂದು ಮೂರನೆಯದಾಗಿ ಈ ರೀತಿ ಹೇಳಿದ್ದಾರೆ;—

"Transfer of technology to the dryland farmers is very week Emphasis should be on the cropping pattern."

ಎಂದು. ಆದ್ದರಿಂದ ನಾನು ಪುನಃ ೨೦ ಅಂಶಗಳ ಕಾರ್ಯಕ್ರಮದ ಕಡೆಗೆ ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯುತ್ತೇನೆ.

ಆದರಲ್ಲೂ ಸಹಿತ ಈ ಡ್ರೈಲ್ಯಾಂಡ್ ವಿಚಾರದಲ್ಲಿ ಪ್ರಧಾನ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಅದರಿಂದ ಆದರ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ಒಂದು ಕ್ವಿಂಟಾಲ್ ಅಥವಾ ೫೦ ಕೆ.ಜಿ. ಅಂತ ಹೆಚ್ಚಿಸಿದ್ದರೂ ಸಹ ಇಡೀ ರಾಷ್ಟ್ರದ ಉತ್ಪತ್ತಿ ಸಾಕಷ್ಟು ಹೆಚ್ಚಾ ಗುತ್ತದೆ ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಇನ್ನು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ ಇದು ನಮ್ಮ ರಾಜ್ಯ, ವರ ಇದ್ದ ಹಾಗ್ಗೆ ಇದರ ವಿಷಯದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಗೆಲ್ಲಾ ಗೊತ್ತಿ ರುವ ಹಾಗೆ ಈ ಕೃಷಿ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದದ್ದು ಡಾ. ರಾಧಾಕೃಷ್ಣ ಅವರ ನೇತೃತ್ವದಲ್ಲಿ ಅಂತ ಹೇಳಬೇಕಾಗಿದೆ. ಅದು ಹೇಗೆಂದರೆ ೧೯೪೯ನೇ ಇಸವಿಯಲ್ಲಿ ಎಜುಕೇಷನ್ ಕಮೀಷನ್ ಅಂತ ಏನು ಮಾಡಿದರು ಅವರ ಒಂದು ಸಲಹೆ ಮೇಲೆ ಹಾಗೂ ಇಂಡೋ ಅಮೇರಿಕನ್ ಜಾಯಿಂಟ್ ಟೀಮ್ ನವರ ಒಂದು ಸಲಹೆ ಮೇಲೆ ಇಡೀ ರಾಷ್ಟ್ರದಲ್ಲಿ ಈ ಒಂದು ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯಾ ಯಿತು. ಇದು ಸ್ಥಾಪನೆಯಾದ ಮೇಲೆ ಎಷ್ಟೋ ಅಭಿವೃದ್ಧಿ ಕಾರ್ಯಗಳು ನಡೆದಿವೆ ಅನ್ನುವುದನ್ನು ನಾನು ಸಂತೋಷದಿಂದ ಹೇಳುತ್ತೇನೆ. ಈ ವಿಶ್ವವಿದ್ಯಾನಿಲಯಗಳು ಸತ್ವಪೂರ್ಣವಾಗಿ ರಾಷ್ಟ್ರದಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸಬೇಕಾದರೆ ನಾವೂ ಸಹ ಅದರ ಬಗ್ಗೆ ಗಮನ ಕೊಡಬೇಕಾಗುತ್ತದೆ. ನಮ್ಮ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದ ವ್ಯವಸಾಯ ಇಲಾಖೆಯೂ ಸಹ ಕೆಲಸ ಮಾಡಿದ್ದೆ ಇಲ್ಲ ಅಂತ ಹೇಳುವುದಿಲ್ಲ, ಆದರೆ ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ನಮ್ಮ ಕಾಂಟ್ರಿಬ್ಯೂಷನ್ ಏನು ಇದೆ ನಿಜವಾಗಿಯೂ ಅದು ಪ್ರಶಂಸನೀಯವಾದುದು ಎಂದು ಹೇಳುತ್ತೇನೆ ಮೊದಲು ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ವೈಸ್‌ಛಾನ್ಸಲರ್ ಆಗಿ ಕೆ.ಸಿ. ನಾಯಕ್ ಇದ್ದರು, ಅನಂತರ

ಡಾ. ಅರಕೆರೆ ಬಂದರು, ಅನಂತರ ಡಾ. ದ್ವಾರಕೀನಾಥ್ ಬಂದರು, ಈಗ ಪೆರೂರ್‌ರವರು ಇದ್ದಾರೆ. ಇವರೆಲ್ಲರೂ ಈ ಕೃಷಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ಬೇಕಾದಷ್ಟು ಶ್ರಮಿಸಿದ್ದಾರೆ, ಅಷ್ಟೇ ಅಲ್ಲದೆ ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ಅದರ ಸಿಬ್ಬಂದಿ ವರ್ಗದವರೂ ಸಹ ಬಹಳ ಕಷ್ಟಪಟ್ಟಿದ್ದಾರೆ. ಇದು ಒಬ್ಬೊಬ್ಬ ವ್ಯಕ್ತಿಗಳಿಂದ ಅಭಿವೃದ್ಧಿಯಾಗತಕ್ಕದಲ್ಲ. ಎಲ್ಲರೂ ಸಹ ಚೆನ್ನಾಗಿ ಕೆಲಸ ಮಾಡಿ, ಇದರ ಒಂದು ಉಪಯೋಗವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ನಮ್ಮ ರಾಜ್ಯ ಸರ್ಕಾರದವರು ಏತಕ್ಕೆ ತಿರಸ್ಕಾರವೋ ಏನೋ ಇದಕ್ಕೆ ಪುರಸ್ಕಾರವನ್ನು ಹಣದ ರೂಪದಲ್ಲಿ ಎಷ್ಟು ಕೊಡಬೇಕೋ ಅಷ್ಟನ್ನು ಕೊಡುತ್ತಾ ಇಲ್ಲ ಎಂದು ಹೇಳುವುದಕ್ಕೆ ನನ್ನ ಮನಸ್ಸು ನೋವಾಗುತ್ತದೆ. ತಮಗೆ ಈ ಬಗ್ಗೆ ನಾನು ಅಂಕಿಅಂಶಗಳ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ ವಿಶ್ವವಿದ್ಯಾನಿಲಯದವರು ನಮ್ಮ ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಸಾಕಷ್ಟು ಪಾತ್ರವನ್ನು ವಹಿಸಿದ್ದಾರೆ ಇದರಲ್ಲಿ ರೀಸರ್ಚ್ ಎಕ್ಸಟೆನ್‌ಷನ್ ಮತ್ತು ಟೀಚಿಂಗ್ ಏನು ಇದೆ ಅದು ಸರಿಯಾದ ರೀತಿಯಲ್ಲಿ ಆಗಬೇಕಾದರೆ ಹಣದ ಅನುಕೂಲತೆ ಸಾಕಷ್ಟು ಆಗಬೇಕು. ಆದರೆ ಈ ಅನುಕೂಲತೆಗಳನ್ನು ಎಷ್ಟರಮಟ್ಟಿಗೆ ನಮ್ಮ ಸರ್ಕಾರದವರು ಕಲ್ಪಿಸಿಕೊಡಬೇಕಾಗುತ್ತದೆ ಎನ್ನುವುದನ್ನು ನನ್ನ ಮನಸ್ಸಿಗಂತೂ ಬಹಳ ನೋವಾಗುತ್ತದೆ ಅವರು ಕೇಳಿರತಕ್ಕಂಥಾ ಹಣ ಎಷ್ಟು, ಸರ್ಕಾರದವರು ಕೊಟ್ಟಿರತಕ್ಕಂಥಾ ಹಣ ಎಷ್ಟು? ಈ ರೀತಿ ಹಣವನ್ನು ತಾವು ಕೊಡುವುದಾದರೆ ಈ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳು ನಡೆಯುವುದಾದರೂ ಹೇಗೆ ಅನ್ನುವುದನ್ನು ತಾವು ಮನಗಾಣಬೇಕು. ಸ್ವಾಮಿ, ನಾನು ಇದರ ಬಗ್ಗೆ ಕೆಲವು ಅಂಕಿಅಂಶಗಳನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ೧೯೮೦–೮೧ರಲ್ಲಿ ವಿಶ್ವವಿದ್ಯಾನಿಲಯದವರು ನಮಗೆ ೪೭೦ ಲಕ್ಷ ರೂಪಾಯಿಗಳು ಬೇಕು ಅಂತ ಕೇಳಿದ್ದರೆ ಸರ್ಕಾರದವರು ೪೨೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಈ ಸಾಲಿನಲ್ಲಿ ೪೫ ಲಕ್ಷ ರೂಪಾಯಿಯನ್ನು ಖೋತಾ ಮಾಡಿದ್ದಾರೆ. ೧೯೮೧–೮೨ರಲ್ಲಿ ಅವರು ನಮಗೆ ೫೪೪ ಲಕ್ಷ ರೂಪಾಯಿ ಬೇಕು ಅಂತ ಕೇಳಿದ್ದರೆ ಸರ್ಕಾರದವರು ೪೫೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ,ಅಲ್ಲಿಗೆ ೧೯೮೧–೮೨ಕ್ಕೆ ೯೪ ಲಕ್ಷ ರೂಪಾಯಿ ಖೋತಾ ಆಗಿದೆ, ೧೯೮೨–೮೩ರಲ್ಲಿ ಅವರು ನಮಗೆ ೫೭೫ ಲಕ್ಷ ರೂಪಾಯಿ ಬೇಕು ಅಂತ ಕೇಳಿದ್ದರೆ ಸರ್ಕಾರದವರು ೪೬೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಅಲ್ಲಿಗೆ ೧೯೮೨–೮೩ಕ್ಕೆ ಒಂದು ಕೋಟಿ ೧೫ ಲಕ್ಷ ರೂಪಾಯಿ ಖೋತಾ ಆಗಿದೆ. ಈ ರೀತಿಯಾಗಿ ಸರ್ಕಾರದವರು ಅವರಿಗೆ ಹಣವನ್ನು ಕೊಡುವುದಾದರೆ ಈ ವಿಶ್ವವಿದ್ಯಾನಿಲಯದವರು ಎಷ್ಟರಮಟ್ಟಿಗೆ ಅವರ ರೀಸರ್ಚ್ ಪ್ರೋಗ್ರಾಂನಲ್ಲಿ ಟೀಚಿಂಗ್ ಪ್ರೋಗ್ರಾಂನಲ್ಲಿ, ಎಕ್ಸ್‌ಟೆನ್‌ಷನ್ ಪ್ರೋಗ್ರಾಂನಲ್ಲಿ ಕೆಲಸ ನಡೆಸುವುದಕ್ಕೆ ಸಾಧ್ಯವಾಗಬಹುದು ಅನ್ನುವುದನ್ನು ತಾವು ಮನಗಾಣಬೇಕು, ಅದು ಸಾಧುವಾದುದಲ್ಲ. ಈ ಒಂದು ಸಂಸ್ಥೆ ನಿರ್ಮಾಣವಾದಾಗ ಈ ಸಂಸ್ಥೆಯ ಅಭಿವೃದ್ಧಿ ವಿಚಾರದಲ್ಲಿ ರಾಜ್ಯ ಸರ್ಕಾರದವರದ್ದು ಬಹಳ ಜವಾಬ್ದಾರಿ ಇದೆ ಎನ್ನತಕಂಥಾದ್ದು ಈ ಒಂದು ರಿಪೋರ್ಟ್‌ನಲ್ಲಿ ತಿಳಿಸಿದ್ದಾರೆ. ಈ ಸಂಸ್ಥೆಗೆ ಹಣ ಬರತಕ್ಕಂಥಾ ಆದಾಯದ ಮೂಲಗಳು ಯಾವುವು ಅನ್ನುವುದನ್ನು ಸಹ ಹೇಳಿದ್ದಾರೆ. ಅದಕ್ಕೆ ಬರತಕ್ಕಂಥ ಹಣದ ಮೂಲಗಳು ಯಾವ್ಯಾವುವು ಎಂದರೆ ರಾಜ್ಯ ಸರ್ಕಾರದಿಂದ ಬರುತ್ತದೆ. ಅಲ್ಪಸ್ವಲ್ಪ ರೀಸರ್ಚ್ ಪ್ರೋಗ್ರಾಂನಿಂದ ಬರುತ್ತದೆ, ಮತ್ತು ಐ.ಸಿ.ಎಸ್.ಆರ್.ನಿಂದ ಬರುತ್ತದೆ. ನಾನು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಇದರ ಬಗ್ಗೆ ಕೆಲವು ಅಂಕಿಅಂಶಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಆಲ್ ಇಂಡಿಯಾದ ಅಂಕಿಅಂಶ ೧೯೭೫–೭೬ರಲ್ಲಿ ಇರತಕ್ಕಂಥಾದ್ದನ್ನು ಸಹ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಏತಕ್ಕೆ ಇದನ್ನು ಹೇಳುತ್ತೇನೆಂದರೆ ಈ ಕೃಷಿ ವಿಶ್ವವಿದ್ಯಾನಿಲಯದ ಒಂದು ಅಭಿವೃದ್ಧಿ ಬಗ್ಗೆ ತಮಗೆ ಒಂದು ಅಭಿಪ್ರಾಯ ಬರುವುದಕ್ಕೆ ಸಾಧ್ಯವಾಗುತ್ತದೆ, ಅದಕ್ಕಾಗಿ ತಿಳಿಸುತ್ತೇನೆ. ಇದಕ್ಕೆ ಬರತಕ್ಕಂಥಾ ಹಣದ ಮೂಲಗಳು ಈ ರೀತಿ ಇವೆ ನಮ್ಮ ರಾಜ್ಯ ಸರ್ಕಾರದಿಂದ ೬೭ ಪರ್ಸೆಂಟ್ ಐ ಸಿ.ಎಸ್.ಆರ್‌ನಿಂದ ೧೯ ಪರ್ಸೆಂಟ್ ಮತ್ತು ಸೆಲ್ಫ್ ಫೈನಾನ್ಸಿಂಗ್‌ನಿಂದ ಅಂದರೆ ರೀಸರ್ಚ್ ಫಾರಂನಲ್ಲಿ ಧಾನ್ಯ ವಗೈರೆ ಬೆಳೆದು ಅದರಿಂದ ಬರತಕ್ಕಂಥಾದ್ದು ೧೨ ಪರ್ಸೆಂಟ್. ಸುಮಾರು ಶೇಕಡಾ ೧೦೦ಕ್ಕೆ ೮೦ಭಾಗ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಹಣ ಕೊಡಬೇಕಾಗಿದೆ. ಆದರೆ ಸರ್ಕಾರದವರು ಅವರು ಕೇಳಿದಷ್ಟು ಹಣದಲ್ಲೇ ಖೋತಾ ಮಾಡುವುದಾದರೆ ಅವರು ಅಲ್ಲಿ ಎಷ್ಟರಮಟ್ಟಿಗೆ ಕಾರ್ಯ ನಡೆಸುವುದಕ್ಕೆ ಸಾಧ್ಯ ಅನ್ನುವುದನ್ನು ತಾವು ಅರಿತುಕೊಳ್ಳಬೇಕು. ಇದು ಒಂದೇ ಅಲ್ಲ, ಇದರ ಜೊತೆಗೆ ಸರ್ಕಾರದವರು ಹಣವನ್ನು ಅವರಿಗೆ ಕೊಡುವಾಗಲೂ ಸಹಿತ ಹಲವಾರು ಸಲ ಡಿಲೇ ಮಾಡಿದ್ದಾರೆ. ಹೀಗಾದರೆ ಅವರು ಹೇಗೆ ನಡೆಸಬೇಕು. ರೀಸರ್ಚ್ ಪ್ರೋಗ್ರಾಂನಲ್ಲಿ ಸಾಕಷ್ಟು ಹಣ ನೀಡದೆ ಅದನ್ನು

ನಡೆಸುವುದಕ್ಕಾಗುತ್ತದೆಯೋ? ರಿಸರ್ಚ್ ಲ್ಯಾಬರೋಟರಿಯನ್ನು ಇವರು ಹಣ ಕೊಡಲಿಲ್ಲಾ ಎಂದುನಿಲ್ಲಿಸುವುದಕ್ಕಾಗುತ್ತದೆಯೋ ? ರೀಸರ್ಚ್ ಫಾರಂನಲ್ಲಿರುವ ಬೆಳೆಗೆ ಗೊಬ್ಬರ ಹಾಕುವ ಟೈಂನಲ್ಲಿ, ನಮಗೆ ಹಣ ಬಂದಿಲ್ಲ, ಕಷ್ಟ ಇದೆ ಅದರಿಂದ ಗೊಬ್ಬರ ಹಾಕುವುದಕ್ಕಾಗುವುದಿಲ್ಲ ಎಂದು ಆ ಕಾಲಕ್ಕೆ ಹಾಕಬೇಕಾದಂಥಾ ಗೊಬ್ಬರವನ್ನು ಹಾಕದೇ ಇರುವುದಕ್ಕೆ ಸಾಧ್ಯವೇ ? ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಆದುದರಿಂದ ಈಪೊತ್ತಿನ ದಿವಸ ಸರ್ಕಾರದವರು ಈ ವಿಶ್ವವಿದ್ಯಾನಿಲಯಕ್ಕೆ ಏನು ಹಣವನ್ನು ಕೊಡುತ್ತಾರೋ, ಅವರು ಕೇಳಿದಷ್ಟು ಹಣವನ್ನು ಕೊಡುವುದರ ಜೊತೆಗೆ ಡಿಲೇ ಮಾಡದೇ ಕಾಲಕಾಲಕ್ಕೆ ಸರಿಯಾಗಿ ಆ ಹಣವನ್ನು ಕೊಡಬೇಕೆಂದು ನಾನು ಪ್ರಶ್ನೆ ಹೇಳುತ್ತೇನೆ. ಇದೂ ಅಲ್ಲದೆ ಇನ್ನೊಂದು ವಿಷಯ ಏನೆಂದರೆ ಆರನೇ ಯೋಜನೆಯಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳನ್ನು ಅಲ್ಲಿ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಬಗ್ಗೆ ಅವರು ಹಣವನ್ನು ಕೇಳಿದ್ದಾರೆ. ಆ ಹಣವನ್ನು ಕೇಳಿದಾಗ ತಾವು ಯಾವ್ಯಾವ ವರ್ಷ ಎಷ್ಟೆಷ್ಟು ಕೊಟ್ಟಿದ್ದೀರಿ ಎನ್ನುವುದನ್ನು ತಮ್ಮ ಗಮನಕ್ಕೆ ತಂದರೆ ಸರ್ಕಾರದವರು ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಆಸಕ್ತಿ ವಹಿಸಿದ್ದಾರೆ ಅನ್ನುವುದು ಗೊತ್ತಾಗುತ್ತದೆ. ೧೯೮೦–೮೧ರಲ್ಲಿ ೧೫೦ ಲಕ್ಷ ರೂಪಾಯಿ ಡೆವೆಲಪ್‌ಮೆಂಟ್ ವರ್ಕ್ಸ್‌ಗೆ ಕೇಳಿದ್ದರೆ ತಾವು ಕೊಟ್ಟಿರತಕಂಥಾದ್ದು ೬೩.೮೮ ಲಕ್ಷ. ೧೯೮೧–೮೨ರಲ್ಲಿ ೧೨೫ ಲಕ್ಷ ರೂಪಾಯಿ ಕೇಳಿದ್ದರೆ ತಾವು ಕೊಟ್ಟಿರತಕ್ಕಂಥಾದ್ದು ೧೦೦.೭೦ ಲಕ್ಷ ರೂಪಾಯಿ. ೧೯೮೨–೮೩ಕ್ಕೆ ಅವರು ೨೫೦ ಲಕ್ಷ ರೂಪಾಯಿ ಕೇಳಿದ್ದರೆ ತಾವು ಕೊಟ್ಟಿರತಕ್ಕಂಥಾದ್ದು ೧೨೫ ಲಕ್ಷ ರೂಪಾಯಿ. ಈ ರೀತಿಯಾಗಿ ತಾವು ಕೊಟ್ಟರೆ ಅವರು ಯಾವ ರೀತಿಯಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದು. ನಾನಾ ಅಭಿವೃದ್ಧಿ ಕಾರ್ಯಗಳಿಗೆ ಅವರು ಕೇಳಿದಷ್ಟು ಹಣ ಕೊಟ್ಟರೆ ಅದರ ಆಕ್ಟಿವಿಟೀಸ್ ಚೆನ್ನಾಗಿ ನಡೆಯುತ್ತದೆ. ಇವಕ್ಕೆ ಬಂಡವಾಳ ಹಾಕಬೇಕಾದುದು ಮುಖ್ಯ ಎಂದು ತಿಳಿದುಕೊಂಡು ಹಣ ಖರ್ಚು ಮಾಡಬೇಕಾಗುತ್ತದೆ. ನೀವು ಅದು ಬಿಟ್ಟು ಅವರು ಕೇಳಿದುದರಲ್ಲೇ ಖೋತಾ ಮಾಡುವುದಕ್ಕೆ ಹೊರಟರೆ ಇವಕ್ಕೆ ಒಂದು ಗಾದೆ ಹೇಳಬೇಕಾಗುತ್ತದೆ. ಅದೇನೆಂದರೆ ಯಾವನೋಬ್ಬ ಭಿಕ್ಷುಕ ಮನೆಗೆ ಬಂದರೆ ಅವನು ಬಂದಿದ್ದಾನೆ ಒಂದು ಹಿಡಿ ಅಕ್ಕಿ ಹಾಕಿಬಿಡು ಹೋಗಲಿ ಅಂತ ಹೇಳುತ್ತಾರಲ್ಲಾ ಹಾಗಾಯಿತು, ನೀವು ಅವರಿಗೆ ಕೊಡುವ ಹಣ ನೋಡಿದರೆ ಆ ರೀತಿಯಾದ ಒಂದು ಭಾವನೆಯಲ್ಲಿದೆ ಅಂತ ನಾವು ತಿಳಿಯುವುದಾದರೆ ಈ ವಿಶ್ವವಿದ್ಯಾನಿಲಯ ವಿಚಾರಗಳನ್ನು ಹಾಗೆ ನೋಡುವುದು ಸಾಧ್ಯವೇ ಎನ್ನುವುದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇಡೀ ರಾಜ್ಯದ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ವಿಶ್ವವಿದ್ಯಾನಿಲಯದವರು ನಡೆಸತಕ್ಕಂಥಾ ಕಾರ್ಯಗಳಿಗೆ ಒಂದು ಭದ್ರತೆಯ ದೃಷ್ಟಿಯಲ್ಲಿ ಅವರಿಗೆ ಸಾಕಷ್ಟು ಹಣವನ್ನು ಕೊಡಬೇಕಾಗುತ್ತದೆ. ಹಣಕಾಸಿನ ಕೊರತೆ ಇದೆ ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾವಿರಾರು ರೂಪಾಯಿಗಳನ್ನು ಲಕ್ಷಾಂತರ ರೂಪಾಯಿಗಳನ್ನು ಕೋಟ್ಯಾಂತರ ರೂಪಾಯಿಗಳನ್ನು ಏನು ಪೋಲು ಮಾಡುತ್ತಿದ್ದೀರಿ ಅದನ್ನು ನಿಲ್ಲಿಸಿ ಆ ಹಣವನ್ನು ವಿಶ್ವವಿದ್ಯಾನಿಲಯ‍ದ ಅಭಿವೃದ್ಧಿ ಕಾರ್ಯಗಳಿಗೆ ಕೊಡುವದಾದರೆ ಪರಿಪೂರ್ಣವಾಗಿ ರಾಜ್ಯದ ವ್ಯವಸಾಯದಲ್ಲಿ ಈ ಬಗ್ಗೆ ಅಭಿವೃದ್ಧಿ ಇನ್ನೂ ಹೆಚ್ಚು ಅಭಿವೃದ್ಧಿ ಮಾಡಲು ಸಾಧಕವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

೧೨–೩೦ ಪಿ.ಎಂ.

ಆದ್ದರಿಂದ ದಯವಿಟ್ಟು ಹಣಕಾಸಿನ ವಿಚಾರದಲ್ಲಿ ಉದಾರವಾಗಿ ವರ್ತಿಸತಕ್ಕದ್ದು ಇಲ್ಲಿ ಬಹಳ ಮುಖ್ಯ. ಇದರ ಜೊತೆಯಲ್ಲಿ ಇನ್ನೂ ಎರಡು ವಿಚಾರಗಳನ್ನು ವಿಶ್ವವಿದ್ಯಾನಿಲಯದವರು ತಮ್ಮ ಮುಂದೆ ಇಟ್ಟಿದ್ದಾರೆ. ಆದಷ್ಟು ಶೀಘ್ರವಾಗಿ ಅವುಗಳನ್ನು ತೀರ್ಮಾನ ಮಾಡಿ ಜಾರಿಗೆ ಕೊಡತಕ್ಕದ್ದು ಬಹಳ ಮುಖ್ಯ.

ನ್ಯಾಷನಲ್ ಅಗ್ರಿಕಲ್ಚರಲ್ ರೀಸರ್ಚ್ ಪ್ರಾಜೆಕ್ಟ್‌ಗಾಗಿ ಜಮೀನು ಬೇಕು ಎಂದು ಹೇಳಿ ವಿಶ್ವವಿದ್ಯಾನಿಲಯದವರು ಕಳೆದ ಎರಡು ವರ್ಷಗಳಿಂದ ಅವರ ಮನವಿಯನ್ನು ತಮಗೆ ಕಳುಹಿಸಿದ್ದಾರೆ. ತಮಗೆ ಗೊತ್ತು, ಈ ಪ್ರಾಜೆಕ್ಟ್‌ಗೆ ಧನಸಹಾಯ ಕೇಂದ್ರದಿಂದ ಬರುತ್ತದೆ, ರಿಸರ್ಚ್ ನಡೆಸುವುದಕ್ಕೆ ಬೇಕಾದ ಜಮೀನು ಕೊಡತಕ್ಕಂಥ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಎರಡು ವರ್ಷಗಳಿಂದಲೂ ಅವರು ಈ ಪ್ರಾಜೆಕ್ಟ್‌ಗೆ ಜಮೀನು ಬೇಕು ಎಂದು ಕೇಳುತ್ತಿದ್ದರೂ ಸಹ ಇಲ್ಲಿಯವರೆಗೆ ಸರ್ಕಾರ ಈ ವಿಚಾರದಲ್ಲಿ ಯಾವ ಒಂದು ತೀರ್ಮಾನವನ್ನು ಮಾಡಲಿಲ್ಲ ಎಂದರೆ ಇದು ತಲೆತಗ್ಗಿಸತಕ್ಕ ವಿಚಾರ. ಈ

ಕಾರ್ಯಕ್ರಮಕ್ಕೆ ವಿಶ್ವ ಬ್ಯಾಂಕ್‌ನವರು ಹಣ ಸಹಿತ ಕೊಟ್ಟಿದ್ದಾರೆ. ಇಂಥ ವಿಚಾರದಲ್ಲಿ ಸರ್ಕಾರದವರು ಏಕೆ ಆಲಸ್ಯದಿಂದ ವರ್ತಿಸುತ್ತಾರೋ ನನಗೆ ತಿಳಿಯದಾಗಿದೆ. ಇದಕ್ಕೆ ಯಾವ ಅಧಿಕಾರಿಯೇ ಆಗಿರಲಿ ಕಾರಣರಾಗಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದುದು ಅವಶ್ಯಕ ಎಂದು ನಾನು ಹೇಳುತ್ತೇನೆ. ಏಕೆಂದರೆ ಈ ಅಗ್ರಿಕಲ್ಚರಲ್ ರೀಸರ್ಚ್ ಪ್ರಾಜೆಕ್ಟ್ ಏನು ಇದೆ ಇದರಿಂದ ರಾಜ್ಯಕ್ಕೆ ಮತ್ತು ಇಡೀ ರಾಷ್ಟ್ರಕ್ಕೆ ಅನುಕೂಲವಾಗತಕ್ಕದ್ದು ಇದೆ. ಇಂಥ ಅನುಕೂಲವಾಗುವಂಥ ಪ್ರಾಜೆಕ್ಟ್‌ನ ವಿಷಯದಲ್ಲಿ ತಾವು ಆಲಸ್ಯ ತೋರುವುದಾದರೆ, ನಿಮ್ಮ ಅಧಿಕಾರಿಗಳು ಇದರ ಬಗ್ಗೆ ಅಸಡ್ಡೆಯಿಂದಿರುವುದಾದರೆ ಅಂಥ ಅಧಿಕಾರಿಗಳು ಆ ಸ್ಥಳದಲ್ಲಿ ಇರುವುದಕ್ಕೆ ನಾಲಾಯಕ್ಕು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಯಲ್ಲಿ ಇನ್ನೊಂದು ಹಾಸ್ಯಾಸ್ಪದವಾದ ವಿಚಾರವೆಂದರೆ, ತಮಗೆ ಗೊತ್ತಿರುವ ಹಾಗೆ ವಿಶ್ವವಿದ್ಯಾನಿಲಯ ನಮ್ಮ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಹತ್ತಾರು ರೀಸರ್ಚ್ ಸ್ಟೇಷನ್‌ಗಳು ನಮ್ಮ ರಾಜ್ಯದಲ್ಲಿದ್ದುವು. ವ್ಯವಸಾಯದ ಇಲಾಖೆಯವರೇ ಇವುಗಳನ್ನು ನಡೆಸುತ್ತಿದ್ದರು, ಇವುಗಳ ಜಮೀನು ಏನು ಇದೆ ಇದು, ಮಾನ್ಯ ಶ್ರೀಕಂಠಯ್ಯನವರ ಜಿಲ್ಲೆಯಲ್ಲಿಯೂ ಒಂದು ಸ್ಥಳ ಇದೆ, ಇದಕ್ಕೆ ಸರ್ಕಾರದವರು ಕಂದಾಯವನ್ನು ವಸೂಲು ಮಾಡುತ್ತಾ ಇರಲಿಲ್ಲ. ಇದು ಯೂನಿವರ್ಸಿಟಿಗೆ ಬಂದಮೇಲೆ ಕಂದಾಯ ಕೊಡಿ ಈ ಜಮೀನಿಗೆ ಎಂದು ಕಾಗದದ ಮೇಲೆ ಕಾಗದವನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸುತ್ತಿದ್ದಾರೆಂದು ಕೇಳಿದ್ದೇನೆ, ಇದು ಸರಿಯೇ? ವಿಶ್ವವಿದ್ಯಾನಿಲಯ ಯಾವುದು ಸರ್ಕಾರ ಯಾವುದು ? ಇದಕ್ಕೆ ಬರೀ ಅಡ್ಮಿನಿಸ್ಟ್ರೇಷನ್‌ಗೋಸ್ಕರ ಅಟಾನಮಸ್ ಸ್ಟೇಟಸ್‌ನ್ನು ಕೊಟ್ಟಿದ್ದೀರಿ. ಆದರೆ ವಿಶ್ವವಿದ್ಯಾನಿಲಯ ಎಲ್ಲರ ಸ್ವತ್ತು. ಆದ್ದರಿಂದ ತಾವು ದಯವಿಟ್ಟು ಕಂದಾಯವನ್ನು ವಸೂಲು ಮಾಡುವುದಕ್ಕೆ ಹೋಗಬೇಡಿ. ಈ ಎಲ್ಲಾ ಸಣ್ಣಸಣ್ಣ ಭಾವನೆಗಳು ಏನು ಇವೆ ಇವುಗಳನ್ನು ನಮ್ಮ ಅಧಿಕಾರಿಗಳು ಬಿಡತಕ್ಕದ್ದು ಮುಖ್ಯ ರೈತರ ಸಮಸ್ಯೆ ಬಂದಾಗ ಅವುಗಳನ್ನು ಬಗೆಹರಿಸುವುದಕ್ಕೆ ಇಲಾಖೆಯವರಿಂದ ಡಿಮ್ಯಾಂಡ್ ಬಂದಾಗ ಅಧಿಕಾರಿಗಳು ಉದಾರವಾಗಿ ವರ್ತಿಸತಕ್ಕದ್ದನ್ನು ಕಲಿತುಕೊಳ್ಳಬೇಕು. They must have an heart of understanding. That is most important. ಇವರ ಮುಂದೆ ಇರತಕ್ಕ ಮುಖ್ಯ ವಿಷಯ ಏನು ಎಂದು ತಾವು ತಿಳಿದು ಇದನ್ನು ಮಾಡತಕ್ಕದ್ದು ಬಹಳ ಮುಖ್ಯ. ಆದ್ದರಿಂದ ತಾವು ಕಂದಾಯವನ್ನು ವಸೂಲು ಮಾಡುವ ಕೆಲಸ ಏನು ಇದೆ ಅದಕ್ಕೆ ತಾವು ಎಕ್ಸಂಪ್‌ಷನ್ ಕೊಡತಕ್ಕದ್ದು ಬಹಳ ಮುಖ್ಯ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ, ಈ ವಿಶ್ವವಿದ್ಯಾನಿಲಯ ಇಡೀ ರಾಷ್ಟ್ರದಲ್ಲಿಯೇ ಬಹಳ ಚೆನ್ನಾಗಿರತಕ್ಕ ವಿಶ್ವವಿದ್ಯಾನಿಲಯ. ಇದರ ಬಗ್ಗೆ ನಾವೆಲ್ಲರೂ ಹೆಮ್ಮೆ ಪಡಬೇಕು. ಬೆಂಗಳೂರಿನಿಂದ ಸುಮಾರು ೧೦-೧೫ ಕಿಲೋಮೀಟರ್‌ಗಳ ದೂರದಲ್ಲಿ ಸವಿಸ್ತಾರವಾಗಿ ಕಟ್ಟಿರತಕ್ಕದ್ದು ಇದು. ಸುಮಾರು ೧೨೦೦ ಎಕರೆಗಳಲ್ಲಿ ಬಹಳ ಭವ್ಯವಾಗಿ ಎಲ್ಲದಕ್ಕೂ ಅನುಕೂಲವಾಗುವಂಥಾದ್ದು ಇದು. ಇಷ್ಟನ್ನು ಸರ್ಕಾರದವರು ಮಾಡಿದಾಗ ಅಲ್ಲಿರತಕ್ಕ ಕೆಲವು ಕುಂದುಕೊರತೆಗಳ ಬಗ್ಗೆಯೂ ತಾವು ಗಮನಹರಿಸಬೇಕು, ಸೆಮಿನಾರ್‌ಗಳು ನಡೆಯುವುದಕ್ಕೆ, ವರ್ಕ್‌ಷಾಪ್‌ಗಳನ್ನು ನಡೆಸಬೇಕಾದರೆ ಸಾಕಷ್ಟು ಅನುಕೂಲತೆಗಳು ಇಲ್ಲ. ಅಲ್ಲಿರತಕ್ಕ ಅನುಕೂಲತೆಗಳು ವಿದ್ಯಾರ್ಥಿಗಳಿಗೆ ಮತ್ತು ಸ್ಟಾಫ್‌ನವರಿಗೂ ಸಾಕಾಗುತ್ತಿಲ್ಲ. ಆದ್ದರಿಂದ ತಾವು ಡೆಲ್ಲಿಯಲ್ಲಿ ವಿಜ್ಞಾನ ಭವನ ಏನು ಇದೆ ಅದೇ ರೀತಿಯಲ್ಲಿ ಒಂದು ವಿಜ್ಞಾನ ಭವನ ಕಟ್ಟಿಸಿಕೊಡುವುದಕ್ಕೆ ಯೋಚನೆ ಮಾಡಿ ಎಲ್ಲಾ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ನಾನು ಕೇಳುತ್ತೇನೆ. ಇದಕ್ಕೆ ಎಷ್ಟೇ ಖರ್ಚಾಗಲೀ; ಇದನ್ನು ಮಾಡಲೇಬೇಕು. ನಾವೆಲ್ಲರೂ ಇದನ್ನು ಉಪಯೋಗಿಸಬಹುದು, ಬೇರೆ ಬೇರೆ ಸಂಸ್ಥೆಗಳವರೂ ಇದನ್ನು ಉಪಯೋಗಿಸಬಹುದು, ಸರ್ಕಾರದವರೂ ಸಹ ಉಪಯೋಗ ಮಾಡಬಹುದು. ಇದಕ್ಕೆ ತಾವು ಹಣವನ್ನು ಮಂಜೂರು ಮಾಡಿಕೊಡುವುದು ಅತಿ ಮುಖ್ಯ, ಹಿಂದೆ ಮಾನ್ಯ ಮುಖ್ಯಮಂತ್ರಿಗಳು ವಿಶ್ವವಿದ್ಯಾನಿಲಯಕ್ಕೆ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಬಂದಿದ್ದರು. ಆಗ ಶ್ರೀಮಾನ್ ವೆಂಕಟಸ್ವಾಮಿ, ಎಸ್ಟೇಟ್ ಆಫೀಸರ್ ಅವರು ಇಂಥ ಒಂದು ಭವನದ ವಿನ್ಯಾಸವನ್ನು ಮಾಡಿ ಮೀಟಿಂಗ್ ನಡೆಯುತ್ತಿದ್ದ ಕಡೆಯಲ್ಲಿ ಪ್ರದರ್ಶನ ಮಾಡಿದರು. ಮುಖ್ಯಮಂತ್ರಿಗಳು ಇದನ್ನು ನೋಡಿ, ಇದಕ್ಕೆ ಹಣ ಕೊಡಿಸುವುದಕ್ಕೆ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದರು. ಹೇಳಿದ್ದು ಅಷ್ಟೇ ಅಲ್ಲ, ಇನ್ನೊಂದು ಸಾರಿ ವಿಶ್ವವಿದ್ಯಾನಿಲಯಕ್ಕೆ ಭೇಟಿಕೊಟ್ಟು ಕಾರ್ಯಕ್ರಮಗಳನ್ನು ನೋಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ಆದರೆ ದುರ್ದೈವ ಇಲ್ಲಿಯವರೆಗೂ ಅವರು ಬರುವುದಕ್ಕೆ ಸಾಧ್ಯವಾಗಲಿಲ್ಲ. ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಾ ಇರತಕ್ಕದ್ದು

ಇಷ್ಟೇ, ಮಾನ್ಯ ಮಂತ್ರಿಗಳಾದ ಶ್ರೀಕಂಠಯ್ಯನವರು ಇದ್ದಾರೆ, ಅವರು ರೈತರ ಮಗ, ನೀವಿಬ್ಬರೂ ಸೇರಿ ವಿಶ್ವವಿದ್ಯಾನಿಲಯಕ್ಕೆ ಭೇಟಿಕೊಟ್ಟು ಭವನವನ್ನು ಕಟ್ಟುವುದಕ್ಕೆ ಹಣ ಸಹಾಯವನ್ನು ಮಾಡಿಸಿ ಕೊಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಯಲ್ಲಿ ವಿಶ್ವವಿದ್ಯಾನಿಲಯದವರ ಹಲವಾರು ಬೇಡಿಕೆಗಳು ಸರ್ಕಾರದ ಮುಂದೆ ಇವೆ. ಇವುಗಳಿಗೆ ಸರ್ಕಾರದವರು ಹಣ ಕೊಡತಕ್ಕ ಸಮಯದಲ್ಲಿ ಏನು ಹೇಳಿದ್ದಾರೆಂದರೆ, ವಿಶ್ವವಿದ್ಯಾನಿಲಯದಲ್ಲಿ ಏನು ಅಲ್ಪಸ್ವಲ್ಪ ಉತ್ಪತ್ತಿ ಬರುತ್ತದೆ ಅದನ್ನು ಕಳೆದುಕೊಂಡು ಗ್ರಾಂಟ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅಲ್ಲಿ ಏನು ಉತ್ಪತ್ತಿ ಬರುತ್ತಿದೆ ಎನ್ನುವುದನ್ನು ಎಲ್ಲರೂ ತಿಳಿದಿರುತ್ತಾರೆ. ಇದು ಆಕಸ್ಮಿಕವಾಗಿ ಬರತಕ್ಕ ಖರ್ಚುಗಳಿಗೆ ಸಾಕಾಗುತ್ತದೆ. ಗ್ರಾಂಟ್ ಕೊಡುವುದನ್ನು ತಾವು ಮೂರು ನಾಲ್ಕು ತಿಂಗಳವರೆಗೆ ನಿಧಾನ ಮಾಡುತ್ತೀರಿ. ಈ ರೀತಿಯಾಗಿ ತಾವು ತಡ ಮಾಡಿದರೆ ಇವರು ಎಲ್ಲಿಂದ ಹಣವನ್ನು ತರಬೇಕು ? ಆದ್ದರಿಂದ ಇವರ ಕೈಯಲ್ಲಿ ಅಲ್ಪಸ್ವಲ್ಪ ಹಣ ಉಳಿದಿದ್ದರೆ ಮಾತ್ರ ಸಣ್ಣಪುಟ್ಟ ಖರ್ಚು ಗಳಿಗೆ ಸರಿ ಹೋಗುತ್ತದೆ. ಇದನ್ನು ತಾವು ಕಿತ್ತುಕೊಳ್ಳುವುದಾದರೆ ಇದನ್ನು ಯಾರೂ ಸಹ ಸರಿ ಯಾದುದು ಎಂದು ಹೇಳುವುದಿಲ್ಲ ಆದ್ದರಿಂದ ಅವರ ರೀಸರ್ಚ್ ಫಾರಂನಿಂದ ಏನು ಹಣ ಬರುತ್ತದೆ ಅದನ್ನು ಅವರಿಗೆ ಬಿಟ್ಟುಬಿಡಿ. ವಿಶ್ವವಿದ್ಯಾನಿಲಯ ಇದೊಂದು ವಿಶಿಷ್ಟದಾಯಕವಾದ ಸಂಸ್ಥೆ, ಇಲ್ಲಿರತಕ್ಕ ಸಿಬ್ಬಂದಿಯವರು ಬಹಳ ಕಷ್ಟಪಟ್ಟು ಹಗಲು ರಾತ್ರಿ ಕೆಲಸ ಮಾಡಿ ರಾಜ್ಯದ ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿಯಾಗಿದ್ದಾರೆಂದರೆ ತಪ್ಪಾಗಲಾರದು. ಈ ರೀತಿಯಾಗಿ ಕೆಲಸ ಮಾಡತಕ್ಕ ವ್ಯಕ್ತಿ ಗಳಿಗೆ ಸರಿಯಾದ ಪ್ರೋತ್ಸಾಹ ಕೊಡದೇ ಹೋದರೆ ಮಾನ್ಯ ಬೇಹುರ್ ಅವರು ಹೇಳಿದಂತೆ ಆಗುತ್ತದೆ. ಆದ್ದರಿಂದ ಅಲ್ಲಿರುವವರಿಗೆ ಬೇಕಾದಂಥ ಎಲ್ಲಾ ಸಹಾಯವನ್ನು ಕೊಡತಕ್ಕದ್ದು ಬಹಳ ಮುಖ್ಯ. ಹಣಕಾಸಿನ ಸಹಾಯ ಒಂದೇ ಅಲ್ಲ ಆಡಳಿತ ವ್ಯವಸ್ಥೆಯಲ್ಲಿಯೂ ಏನೇನು ನ್ಯೂನತೆಗಳು ಬಂದರೂ ಸಹ ಅವುಗಳನ್ನು ಪರಿಹಾರ ಮಾಡಿ ಅವರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕು ಎನ್ನುವುದನ್ನು ನಾನು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಇದರ ಜೊತೆಯಲ್ಲಿ ಮಾನ್ಯ ಸ್ನೇಹಿತರಾದ ಕಕ್ಕಿಲಾಯ ಅವರು ಒಂದು ವಿಷಯವನ್ನು ಎತ್ತಿದ್ದಾರೆ, ಕೃಷಿ ವಿದ್ಯಾರ್ಥಿಗಳು ನಡೆಸತಕ್ಕ ಧರಣಿ ಏನು ಇದೆ ಅದರ ವಿಚಾರದಲ್ಲಿ ಆದಷ್ಟು ಶೀಘ್ರವಾಗಿ ಸರ್ಕಾರದವರು ಪರಿಶೀಲನೆ ಮಾಡಿ ಅವರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕು.

ಅಧ್ಯಕ್ಷರು. ತಾವು ಒಂದು ಗಂಟೆ ಐವತ್ತು ನಿಮಿಷ ಮಾತನಾಡಿದ್ದೀರಿ.

ಶ್ರೀ ಎಂ. ವಿ. ರಾಜಶೇಖರನ್.—ನೂರಕ್ಕೆ ೮೦ ಭಾಗ ಇರತಕ್ಕ ರಾಜ್ಯದ ರೈತರ ಸಮಸ್ಯೆಗಳನ್ನು ಇಲ್ಲಿ ಹೇಳುವುದಕ್ಕೆ ನಮಗೆ ಹೆಚ್ಚಿನ ಕಾಲಾವಕಾಶಬೇಕಾಗುತ್ತದೆ. ಬೇರೆಯವರೂ ಮಾತನಾಡಲಿ, ಅದನ್ನೇನೂ ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಅಧ್ಯಕ್ಷರೇ. ಆ ಕಡೆಯ ಮಾನ್ಯ ಸದಸ್ಯರುಗಳಿಗೆ ೨ ಗಂಟೆ ೧೦ ನಿಮಿಷಗಳಷ್ಟು ಕಾಲಾವಕಾಶ ಕೊಟ್ಟಿದ್ದೀರಿ. ಬೇಕಾದರೆ ಅವರೊಬ್ಬರೇ ೨ ಗಂಟೆ ೧೦ ನಿಮಿಷ ಮಾತನಾಡಲಿ. ಅದೇ ರೀತಿ ನಮ್ಮ ಕಡೆ ಕೂಡ ೨ ಗಂಟೆ ೧೦ ನಿಮಿಷ ಕೊಟ್ಟುಬಿಡಿ ಅಷ್ಟೆ.

ಅಧ್ಯಕ್ಷರು.—ಎಷ್ಟು ಹೊತ್ತಾದರೂ ಮಾತನಾಡಿ. ಆದರೆ ೫ ಗಂಟೆಗೆ ಮಾತ್ರ ನಾನು ಮಾನ್ಯ ಮಂತ್ರಿಯವರನ್ನು ರಿಪ್ಲೈ ಮಾಡುವುದಕ್ಕೆ ಕರೆಯುತ್ತೇನೆ ೬-೩೦ ಗಂಟೆಗೆ ಈ ಡಿಮ್ಯಾಂಡನ್ನು ನಾನು ಓಟಿಗೆ ಹಾಕಬೇಕು.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಅಧ್ಯಕ್ಷರೇ, ಹಿಂದೆ ಯಾರ್‍ಯಾರು ಯಾವ್ಯಾವ ಸಬ್ಜೆಕ್ಟ್ ಗಳನ್ನು ಇನಿಷಿಯೇಟ್ ಮಾಡಿದ್ದಾರೆ, ಅವರು ಎಷ್ಟು ಕಾಲವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ನೋಡೋಣ. ಅವರೆಲ್ಲಾ ಎಷ್ಟು ಕಾಲವನ್ನು ತೆಗೆದುಕೊಂಡಿದ್ದಾರೋ ಅದರ ಮೂರರಷ್ಟು ಕಾಲ ವನ್ನು ನನಗೆ ನೀವು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವ್ಯವಸಾಯದಲ್ಲಿ ಪರಿಣಿತ ರಾಗಿದ್ದಾರೆ. ಅವರು ವ್ಯವಸಾಯಗಾರರ ಮಕ್ಕಳು ಬೇರೆ, ಅವರು ಹಿಂದೆ ಕೂಡ ವ್ಯವಸಾಯ ಮಂತ್ರಿ ಗಳಾಗಿದ್ದವರು, ಹೆಚ್ಚು ವಿಷಯಗಳನ್ನು ಮಾತನಾಡಬೇಕೆಂದು ಅಪೇಕ್ಷಿಸುತ್ತಾರೆ. ಅಂಥಾದರಲ್ಲಿ ತಾವು

ಈ ಬಗ್ಗೆ ಬಹಳ ಸ್ಟ್ರಿಕ್ಟ್ ಆದರೆ ನಾವು ಏನು ಮಾಡುವುದಕ್ಕಾಗುತ್ತದೆ? ಇದೊಂದರಲ್ಲೇ ಜೈಲು, ತೋಟಗಾರಿಕೆ, ವ್ಯವಸಾಯ ಇಲಾಖೆಯ ಬೇಡಿಕೆಗಳನ್ನೆಲ್ಲಾ ಸೇರಿಸಿದ್ದೀರಿ. ದಯವಿಟ್ಟು ತಾವು ಅವರಿಗೆ ಹೆಚ್ಚು ಅವಕಾಶ ಕೊಡಿ.

ಅಧ್ಯಕ್ಷರು.—ಇದರಲ್ಲಿ ಜೈಲು ಕೊನೆಯದು.

ಶ್ರೀ ಎಂ.ವಿ. ರಾಜಶೇಖರನ್.—ಮಾನ್ಯ ಅಧ್ಯಕ್ಷರೇ ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ......

ಅಧ್ಯಕ್ಷರು.—ನಾವು ೧೨ ಗಂಟೆಗೆ ಏಳಬೇಕಾಗಿತ್ತು. ಏಕೆಂದರೆ ನಾವು ಮತ್ತೆ ೨-೩೦ ಗಂಟೆಗೆ ಸೇರಬೇಕಾಗಿದೆ.

ಶ್ರೀ ಎಂ.ವಿ. ರಾಜಶೇಖರನ್.—ನನಗೆ ಹೇಳುವುದಕ್ಕೆ ಹೆಚ್ಚು ವಿಷಯಗಳು ಇವೆ, ಆದ್ದರಿಂದ ಹೇಳುತ್ತಿದ್ದೇನೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ಕಡೆಯ ಮಾನ್ಯ ಸದಸ್ಯರುಗಳಿಗೂ ಮತ್ತು ಈ ಕಡೆಯ ಮಾನ್ಯ ಸದಸ್ಯರುಗಳಿಗೂ ಇಂತಹ ಒಂದು ಸತ್ವಪೂರ್ಣವಾದ ಹಾಗೂ ಮಹತ್ತರವಾದ ವಿಚಾರದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಕಷ್ಟು ಹೆಚ್ಚಿನ ಕಾಲಾವಕಾಶವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವೂ ಕೂಡ ರೈತರ ಮಕ್ಕಳು, ಹಿಂದೆ ತಾವೂ ಕೂಡ ವ್ಯವಸಾಯ ಇಲಾಖೆಯ ಜವಾಬ್ದಾರಿಯನ್ನು ಹೊಂದಿದ್ದವರು, ತಮಗೆ ಅದರ ಪ್ರಾಮುಖ್ಯತೆ ಎಷ್ಟು ಎಂಬುದು ಗೊತ್ತಿದೆ. ದಯವಿಟ್ಟು ತಾವು ಹೆಚ್ಚು ಕಾಲಾವಕಾಶ ಮಾಡಿಕೊಡಬೇಕೆಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸ್ವಾಮಿ ಮಾನ್ಯ ರಾಮೇಗೌಡರು ಈ ಇಲಾಖೆಯ ಮಂತ್ರಿಗಳಾಗಿರಲಿಲ್ಲ. ಆದ್ದರಿಂದ ಅವರು ಈ ಬಗ್ಗೆ ಮಾತನಾಡುವುದಿಲ್ಲವೆಂದು ಕಾಣುತ್ತದೆ;

ಶ್ರೀ ಜಿ. ರಾಮೇಗೌಡ.—ಮಾನ್ಯ ಸದಸ್ಯರು ಈ ವ್ಯವಸಾಯದ ಬಗ್ಗೆ ಅಂಕಿಅಂಶಗಳನ್ನು ಬಹಳ ಕಷ್ಟಪಟ್ಟು ಶೇಖರಿಸಿ ಅದನ್ನು ಶ್ರದ್ಧೆಯಿಂದ ಇಲ್ಲಿ ಹೇಳುತ್ತಿದ್ದಾರೆ. ಅನು ನಿಷ್ಠ ತಲೆಯಲ್ಲಿ ತೂರುವಹಾಗೆ ಹೇಳುತ್ತಿದ್ದಾರೆ. ಆದ್ದರಿಂದ ಅವರಿಗೆ ಹೆಚ್ಚು ಕಾಲಾವಕಾಶ ಕೊಡುವುದು ಬಹಳ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಶ್ರೀ ಎಂ.ವಿ. ರಾಜಶೇಖರನ್. ಮಾನ್ಯ ಅಧ್ಯಕ್ಷರೇ, ಇದರಲ್ಲೇ ನಾನು ಹೆಚ್ಚು ಕಾಲವನ್ನು ಕಳೆಯುವುದಿಲ್ಲ. ತಮ್ಮಲ್ಲಿ ನನ್ನ ಅತ್ಯಂತ ವಿನಯದ ಪ್ರಾರ್ಥನೆ ಇಷ್ಟೆ. ಈ ಒಂದು ಡಿಮ್ಯಾಂಡ್ ಮೇಲೆ ಸಾಕಷ್ಟು ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ರಾಮದೇವ್‌ರವರೂ ಈ ಬಗ್ಗೆ ಮಾತನಾಡಬೇಕು. ಎಲ್ಲರೂ ಕೂಡ ಈ ಬಗ್ಗೆ ಸತ್ವಪೂರ್ಣವಾಗಿ ಮಾತನಾಡಬೇಕು, ಏಕೆಂದರೆ ಇದು ಬಹಳ ಮಹತ್ವವಾದ ವಿಚಾರ. ಎಲ್ಲರಿಗೂ ತಾವು ಅವಕಾಶ ಮಾಡಿಕೊಡಿ. ಮಾನ್ಯ ಮುಳ್ಳೂರು ಆನಂದರಾಯರು ಸಹ ಕೈ ಎತ್ತುತ್ತಿದ್ದಾರೆ. ಅವರೂ ಸಹ ಮಾತನಾಡಲಿ.

ಶ್ರೀ ಜಿ ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಳ್ಳೂರ್ ಆನಂದರಾಯರಿಗೆ ಜೈಲ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ, ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಮಂಚೇಗೌಡ.— ಸ್ವಾಮಿ, ಈ ಬ್ಯುಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವ್ಯವಸಾಯದ ಬೇಡಿಕೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದೇ ಒಂದು ದಿವಸ ಗೊತ್ತುಮಾಡಿದ್ದಾರೆ. ಬಹುಶಃ ನನಗೆ ತಿಳಿದಿರುವ ಮಟ್ಟಿಗೆ ಎಲ್ಲಾ ಇಲಾಖೆ ಇಲಾಖೆಗಳಲ್ಲಿ ಎಷ್ಟು ಸಮಸ್ಯೆಗಳಿವೆಯೋ ಅದಕ್ಕಿಂತಲೂ ಹೆಚ್ಚು ಸಮಸ್ಯೆಗಳು ಇದೊಂದೇ ಇಲಾಖೆಯಲ್ಲಿ ಇದೆ. ಈ ನಾಲ್ಕೂವರೆ ಗಂಟೆಯಲ್ಲಿ ನಮ್ಮ ಸಮಸ್ಯೆಗಳನ್ನೆಲ್ಲಾ ತಮ್ಮ ಅವಗಾಹನೆಗೆ ತಂದು ಅವುಗಳ ಬಗ್ಗೆ ಪರಿಹಾರವನ್ನು ಇದೇ ದಿವಸ ಕಂಡುಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವ್ಯವಸಾಯ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಮಾತ್ರ ನಾವೆಲ್ಲಾ ಚರ್ಚೆ ಮಾಡುವುದಕ್ಕೆ ಇನ್ನೂ ಒಂದು ದಿವಸ ಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಅನೇಕರು ಇದರ ಬಗ್ಗೆ ಮಾತನಾಡುವವರು ಇದ್ದಾರೆ, ಅದಕ್ಕೆ ಅವಕಾಶ ಮಾಡಿಕೊಡಿ. ಎಲ್ಲರೂ ಮಾತನಾಡಲಿ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾತನಾಡುವುದಕ್ಕೆ ಎಲ್ಲರಿಗೂ ಹೆಚ್ಚು ಅವಕಾಶ ಕೊಡಬೇಕು. ಇದಕ್ಕೆ ಹೆಚ್ಚು ಅವಕಾಶ ಕೊಡದಿದ್ದರೆ ಇನ್ನು ಯಾವ ಡಿಪಾರ್ಟ್‌ಮೆಂಟ್ ಬೇಡಿಕೆ ಬಗ್ಗೆ ಕೊಡುತ್ತೀರಿ.

ಅಧ್ಯಕ್ಷರು.—ಇದರಲ್ಲಿ ನಮಗೆ ಐದೂವರೆ ಗಂಟೆಗಳಷ್ಟು ಸಮಯ ಇದೆ. ಇದರಲ್ಲಿ ಮಾನ್ಯ ಮಂತ್ರಿಯವರು ರಿಪ್ಲೈ ಮಾಡುವುದಕ್ಕೆ ಎಷ್ಟು ಕಾಲಾವಕಾಶ ಬೇಕಾಗುತ್ತವೆ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ನನಗೆ ೧½ ಗಂಟೆಗಳ ಸಮಯಾವಕಾಶ ಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಯವರು ೧½ ಗಂಟೆಗಳಷ್ಟು ಕಾಲ ಉತ್ತರ ಕೊಡುವುದಕ್ಕೆ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಅಂದರೆ ನಮಗೆ ೪ ಗಂಟೆಗಳ ಕಾಲ ಉಳಿಯುತ್ತದೆ. ಅಷ್ಟರಲ್ಲಿ ನೀವೆಲ್ಲಾ ಮಾತನಾಡಿ.

ಶ್ರೀ ಮಂಚೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಎಷ್ಟು ಹೊತ್ತಾದರೂ ಉತ್ತರ ಕೊಡಲಿ, ಅದರ ಬಗ್ಗೆ ನಮಗೆ ಯೋಚನೆಯಿಲ್ಲ ಆದರೆ ನಾವು ಈ ವ್ಯವಸಾಯದ ಬೇಡಿಕೆಯ ಬಗ್ಗೆ ಏನೇನು ಹೇಳಬೇಕಾಗಿದೆಯೋ ಅದನ್ನೆಲ್ಲಾ ಹೇಳಬೇಕಾಗುತ್ತದೆ.

ಶ್ರೀ ಎಚ್ ಟಿ ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಎಲ್ಲರೂ ಮಾತನಾಡುವುದಕ್ಕೆ ಹೆಚ್ಚು ಕಾಲಾವಕಾಶ ಬೇಕು ಎನ್ನತಕ್ಕಂಥಾದ್ದು ಒಂದು ವಿಚಾರವಾದರೆ, ನಾವು ಚರ್ಚೆ ಮಾಡಿದಂತಹ ಎಲ್ಲಾ ವಿಷಯಗಳನ್ನು ಅರ್ಥ ಮಾಡಿಕೊಂಡು ಅಷ್ಟಕ್ಕೂ ಕೇವಲ ಒಂದೂವರೆ ಗಂಟೆಯಲ್ಲಿ ಮಾನ್ಯ ಮಂತ್ರಿಯವರು ಸಮರ್ಪಕವಾಗಿ ಉತ್ತರ ಕೊಡಬಲ್ಲರೇ ಎಂಬುದು ಅನುಮಾನಾಸ್ಪದವಾದ ವಿಚಾರವಾಗಿದೆ.

ಅಧ್ಯಕ್ಷರು.—ನಾಟಕದಲ್ಲಿ ಪಾರ್ಟ್ ಮಾಡಿದಾಗ ತಾನೇ ಆ ಪಾರ್ಟ್ ಹೇಗೆ ಇತ್ತು ಎನ್ನುವುದು ವುದಂ ಗೊತ್ತಾಗುವುದು.

ಶ್ರೀ ಮಂಚೇಗೌಡ.—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಸಮಾಜದಲ್ಲಿ ಈ ವ್ಯವಸಾಯಗಾರರು ಏನೊಂದು ಚಳುವಳಿ ವಗೈರೆ ಪ್ರಾರಂಭ ಮಾಡಿದ್ದಾರೆ ಅದಕ್ಕೆಲ್ಲಾ ಒಂದು ತೃಪ್ತಿಕರವಾದ ಪರಿಹಾರವನ್ನು ನಾವು ಇಲ್ಲಿ ಕಂಡುಹಿಡಿಯಲೇಬೇಕು. ಇನ್ನು ಸ್ವಲ್ಪ ದಿವಸಗಳಲ್ಲಿ ಈ ಅಸೆಂಬ್ಲಿ ಮುಗಿದು ಹೋಗುತ್ತದೆ. ಆ ಸಮಸ್ಯೆಗಳಿಗೆಲ್ಲಾ ಪರಿಹಾರ ಕಂಡುಹಿಡಿಯದೇ, ಆ ಸಮಸ್ಯೆಗಳನ್ನೆಲ್ಲಾ ಅಷ್ಟಕ್ಕೆ ಬಿಟ್ಟುಬಿಟ್ಟು ನಾವು ಸಭೆಯನ್ನು ಮುಕ್ತಾಯ ಮಾಡಿಕೊಂಡು ಹೋಗುವುದರಲ್ಲಿ ಯಾವ ಅರ್ಥವೂ ಇಲ್ಲ. ಮುಂದಿನ ಬೇಡಿಕೆ ಏನಿದೆ ಅದಕ್ಕೆ ಒಂದು ಅರ್ಧ ದಿವಸ ಕಡಿಮೆ ಮಾಡಿ. ಆದರೆ ಈ ಬೇಡಿಕೆಗೆ ಇನ್ನೊಂದು ದಿವಸ ಬೇಕಾಗುತ್ತದೆ. ವಿರೋಧಪಕ್ಷದ ಸದಸ್ಯರುಗಳು ಇದ್ದಾರೆ, ನಾವು ಇದ್ದೇವೆ, ಎಲ್ಲರೂ ಮಾತನಾಡಬೇಕಾದರೆ ಈ ಬಗ್ಗೆ ಹೆಚ್ಚು ಸಮಯ ಬೇಕಾಗುತ್ತದೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಇದಕ್ಕಾಗಿ ನಾವು ಇನ್ನೂ ಒಂದು ದಿವಸ ಇಲ್ಲಿ ಕುಳಿತರೆ ದೇಶಕ್ಕೆ ಏನೂ ಅನ್ಯಾಯವಲ್ಲ.

ಅಧ್ಯಕ್ಷರು.—ಮಧ್ಯಾಹ್ನ ಮತ್ತೆ ಸೇರುತ್ತೇವಲ್ಲ,

ಒಬ್ಬ ಮಾನ ಸದಸ್ಯರು.—ಸ್ವಾಮಿ, ಇದು ೮೦ ಪರ್ಸೆಂಟ್ ರೈತರ ಪ್ರಶ್ನೆ. ಬೇಕಾದರೆ ರಾತ್ರಿ ೧೦ ಗಂಟೆಯವರೆಗೆ ನಾವು ಕುಳಿತುಕೊಳ್ಳೋಣ.

ಶ್ರೀ ಜಿ ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಪ್ರತಿವರ್ಷ ಈ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ೨ ದಿನಗಳಷ್ಟು ಕಾಲಾವಕಾಶ ಕೊಡುತ್ತಿದ್ದರು. ಈ ಸಾರಿ ಮಾತ್ರ ಒಂದು ದಿನ ಕೊಟ್ಟಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರು ಒಂದು ದಿನಕ್ಕೆ ಏತಕ್ಕೆ ಒಪ್ಪಿಕೊಂಡರೋ ನನಗೆ ಗೊತ್ತಿಲ್ಲ. ತಾವು ದೊಡ್ಡಮನಸ್ಸು ಮಾಡಿ ೨ ದಿನ ಕೊಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ನಾವು ಇಲ್ಲಿ ಈ ದೇಶದ ೮೦ ಪರ್ಸೆಂಟ್ ಜನರ ವಿಚಾರವನ್ನು ಚರ್ಚೆ ಮಾಡುತ್ತಾ ಇದ್ದೇವೆ. ಅದಕ್ಕಾಗಿ ಅಷ್ಟು ಕಾಲಾವಕಾಶ ಬೇಕಾಗುತ್ತದೆ.

ಅಧ್ಯಕ್ಷರು.—ನಾಳೆಯಿಂದ ಸಭೆ ಕೂಡುವುದಕ್ಕೆ ಆಗುವುದಿಲ್ಲ. ಏಕೆಂದರೆ ನಾಳೆ ಭಾನುವಾರ. ಇದಕ್ಕೆ ೨ ದಿವಸಗಳಷ್ಟು ಕಾಲಾವಕಾಶ ಬೇಕು ಎಂದರೆ ಸೋಮವಾರದವರೆಗೂ ಆಗುತ್ತದೆ. ನಾವು ೨೮ನೇ ತಾರೀಖಿನೊಳಗೆ ಅಪ್ರೋಪ್ರಿಯೇಷನ್ ಬಿಲ್ ಮುಗಿಸಬೇಕಾಗುತ್ತದೆ. ಇನ್ನೂ ಕೆಲವು ಡಿಮ್ಯಾಂಡ್

ಗಳು ಬೇರೆ ಇದೆ. ನಾವು ಈ ಮಧ್ಯೆ ಚರ್ಚೆಯನ್ನು ಲಂಬಿಸಿದ್ದರಿಂದ ಈ ಪರಿಸ್ಥಿತಿಗೆ ಒಳಗಾಗಿದ್ದೇವೆ. ಇಲ್ಲದಿದ್ದರೆ ಈ ಪರಿಸ್ಥಿತಿಗೆ ಬರುತ್ತಾ ಇರಲಿಲ್ಲ. ನೋಡೋಣ. ಈಗ ಶ್ರೀ ರಾಜಶೇಖರನ್‌ರವರು ಇನ್ನೂ ೧೦ ನಿಮಿಷ ಮಾತನಾಡಲಿ.

ಶ್ರೀ ಎಂ.ವಿ. ರಾಜಶೇಖರನ್.—ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂಥಾದ್ದು ಇಷ್ಟೆ, ಇವತ್ತೇ ಇದು ಮುಗಿಯಬೇಕು ಎನ್ನತಕ್ಕಂಥ ವಿಚಾರ ನನಗೆ ಗೊತ್ತಿರಲಿಲ್ಲ. ಇದನ್ನು ನಾವು ಬಹಳ ತೀವ್ರವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಕಾರಣವಿಷ್ಟೆ, ತಾವು ಬೇರೆ ಎಲ್ಲಾ ಇಲಾಖೆಗಳ ಬೇಡಿಕೆಗಳಿಗೆ ಸಾಕಷ್ಟು ಕಾಲಾವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರು ಈ ಬಗ್ಗೆ ಒಂದು ದಿನಕ್ಕೆ ಎಷ್ಟರಮಟ್ಟಿಗೆ ಒಪ್ಪಿಕೊಂಡರು ಎಂದು ಹೇಳಿ ನನ್ನ ಮನಸ್ಸಿಗೆ ಬಹಳ ನೋವಾಗುತ್ತಾ ಇದೆ. ಇದನ್ನು ಒಂದು ದಿನದಲ್ಲಿ ಮುಗಿಸುವುದಕ್ಕೆ ಸಾಧ್ಯವಿಲ್ಲ, ಈ ದೇಶದ ೮೦ರಷ್ಟು ಜನರ ಪ್ರಶ್ನೆಯನ್ನು ನಾವು ಇಲ್ಲಿ ಚರ್ಚೆ ಮಾಡುವಾಗ ಇದನ್ನು ಒಂದು ದಿನದಲ್ಲೇ ಮುಗಿಸಬೇಕು ಎಂದರೆ ಅದು ಸೂಕ್ತವಾದ ಮಾತಲ್ಲ.

ಅಧ್ಯಕ್ಷರು.—ಕೆಲವು ಡಿಮ್ಯಾಂಡ್‌ಗಳ ಬಗ್ಗೆ ನಾವು ಚರ್ಚೆಯನ್ನು ಬಹಳ ಲಂಬಿಸಿದ್ದರಿಂದ ಇಂತಹ ಒಂದು ಪರಿಸ್ಥಿತಿ ಉದ್ಭವವಾಗಿದೆ. ಪ್ರತಿ ಶನಿವಾರ ನಾನ್ ಅಫಿಷಿಯಲ್ ಬ್ಯುಸಿನೆಸ್ ಇರುತ್ತದೆ. ಅದನ್ನು ನಾವು ಮುಂದಕ್ಕೆ ಹಾಕಿದ್ದೇವೆ. ಇವತ್ತೂ ಕೂಡ ನಾನ್‌ಅಫಿಷಿಯಲ್ ಬ್ಯುಸಿನೆಸ್ ಇರಬೇಕಾಗಿತ್ತು, ಅದನ್ನೂ ಮುಂದಕ್ಕೆ ಹಾಕಿದ್ದೇವೆ. ನಾವು ೨೮ನೇ ತಾರೀಖಿನೊಳಗೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಮೇಲ್ಮನೆಯಲ್ಲಿ ಅದನ್ನು ಪಾಸ್ ಮಾಡುವುದಕ್ಕೆ ಸಮಯವಿರುವುದಿಲ್ಲ. ನಮಗೆ ಸಮಯದ ಅಭಾವ ಕೂಡ ಇದೆ. ಹಿಂದೆ ಹೆಚ್ಚು ಹೊತ್ತು ಕುಳಿತಿದ್ದರಿಂದ ಈ ಪರಿಸ್ಥಿತಿಯಾಗಿದೆ. ೬.೩೦ ಗಂಟೆಯುವರೆಗೆ ಅಲ್ಲದಿದ್ದರೂ ಬೇಕಾದರೆ ೭.೩೦ ಗಂಟೆಯುವರೆಗೂ ಕುಳಿತುಕೊಳ್ಳೋಣ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಸ್ವಲ್ಪ ಮಾತನಾಡತಕ್ಕಂಥಾದರಲ್ಲಿ ಕಡಿಮೆ ಮಾಡಿದರೆ ಎಲ್ಲಾ ಸಾಧ್ಯವಾಗುತ್ತದೆ. ಮಾನ್ಯ ರಾಜಶೇಖರನ್‌ರವರು ಮಧ್ಯಾಹ್ನ ಮಾತನಾಡಲಿ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಇದಕ್ಕೋಸ್ಕರವಾಗಿ ನಾವು ಊರಿಗೆ ಹಬ್ಬಕ್ಕೆ ಹೋಗುವುದನ್ನು ಬಿಟ್ಟಿದ್ದೇವೆ. ಇಲ್ಲೇ ಮಾತನಾಡುವುದಕ್ಕಾಗಿ ಕುಳಿತಿದ್ದೇವೆ, ಅಂಥಾದರಲ್ಲಿ ತಾವು ಎಲ್ಲರಿಗೂ ಅವಕಾಶ ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ಸುಮಾರು ಒಂದು ವಾರ ಮಾನ್ಯ ಮುಖ್ಯಮಂತ್ರಿಯವರ ಬೇಡಿಕೆ ಬಗ್ಗೆ ಚರ್ಚೆಯಾಗಿ ಆ ಬಗ್ಗೆ ರಿಪ್ಲೈ ಕೊಡುವುದಕ್ಕೆ ೬ ಗಂಟೆ ಹೊತ್ತು ಆಯಿತು. ಇದಕ್ಕೆ ಅಷ್ಟು ಮಾತ್ರ ಕಾಲಾವಕಾಶ ಕೊಡದೇಹೋದರೆ ಹೇಗೆ?

ಅಧ್ಯಕ್ಷರು.—ಮಧ್ಯಾಹ್ನ ನಾವು ಸೇರೋಣ.

ಒಬ್ಬ ಮಾನ್ಯ ಸದಸ್ಯರು.—ನಾವು ರೈತರು ಸ್ವಾಮಿ, ನೀವು ನಮಗೆ ಇಲ್ಲಿ ಪ್ರೊಟೆಕ್ಷನ್ ಕೊಡದೇ ಇನ್ನು ಯಾರು ಕೊಡುತ್ತಾರೆ?

ಅಧ್ಯಕ್ಷರು.—ನಿಮಗೆ ಪೂರ್ಣ ಪ್ರೊಟೆಕ್ಷನ್ ಸಿಕ್ಕುತ್ತದೆ. ಈಗ ಈ ಸಭೆಯನ್ನು ಮುಂದೂಡಿ, ಮತ್ತೆ ಮಧ್ಯಾಹ್ನ ೨ ಗಂಟೆ ೩೦ ನಿಮಿಷಕ್ಕೆ ಸೇರೋಣ.

(ಸಭೆಯು ೧೨.೫೦ಕ್ಕೆ ಮುಕ್ತಾಯವಾಯಿತು)

The House re-assembled at 2-50 P.M.

(Mr. Speaker in the Chair)

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ನಾನು ಮಾತನಾಡುವುದಕ್ಕೆ ಮೊದಲು ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ ಕೋರಂ ಇಲ್ಲದೇ ಇದ್ದುದರಿಂದ ಈ ಸದನ ೨೦ ನಿಮಿಷ ತಡವಾಗಿ ಸೇರಿದೆ. In this context we must indict the ruling party because it is their responsiblity to assure the minimum number of Members being present in this House.

SRI B. BHASKAR SHETTY. You are also equally responsible to maintain quorum in this House. ನಾವು ಮಾತ್ರ ಜವಾಬ್ದಾರರಲ್ಲ, ನೀವೂ ಜವಾಬ್ದಾರರು

ಅಧ್ಯಕ್ಷರು.—ಸದಸ್ಯರೆಲ್ಲರೂ ಜವಾಬ್ದಾರರು.

ಶ್ರೀ ಎಂ. ವಿ. ರಾಜಶೇಖರನ್.—ನಾನು ಆತುರಾತುರವಾಗಿ ಊಟ ಮಾಡಿಕೊಂಡು ಸದನಕ್ಕೆ ಬರೋಣ ಎಂದು ಊಟಕ್ಕೆ ಮನೆಗೆ ಹೋದೆ. ನಾನು ವ್ಯವಸಾಯ ಇಲಾಖೆ ಮೇಲೆ ಮೂರು ಗಂಟೆ ಕಾಲ ಮಾತನಾಡುತ್ತಿದ್ದೇನೆ. ಆದ್ದರಿಂದ ಜಾಗ್ರತೆ ಹೋಗಬೇಕು ಎಂದು ಹೇಳಿದೆ. ನಮ್ಮ ಮನೆ ಯವರು ಒಂದು ಪ್ರಶ್ನೆ ಕೇಳಿದರು. ನೀವು ಇಷ್ಟೆಲ್ಲಾ ಮಾತನಾಡುತ್ತೀರಿ, ಆದರ ಪ್ರಾಕ್ಟಿಕಲ್ ರಿಸಲ್ಟ್ ಏನಾಗುತ್ತದೆ ಎಂದು ಕೇಳಿದರು. ತಮ್ಮ ಮುಖೇನ ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತಾ ಇದ್ದೇನೆ. ನಾವೆಲ್ಲಾ ಇವತ್ತಿನ ದಿವಸ ಈ ಒಂದು ಚರ್ಚೆಯಲ್ಲಿ ಭಾಗವಹಿಸುತ್ತೇವೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಪ್ರಾಕ್ಟಿಕಲ್ ರಿಸಲ್ಟ್ ಅಂದರೆ, ಜಮೀನಿನಲ್ಲಿ ಬೆಳೆಯುವುದೇ ರಿಸಲ್ಟ್ ಫಸಲೇ ರಿಸಲ್ಟ್.

ಶ್ರೀ ಎಂ. ವಿ. ರಾಜಶೇಖರ್.—ರೈತರಿಗೆ ಏನು ಪ್ರತಿಫಲ ಸಿಗುತ್ತದೆ ಎನ್ನುವ ಪ್ರಶ್ನೆ ನಮ್ಮ ಮುಂದಿರತಕ್ಕಂಥಾದ್ದು. ನಾನು ಈ ಬೆಳಿಗ್ಗೆ ಅಗ್ರಿಕಲ್ಚರಲ್ ಗ್ರಾಜುಯೇಟ್ಸ್ ನಡೆಸುತ್ತಾ ಇರತಕ್ಕಂಥ ಧರಣಿ ಮುಷ್ಕರ ಆದರ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೆ. ಸ್ವಾಮಿ, ಅವರು ಈ ತಿಂಗಳು ೧೫ನೇ ತಾರೀಖಿನಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ೧೯ನೇ ತಾರೀಖಿನಿಂದ ಆಮರಣ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಇವರ ಬೇಡಿಕೆಗಳಾದರೂ ಏನು ? ಅವರು ಇಟ್ಟಿರತಕ್ಕ ಪ್ರಮುಖವಾದಂಥ ಬೇಡಿಕೆಗಳು ಮೂರು. ಒಂದನೆಯದು, ಬೇರೆಯವರಿಗೆ ಕೊಡುತ್ತಾ ಇರುವ ಹಾಗೆ ನಮಗೂ ಪೇಪಾರಿಟಿ ಕೊಡಿ ಎಂದು. ಇದು ಬಹಳ ಮುಖ್ಯವಾಗಿರ ತಕ್ಕಂಥಾದ್ದು. ಎರಡನೆಯದು, Creation of more job opportunities because ಈ ವಿಚಾರದಲ್ಲಿ ಸರ್ಕಾರದವರು ಆದಷ್ಟು ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳಬಹುದು. ಆದರೆ ಸಾವಿರಾರು ಕೆಲಸಗಳು ಖಾಲಿ ಇವೆ. ಮೂರನೆಯದು, Recognition of the follwing courses offered by the University of Agricultural sciences. ಅವರು ಇಟ್ಟಿರತಕ್ಕ ಡಿಮ್ಯಾಂಡ್ಸ್ ಬಹಳ ಕಡಿಮೆ ಎಂದು ಹೇಳಿದರೆ ತಪ್ಪಾಗಲಾರದು. ಹಳ್ಳಿಗಾಡಿನಲ್ಲಿರತಕ್ಕ ರೈತರು ಒಂದು ಆಂದೋಲನಕ್ಕೆ ಕಾಲಿಟ್ಟಾಗ ಆ ಆಂದೋಲನವನ್ನು ಮುರಿಯತಕ್ಕ ಪ್ರಯತ್ನಗಳು ಹಲವಾರು ನಡೆಯುತ್ತವೆ. ಅದೇ ರೀತಿ ರೈತರಿಗಾಗಿ ಕೆಲಸ ಮಾಡುತ್ತಾ ಇರತಕ್ಕಂಥ ಈ ಗ್ರಾಜುಯೇಟ್ಸ್ ಏನಿದ್ದಾರೆ ಇವರ ಸಂಘಟನೆಯನ್ನು ಮುರಿಯುವುದಕ್ಕೆ ಸಾಕಷ್ಟು ಪ್ರಯತ್ನಗಳು ನಡೆದಿದೆ ಎಂದು ಹೇಳಿ ದರೆ ತಪ್ಪಾಗಬಾರದು. ತಮಗೆ ಗೊತ್ತಿರುವ ಹಾಗೆ. ಅವರು ಕೇಳುತ್ತಾ ಇರುವುದೇನೆಂದರೆ, ಏನು ನೀವು ಮೆಡಿಕಲ್ ಗ್ರಾಜುಯೇಟ್ಸ್‌ಗೆ ಒಂದು ಸಂಬಳವನ್ನು ಗೊತ್ತುಮಾಡಿದ್ದೀರಿ; ನಾರಾಯಣ ಪೈ ಪೇ ಕಮಿಷನ್ ರಿಪೋರ್ಟ್ ಪ್ರಕಾರ ಇತ್ತೀಚೆಗೆ ನೀವು ಜಾರಿಗೆ ಕೊಟ್ಟಿರತಕ್ಕ ಆರ್ಡರ್ ಪ್ರಕಾರ ೯೨೦ ರೂಪಾಯಿನಿಂದ ಪ್ರಾರಂಭವಾಗಿ ೯೨೦–೩೦–೯೫೦–೧೨೦೦–೬೦–೧೫೦೦–೧೭೨೫ ಅನ್ನು ಅಸಿಸ್ಟೆಂಟ್ ಅಗ್ರಿಕಲ್ಚರ್ ಆಫೀಸರಿಗೆ ಗೊತ್ತುಮಾಡಿದ್ದೀರಿ. ಅವರು ಕೇಳುತಾ ಇರುವುದು ಏನೆಂದರೆ, ನೀವು ಏನು ಮೆಡಿಕಲ್ ಗ್ರಾಜುಯೇಟ್ಸ್‌ಗೆ ಇದನ್ನು ಕೊಟ್ಟಿದ್ದೀರಿ ಅದನ್ನು ನಮಗೆ ಕೊಡಿ ಎಂದು. ಹೆಲ್ತ್ ಆಫೀಸರ್ಸ್‌ಗೆ ೬೬೦ ಬೇಸಿಕ್‌ನಿಂದ ಶುರುಮಾಡಿದ್ದೀರಿ ಈಗ ಅವರಿಗೆ ೧೨೦೦ರಿಂದ ೨೧೨೫ ವರೆಗೆ ಕೊಟ್ಟಿದ್ದೀರಿ. ಅಲ್ಲದೆ ಮೊನ್ನೆ ಜುಲೈ ೧೦ನೇ ತಾರೀಖು ಒಂದು ಆಜ್ಞೆಯನ್ನು ಹೊರಡಿಸಿ ವೆಟರ್ನರಿ ಗ್ರಾಜುಯೇಟ್ಸ್‌ಗೆ ಸಹಿತ ಇದೇ ಒಂದು ಪೇ ಸ್ಕೇಲನ್ನು ಕೊಟ್ಟಿದ್ದೀರಿ. ಆದುದರಿಂದ ಈ ಪೇ ಸ್ಕೇಲನ್ನು ನಮಗೆ ಕೊಡಿ ಎಂದು ಅವರು ಕೇಳುತ್ತಾ ಇರತಕ್ಕಂಥಾದ್ದು. ಇದು ಬಹಳ ಸಾಧುವಾದುದು, ಇದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ, ಇದು ಬಹಳ ಮುಖ್ಯವಾದುದು. ಇದಕ್ಕೆ ಕಾರಣ ವೇನೆಂದರೆ ನಾರಾಯಣ್ ಪೈ ಪೇ ಕಮಿಷನ್ ರಿಪೋರ್ಟಿನಲ್ಲಿ ಒಂದು ವಿಷಯವನ್ನು ಹೇಳಿದ್ದಾರೆ. ಅದು ಒಂದೇ ಒಂದನ್ನು ನಾನು ಕೋಟ್ ಮಾಡುತ್ತೇನೆ.

"It will be seen that each one of these different professions serve or supply a certain need of mankind.

None of these needs can be said to be greater of smaller than another. "Every one of them is necessary; food, health, agricultural development, cattle, wealth are all necessary for human welfare".

The General calipre of the competence conferred by these qualifications and the nature of the skill which can be developed by and through it when related to the actualities of life from the point of view of needs met by these different professions can only be regarded as falling into the same level rather than in different levels.

ಇದು ಬಹಳ ಮುಖ್ಯವಾದುದು. ಅದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಅವರು ಪುನಃ ಹೇಳುತ್ತಾರೆ.

Further, by placing then in the same level, a very healthy and desirable consequence which will flow is the removal of unnecessary yet almost inevitable feeling of frustration and inferioritp on the part of some and of superiority on the part of some others. Social good, political wisdom as well as general human welfare all require and will stand enhanced and enlarged if by placing all of them in the same grade they develop a feeling of mutual respect and a sense of common purpose in public service.

ಇದನ್ನು ಸರ್ಕಾರದವರು ಗಮನಿಸಬೇಕು. ಮತ್ತೆ ಈ ಗ್ರಾಜುಯೇಟ್ಸ್ ಎಲ್ಲಿ ಸರ್ವ್ ಮಾಡುತ್ತಾರೆ ಎನ್ನುವುದು ತಮಗೆ ಗೊತ್ತಿದೆ. ಅವರು ಹಳ್ಳಿಗಾಡಿನಲ್ಲಿ ಬಹಳ ಕಷ್ಟವಾದಂಥ ಪರಿಸ್ಥಿತಿಯಲ್ಲಿ ಸರ್ವ್ ಮಾಡುತ್ತಾರೆ. ನಾನು ಬೆಳಿಗ್ಗೆ ಹೇಳಿದಂತೆ, ಟ್ರೈನಿಂಗ್ ಅಂಡ್ ವಿಸಿಟ್ ಸಿಸ್ಟಂನಲ್ಲಿ ಬರತಕ್ಕಂಥಾವರು ಇವರು. ಮತ್ತು ವ್ಯವಸಾಯ ಇಲಾಖೆಯಲ್ಲಿ ರೈತರಿಗೆ ಹೆಚ್ಚಿನ ರೀತಿಯಲ್ಲಿ ಅವರಿಗೆ ಅನುಕೂಲವಾದ ಕೆಲಸವನ್ನು ಮಾಡಬೇಕಾದರೆ ಬರತಕ್ಕ ಜನಗಳು ಇವರು, ಇವತ್ತಿನದಿವಸ ಎಕ್ಸ್‌ಟೆನ್‌ಷನ್ ಮೂಲಕವಾಗಲಿ ಅಥವಾ ನಾನಾ ಕಾರ್ಯಕ್ರಮಗಳಲ್ಲಿ ಕೆಲಸಮಾಡತಕ್ಕ ಅಗ್ರಿಕಲ್ಚರಲ್ ಗ್ರಾಜುಯೇಟ್ಸ್ ಏನಿದ್ದಾರೆ ಇವರು ಕೇಳುತಾ ಇರತಕ್ಕಂಥ ಬೇಡಿಕೆಗಳು ಸಾಧುವಾಗಿರತಕ್ಕಂಥಾದ್ದು. ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಬಯಸುತ್ತೇನೆ. ಅವರು ವಿಧಾನ ಸೌಧದ ಮುಂದೆ ಧರಣಿ ಕುಳಿತಿದ್ದಾರೆ. ಅವರ ಈ ಆಂದೋಲನ ತೀವ್ರ ರೂಪವನ್ನು ತಾಳುವುದಕ್ಕೆ ಅವಕಾಶ ಕೊಡದೆ, ಅವರು ಕೇಳುತ್ತಾ ಇರತಕ್ಕಂಥ ಮೂರೇ ಮೂರು ಬೇಡಿಕೆಗಳನ್ನು ತಾವು ಪರಿಶೀಲನೆ ಮಾಡಿ, ಅದನ್ನು ಒಪ್ಪಿ ಆ ಅನುಕೂಲತೆಯನ್ನು ಅವರಿಗೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನ ಪ್ರಾಮುಖ್ಯವಾದಂಥ. ಈ ರಾಜ್ಯದಲ್ಲಿ ನಡೆಯುತ್ತಾ ಇರತಕ್ಕಂಥ ರೈತರ ಆಂದೋಲನ ಮತ್ತು ಆ ಆಂದೋಲನದ ಮೂಲ–ಇವೆರಡರ ವಿಚಾರದಲ್ಲಿ ಕೆಲವು ಮಾತುಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ ಮತ್ತು ಕೆಲವು ಸಲಹೆಗಳನ್ನೂ ಸಹಿತ ಕೊಡುವುದಕ್ಕೆ ಇಷ್ಟಪಡುತ್ತೇನೆ.

೩–೦೦ ಪಿ.ಎಂ.

ಸ್ವಾಮಿ, ಇವತ್ತಿನ ದಿವಸ ರಾಜ್ಯದಲ್ಲಿ ರೈತರ ಆಂದೋಳನ ನಡೆಯುತ್ತಾ ಬಂದಿದೆ. ಆದರೆ ಈಗ ಅದು ಎಲ್ಲಾ ನಿಂತುಹೋಗಿದೆ, ಅದನ್ನು ನಾವೇ ನಿಲ್ಲಿಸಿದ್ದೇವೆಂದು ಸರ್ಕಾರದವರು ಏನಾದರೂ ತಿಳಿದುಕೊಂಡಿದ್ದರೆ ಅದು ಒಂದು ಭ್ರಮ ನಿರಶನವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ

ಆಂದೋಳನ ನಡೆಯುತ್ತಿರುವುದಾದರೂ ಏತಕ್ಕಾಗಿ? ನಮಗೆ ಗೊತ್ತಿರುವ ಹಾಗೆ ನಮ್ಮ ರಾಷ್ಟ್ರದಲ್ಲಿರತಕ್ಕ ಜನಸಂಖ್ಯೆ ಸುಮಾರು ೩೧೦ ದಶಲಕ್ಷ ಜನ ಬಡತನ ರೇಖೆಯ ಕೆಳಗಡೆ ಇದ್ದಾರೆ. ನಮ್ಮ ಸರ್ಕಾರದವರೇ ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಜನಸಂಖ್ಯೆ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರೈತನ ವರ್ಷದ ಆದಾಯವೆಷ್ಟು ಸ್ವಾಮಿ? ೮೨೦ ರೂಪಾಯಿಗಳೆಂದು ಒಂದು ಕಡೆ ಕೊಟ್ಟಿದ್ದೀರಿ ಮತ್ತೊಂದು ಕಡೆ ಜನಗಳ ಆದಾಯ ಅವರಿಗೆ ಬರುತ್ತಿರುವ ಸವಲತ್ತುಗಳು ಇದನ್ನು ನೋಡಿದ್ದೇ ಆದರೆ ನಮ್ಮಗಳಿಗೆ ಅತ್ಯಾಶ್ಚರ್ಯವಾಗುತ್ತದೆಂದು ಹೇಳಿದರೆ ತಪ್ಪಾಗಲಾರದು ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೇ ತರುವುದಕ್ಕೆ ಇಷ್ಟಪಡುತ್ತೇನೆ. ಎಲ್.ಐ.ಸಿ. ಎಂಪ್ಲಾಯಿಸ್ ಇದು ಸರ್ಕಾರಕ್ಕೆ ಸೇರಿರುವಂಥಾದ್ದು. ಆರ್ಥಿಕ ಮಂತ್ರಿಗಳವರು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಹೇಳಿದಂಥ ಮಾತುಗಳ ಆಧಾರದ ಮೇಲೆ ಅವರು ಕೊಟ್ಟಿರುವಂಥಾ ಅಂಕಿಅಂಶಗಳನ್ನೇ ತಮ್ಮ ಮುಂದಿಡುತ್ತೇನೆ. ಎಲ್.ಐ.ಸಿ. ಎಂಪ್ಲಾಯೀಸ್ ಏನಿದ್ದಾರೆ ಅವನಿಗೆ ಎಷ್ಟು ಸಂಬಳ ಬರುತ್ತದೆ ಎಂಬುದನ್ನು ಹೇಳಿದರೆ ನಿಮಗೆಲ್ಲಾ ಆಶ್ಚರ್ಯವಾಗುತ್ತದೆ. ೩ನೇ ದರ್ಜೆಯವನಿಗೆ ಮಂತ್ಲಿ ಎಮಾಲ್ಯುಮೆಂಟ್ಸ್ ಎಷ್ಟು ಬರುತ್ತಿದೆ ಎಂದರೆ ಬೇಸಿಕ್ ೯೨೦ ಇದ್ದರೆ ಡಿ.ಎ. ೨ ಸಾವಿರದ ೪೨ ರೂ.ಗಳು ಇದೆ ಒಟ್ಟು ೩,೪೧೨ ರೂಪಾಯಿಗಳು ಬರುತ್ತಿದೆ. ೩ನೇ ದರ್ಜೆಯ ಕೆಲಸಗಾರನಿಗೆ ಇಷ್ಟು ಬರಬೇಕಾಗಿದ್ದರೆ ಬೇರೆಯವರ ಗತಿ ಏನು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಹಳ್ಳಿಯಲ್ಲಿರತಕ್ಕ ರೈತನಿಗೆ ಒಂದು ವರ್ಷವೆಲ್ಲಾ ದುಡಿದರೆ ಇವನ ಒಂದು ತಿಂಗಳಿನಷ್ಟಾದರೂ ಲಾಭ ಬರುತ್ತದೆಯೇ ಎಂಬುದನ್ನು ನಾವು ಯೋಚನೆ ಮಾಡಿ ನೋಡಬೇಕಾಗಿದೆ. ಸ್ವಾಮಿ, ಇದು ಅಲ್ಲದೇನೇ ಆರ್ಥಿಕ ಮಂತ್ರಿಗಳವರು ಸೆಂಟ್ರಲ್ ಗೌರ್ನಮೆಂಟ್ ಎಂಪ್ಲಾಯಿಸ್‌ಗಳಿಗೆ ಅಲ್ಲಿರತಕ್ಕ ಸ್ಟೆನೋಗ್ರಾಫರ್ಸ್ ಮತ್ತು ಅಸಿಸ್ಟೆಂಟ್ ಕ್ಲರ್ಕ್‌ಗಳಿಗೆ ಬರತಕ್ಕ ಸಂಬಳದ ಮಾಹಿತಿಯನ್ನು ಕೊಟ್ಟಿದ್ದಾರೆ ಆ ಮಾಹಿತಿ ಪ್ರಕಾರವಾಗಿ ಒಬ್ಬ ಅಸಿಸ್ಟೆಂಟ್‌ಗೆ ತಿಂಗಳಿಗೆ ೧,೨೪೩ ರೂಪಾಯಿಗಳು ಬರುತ್ತಿದೆ. ನಮ್ಮ ರಾಜ್ಯದಲ್ಲಿ ಯಾರು ಇಷ್ಟನ್ನು ಗಳಿಸುತ್ತಾರೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ಇವತ್ತಿನ ದಿವಸ ನಿಮ್ಮ ಅಗ್ರಿಕಲ್ಚರಲ್ ಸೆನ್ಸಸ್‌ನ ಕಮಿಷನ್ ಒಂದು ಇದೆ. ಅವರು ೧೯೭೦-೭೧ರಲ್ಲಿ ಒಂದು ಸಮೀಕ್ಷೆ ನಡೆಸಿ ಕೆಲವು ವಿಚಾರಗಳನ್ನು ರಾಜ್ಯದ ಮತ್ತು ರಾಷ್ಟ್ರದ ಮುಂದಿಟ್ಟಿದ್ದಾರೆ. ಅದರ ಪ್ರಕಾರವಾಗಿ ಸುಮಾರು ೭೬.೪ ಪರ್ಸೆಂಟ್‌ನಷ್ಟು ಹಳ್ಳಿಗಾಡಿನಲ್ಲಿರತಕ್ಕ ಸಣ್ಣ ರೈತರು ಮತ್ತು ಬಡವರು ಸಾಲದ ಹೊರೆಯಿಂದ ತೊಳಲಾಡುತ್ತಿದ್ದಾರೆಂದು ಹೇಳಿ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ ಇದಕ್ಕೆ ಕಾರಣವೇನು? ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವಷ್ಟು ಆದಾಯ ಬರುತ್ತಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಸ್ವಾಮಿ ಇದನ್ನು ಹೇಳುತ್ತಾ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಇವತ್ತಿನ ದಿವಸ ರಾಷ್ಟ್ರದಲ್ಲಿ ೧೯೭೩ನೇ ಇಸವಿಯಲ್ಲಿ ನಡೆದಂಥ ಸರ್ವೆ ಪ್ರಕಾರವಾಗಿ ನಾನಾ ಔದ್ಯಮಿಕ ಕ್ಷೇತ್ರದಲ್ಲಿ ಕಾರ್ಮಿಕರಿಗೆ ಬರುತ್ತಿರತಕ್ಕಂಥ ಪ್ರತಿ ನಿತ್ಯದ ಸಂಬಳವೆಷ್ಟು? ಮತ್ತು ರೈತನಿಗೆ ಬರುತ್ತಿರತಕ್ಕಂಥ ಆದಾಯವೆಷ್ಟು ಎಂಬುದನ್ನು ಪರಿಶೀಲನೆ ಮಾಡಿ ನೋಡುವುದಾದರೆ ರೈತನ ಸ್ಥಿತಿ ಬಹಳ ದಾರುಣವಾದ ಪರಿಸ್ಥಿತಿಯಲ್ಲಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ತಮಗೆ ಗೊತ್ತಿರುವ ಹಾಗೆ ಇವತ್ತಿನ ದಿವಸ ನಾನಾ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ವರ್ಗದವರು ಏನಿದ್ದಾರೆ ಅವರು ಬೇರೆ ವರ್ಗದವರನ್ನು ಕಂಪೇರ್ ಮಾಡಿದರೆ ಬಹಳ ಕಡಿಮೆ ಸಂಬಳವನ್ನು ಗಳಿಸುತ್ತಿದ್ದಾನೆ. ಅದಕ್ಕೆ ತಮಗೆ ಒಂದು ಮಾಹಿತಿ ಪ್ರಕಾರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಬೊಂಬಾಯಿಯಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕಾರ್ಮಿಕ ದಿನಕ್ಕೆ ಕಡೆಯ ಪಕ್ಷ ೫೫ ರೂಪಾಯಿಗಳನ್ನು ಗಳಿಸುತ್ತಾನೆ. ಅದೇ ಕಾರ್ಮಿಕ ಕಲ್ಕತ್ತಾದಲ್ಲಿ ದಿನಕ್ಕೆ ೩೯ ರೂಪಾಯಿಗಳನ್ನು ಗಳಿಸುತ್ತಾನೆ. ಅದೇ ಕಾರ್ಮಿಕ ಮದ್ರಾಸ್‌ನಲ್ಲಿ ೩೯ ರೂಪಾಯಿಗಳನ್ನು ಗಳಿಸುತ್ತಾನೆ. ಅದೇ ಕಾರ್ಮಿಕ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವವನು ಎಷ್ಟು ಗಳಿಸುತ್ತಾನೆ ಎನ್ನತಕ್ಕ ವಿವರವನ್ನು ಇಲ್ಲಿ ಪ್ರಸ್ತಾಪ ಮಾಡಿಲ್ಲ ಇವರಿಗೆ ಇಷ್ಟೆಲ್ಲಾ ಆದಾಯ ಬರುತ್ತಿರಬೇಕಾದರೆ ರೈತ ಮಾತ್ರ ಇಷ್ಟು ಕಷ್ಟದ ಸ್ಥಿತಿಯಲ್ಲಿರಬೇಕಾದರೆ ಅದಕ್ಕೆ ಕಾರಣ ಸರ್ಕಾರದವರು ಅವನು ಬೆಳೆದಂಥ ಬೆಳೆಗೆ ಸರಿಯಾದ ಬೆಲೆಯನ್ನು ನಿಗದಿ ಮಾಡದೇ ಇರುವುದು ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಪಟ್ಟಣದಲ್ಲಿರತಕ್ಕ ಜನಗಳ ಕಷ್ಟವನ್ನು ಅರಿತು ಸರ್ಕಾರದವರು ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಕಡಿಮೆ ರೀತಿಯಲ್ಲಿ ದವಸ ಧಾನ್ಯಗಳನ್ನು ಒದಗಿಸಿ ಕೊಡಬೇಕಾಗಿರುತ್ತದೆ. ನನಗೆ ಗೊತ್ತಿರುವ ಹಾಗೆ ಸರ್ಕಾರದವರು ೬, ೮ ನೂರು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಇದಕ್ಕಾಗಿ ಸಬ್ಸಿಡಿ ರೂಪದಲ್ಲಿ ಕೊಡುತ್ತಿ

ದ್ದಾರೆ. ಆದರೆ ೧೦೦ಕ್ಕೆ ೮೦ ಭಾಗದಷ್ಟು ಜನ ಈ ಒಂದು ಅನುಕೂಲತೆಯನ್ನು ಪಡೆಯುತ್ತಿಲ್ಲ, ಆದುದರಿಂದ ಆ ಜನಗಳಿಗೂ ಸಹ ತಾವು ಏನೇನು ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕಾಗುತ್ತದೆ. ಇದು ನಮ್ಮ ಮುಂದಿರತಕ್ಕ ಪ್ರಶ್ನೆ. ಇವತ್ತಿನ ದಿವಸ ರೈತರು ಹಗಲೂ ರಾತ್ರಿ ಕಷ್ಟಪಟ್ಟು ಬೆಳೆಯುತ್ತಾನೆ, ಆ ರೀತಿ ಬೆಳೆದಂಥವನಿಗೆ ಸರಿಯಾದ ಬೆಂಬಲ ಬೆಲೆ ಬರದೇ ಹೋದರೆ ಅವನು ಉಳಿಯತಕ್ಕದ್ದಾದರೂ ಹೇಗೆ ? ಇವತ್ತಿನ ದಿವಸ ವಿಶ್ವದ ಎಲ್ಲಾ ರಾಷ್ಟ್ರಗಳೂ ಸಹ ರೈತ ಬೆಳೆದಂಥ ಬೆಳೆಯ ವಿಚಾರದಲ್ಲಿ ಅತ್ಯಂತ ಹೆಚ್ಚಿನ ತೀವ್ರ ಗಮನವನ್ನು ಕೊಡುತ್ತಿದ್ದಾರೆ. ಏತಕ್ಕೆಂದರೆ ತಮಗೆಲ್ಲಾ ಗೊತ್ತು, ಇವತ್ತಿನ ದಿವಸ ಬೆಲೆಗಳು ಏರಿದೆ, ಬೆಳೆಯದೇ ಹೋದರೆ ಇಡೀ ರಾಷ್ಟ್ರದ ಸ್ವಾತಂತ್ರ್ಯವೇ ಕಷ್ಟದ ಸ್ಥಿತಿಗೆ ಬರುತ್ತದೆಂದು ಹೇಳಿ ನೀವು ಡಿಫೆನ್ಸ್ ಬಡ್ಜೆಟ್ ಸ್ಟ್ರಾಟಜಿಗೆ ಇಂಪಾರ್ಟೆನ್ಸ್‌ನ್ನು ಕೊಡುತ್ತೀರೋ ಹಾಗೆ ಫುಡ್ ಬಡ್ಜೆಟ್‌ಗೆ ಕೂಡ ಸ್ಟ್ರಟಜಿ ಇಂಪಾರ್ಟೆನ್ಸ್ ಕೊಡಬೇಕು. ಫುಡ್ ಇದ್ದರೆ ತಾನೆ ಸೈನ್ಸ್ ಇರುವುದು ? Army moves on the belly. Not only army but all of us we move on the belly.

ತಾವು ಒಂದು ಗಂಟೆಗೆ ಏತಕ್ಕೆ ಅಡ್ಜರ್ನ್ ಮಾಡಿದಿರಿ ಒಂದೆರಡು ದಿನ ಊಟ ಮಾಡದೇ ಹಾಗೆಯೆ ಕೂತ.ಕೊಳ್ಳಬಹುದಾಗಿತ್ತಲ್ಲಾ, ಹಾಗೆ ನೀವು ಮಾಡಲಿಲ್ಲ ಏತಕ್ಕೆಂದರೆ ಎಲ್ಲರಿಗೂ ಆಹಾರ ಬೇಕು, ಆಹಾರವನ್ನು ಕೊಡತಕ್ಕ ಮಹಾನುಭಾವ ಯಾರಿದ್ದಾರೆ, ಅವನನ್ನು ನಾವು ಸರಿಯಾಗಿ ನೋಡಿಕೊಳ್ಳದೇ ಆಹಾರ ಸಿಗತಕ್ಕ ಬಗೆಯಾದರೂ ಹೇಗೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಮೊನ್ನೆ ತಾನೇ ಜೂನ್ ೨ನೇ ತಾರೀಖಿನ ಪತ್ರಿಕೆಯಲ್ಲಿ ಓದಿದೆ, ಹಿಂದೂ ಪತ್ರಿಕೆಯಲ್ಲಿ ಬ್ರೆಜ್ನೇವ್‌ರವರು ಏನು ಒಂದು ಪಾಲಿಸಿ ವಿಚಾರದಲ್ಲಿ ಡಿಕ್ಲೇರ್ ಮಾಡಿದ್ದಾರೆ ಅದನ್ನು ತಮ್ಮ ಮುಖಾಂತರ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

> "Speaking on Monday at a Session of the Presidium of the Supreme Soviet of the USSR, Mr. Brezhnev said, the country should now direct all efforts at boosting agricultural production, rise in the level of work and implementing the planned assignment. He was outlining to the Presidium the Food Strategy which he had unveiled last week at the Party's Central Committee. He adds, a package of incentives include a 30% increase from January 1st next year in the purchase of farm products, live stock, poultry etc., in a move to arrest the declining trend in food production in the last 3 years and reduce the dependence on imports."

ಇದನ್ನು ತಾವು ಗಮನದಲ್ಲಿಡಬೇಕಾಗುತ್ತದೆ. ಕೈಗಾರಿಕೆಗಳಲ್ಲಿ ಅತಿ ಮುಂದುವರಿದ ರಾಷ್ಟ್ರಗಳು ಕೂಡ ಇವತ್ತಿನ ದಿವಸ ಆಹಾರೋತ್ಪಾದನೆ ಕಡೆ ತೀವ್ರ ಗಮನ ಕೊಟ್ಟಿರುವಾಗ ನಮ್ಮ ಸರ್ಕಾರ ಏಕೆ ಆ ರೀತಿ ಮಾಡುವುದಕ್ಕೆ ಮನಸ್ಸು ಮಾಡಬಾರದು ಎಂದು ಕೇಳುತ್ತೇನೆ. ಉದಾಹರಣೆಗೆ ಜಪಾನ್ ದೇಶ ತೆಗೆದುಕೊಳ್ಳಿ. ಜಪಾನ್ ಬಹಳ ದೊಡ್ಡ ರಾಷ್ಟ್ರ, ಔದ್ಯೋಗೀಕರಣವಾಗಿರತಕ್ಕ ರಾಷ್ಟ್ರ. ಇವತ್ತು ಆ ದೇಶದಲ್ಲಿರತಕ್ಕ ರೈತ ಬೆಳೆದ ಭತ್ತಕ್ಕೆ ಅಂತರಾಷ್ಟ್ರೀಯ ಬೆಲೆ ಏನಿದೆ ಅದರ ೨-೩ರಷ್ಟು ಬೆಲೆಯನು ಆ ಸರ್ಕಾರದವರು ಕೊಟ್ಟಿದ್ದಾರೆ. ಏತಕ್ಕೋಸ್ಕರ ಕೊಟ್ಟರು ? ಇವತ್ತಿನದಿವಸ ಧಾನ್ಯ ಉತ್ಪಾದನೆಯಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡಿದರೆ, ರೈತನನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಇಡೀ ದೇಶ ಕಷ್ಟ ಪರಿಸ್ಥಿತಿಯನ್ನೆದುರಿಸಬೇಕಾಗುತ್ತದೆಂಬುದು ಅವರಿಗೆ ಗೊತ್ತಿದೆ ಆದ್ದರಿಂದ, ನಾನು ಅತ್ಯಂತ ವಿನಿಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಬೆಳೆ ಬೆಳೆಯತಕ್ಕ ರೈತನಿಗೆ ಸರಿಯಾದ ಬೆಲೆಯನ್ನು ಕೊಡತಕ್ಕದ್ದು ಮುಖ್ಯ. ಅದನ್ನು ಕೊಡದೆ ಹೋದರೆ ಅವನು ಬದುಕುವುದಾದರೂ ಹೇಗೆ ಎಂಬುದನ್ನು ಯೋಚನೆ ಮಾಡಬೇಕು. ಹಳ್ಳಿಯಲ್ಲಿ ಬಡತನ ಏತಕ್ಕೆ ಹೆಚ್ಚುತ್ತಿದೆ, ಪಟ್ಟಣದಲ್ಲಿ ಸಂಪತ್ತು ಏತಕ್ಕೆ ಬೆಳೆಯುತ್ತಿದೆ ಎಂಬುದನ್ನು ಆಲೋಚಿಸಬೇಕು. ಬೆಂಗಳೂರು ನಗರದಲ್ಲಿ ಕೆಲವು ಹೋಟೆಲುಗಳಿಗೆ ಹೋಗಿ ನೋಡಬೇಕು ಅಲ್ಲಿ ಸಂಪತ್ತು ಯಾವ ರೀತಿ ದುರ್ವ್ಯಯವಾಗುತ್ತಿದೆ ಎಂಬುದನ್ನು, ಒಂದು ಊಟಕ್ಕೆ ನೂರು ರೂಪಾಯಿ, ಒಂದು ರೂಮಿನ ಬಾಡಿಗೆ ೪೦೦ ರೂಪಾಯಿಗಳಿಂದ ೧೨೦೦ ರೂಪಾಯಿಗಳವರೆಗೆ

ಇರುತ್ತದೆ. ಈ ಹಣ ಯಾರದ್ದು ? ಎಲ್ಲಿಯದು ? ಈ ಎಲ್ಲ ಹಣ ರೈತರಿಂದ, ಬಡಜನರಿಂದ, ಹಳ್ಳಿಗಾಡಿನಿಂದ ಬಂದದ್ದು ಎಂದರೆ ತಪ್ಪಾಗಲಿಕ್ಕಿಲ್ಲ. ಪಟ್ಟಣದಲ್ಲಾದರೆ ಟ್ರೇಡ್ ಆಗಲಿ, ಕಮರ್ಷಿಯಲ್ ಆಗಲಿ, ಇಂಡಸ್ಟ್ರಿ ಆಗಲಿ ಅವರು ಉತ್ಪಾದನೆ ಮಾಡತಕ್ಕ ಪ್ರತಿಯೊಂದು ವಸ್ತುವಿಗೆ ಮಾಡತಕ್ಕ ಎಲ್ಲಾ ಖರ್ಚು, ವಿಹಾರಕ್ಕೆ ಹೋದರೆ (ಹೆಂಡತಿ ಮಕ್ಕಳ ಜೊತೆ) ಆಗ ಮಾಡಿದ ಖರ್ಚು. ನಾಯಿ ಸಾಕಿದ್ದರೆ ಅದಕ್ಕೆ ಹಾಕತಕ್ಕ ಅನ್ನದ ಖರ್ಚು ಎಲ್ಲ ಖರ್ಚನ್ನು ಸೇರಿಸಿ ಆ ಪದಾರ್ಥದ ಬೆಲೆ ಇಷ್ಟು ಎಂದು ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡುತ್ತಾರೆ. ಆದರೆ ಹಗಲು ರಾತ್ರಿ ಕಷ್ಟ ಬಿದ್ದು ಬೆಳೆಯುವ ರೈತನಿಗೆ ಅಂಥ ಒಂದು ಉತ್ತಮವಾದ ಬೆಲೆ ದೊರೆಯುವುದಿಲ್ಲ. ಉದಾಹರಣೆಗೆ, ನಾನು ಬೆಳೆದ ತೊಗರಿ ವಿಚಾರದಲ್ಲಿ ಈಗಾಗಲೇ ಹೇಳಿದ್ದೇನೆ. ಇವತ್ತಿನ ದಿವಸ ಪ್ರೈಸ್ ಪಾಲಿಸಿ ಏನಿದೆ ಅದು ಕೇಂದ್ರ ಸರ್ಕಾರಕ್ಕೆ ಸೀಮಿತವಾದದ್ದು, ಇದನ್ನು ನಾವು ಬದಲಾವಣೆ ಮಾಡುವುದಕ್ಕೆ ಕಷ್ಟವಾಗುತ್ತದೆಂದು ಸರ್ಕಾರದವರು ಹೇಳುತ್ತಾರೆ. ಕೇಂದ್ರ ಸರ್ಕಾರದ ಮೇಲೆ ಈ ಬಗ್ಗೆ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಒತ್ತಾಯ ತರಬೇಕು. ಇವರು ಮಾಡತಕ್ಕ ಕೆಲಸಕಾರ್ಯಗಳು ಬಹಳ ಇವೆ, ಅವನ್ನು ಮಾಡಬೇಕು. ಈ ವಿಚಾರದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

1) "They must establish a sound agency for implementation of the declared policy so far as the prices are concerned.

2) Evaluation of suitable market technology to help in different marketing centres."

ಇವತ್ತಿನ ದಿವಸ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಇವೆ ಎಂದು ಏನು ಹೇಳುತ್ತೀರಿ ಅಲ್ಲಿ ಹೋಗಿ ನೋಡಬೇಕು ಅವುಗಳ ಪರಿಸ್ಥಿತಿಯನ್ನು. ಇದೆಲ್ಲಾ ಶ್ರೀಕಂಠಯ್ಯನವರಿಗೆ ಗೊತ್ತಿದೆ, ಆದರೆ ಅವರು ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಪಟ್ಟಭದ್ರಹಿತಾಸಕ್ತಿಗಳು ಸರಿಯಾದ ರೀತಿಯಲ್ಲಿ ಮಾರುಕಟ್ಟೆಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಅದನ್ನು ಸರ್ಕಾರ ಸರಿ ಮಾಡಬೇಕಾದರೆ ಕಾಲಾವಕಾಶ ಬೇಕಾಗುತ್ತದೆ. ಆದರೂ ಕೂಡ ಇದು ಬಹಳ ಮುಖ್ಯವಾಗಿ ಆದಷ್ಟು ಜಾಗ್ರತೆ ಆಗಬೇಕಾಗುತ್ತದೆ.

3) "Streamlining the working of Regulated markets and improve their efficiency in their work.

4) Grading as well as evaluation of suitable market intelligence service and dissemination of market news so far as production and arrivals are concerned.

5) Arrangments for timely and speedy transportation of agricultural commodities from surplus areas to the deficit areas.

6) Support price on buffer stock as well as introducing the import stability to domestic production.

7) Accumulating export commodities which are in surplus production"

ಇವತ್ತು ಆಹಾರ ಧಾನ್ಯ ಏನಿದೆ ಇದರ ಉತ್ಪಾದನೆಗೆ ಬೇಕಾದ ಸೌಲಭ್ಯವನ್ನೊದಗಿಸುವುದು ಮತ್ತು ಅದಕ್ಕೆ ಯೋಗ್ಯ ಬೆಲೆಯನ್ನು ನಿಗಧಿಗೊಳಿಸುವುದು ಸರ್ಕಾರಕ್ಕೆ ಬಹಳ ಕಷ್ಟಕರವಾದ ಸಮಸ್ಯೆಯಾಗಿ ಕಾಣುತ್ತಿದೆ ಇದನ್ನು ಬಹಳ ಸುಲಭವಾಗಿ ಬಗೆಹರಿಸತಕ್ಕ ಮಾರ್ಗಗಳು ಇವೆ. ಇದಕ್ಕೆ ಪೊಲಿಟಿಕಲ್ ವಿಲ್ ಪವರ್ ಬೇಕಾಗುತ್ತದೆ. ಅದು ಬಂದದ್ದೇ ಆದರೆ ಅತಿ ಶೀಘ್ರವಾಗಿ ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಅನ್ನಿಸುತ್ತದೆ "Development of appropriate technology of processing of agricultural produce." ಇದನ್ನು ತಾವು ಮಾರುಕಟ್ಟೆಯಲ್ಲಿ ನೋಡಬೇಕು. ಪ್ರೊಸೆಸಿಂಗ್‌ನಲ್ಲಿ ಎಷ್ಟು ತೊಂದರೆ ಇದೆ ಎಂಬುದನ್ನು ಅಲ್ಲಿ ಗಮನಿಸಬೇಕು.

enstituting studies on cost minimisation and profit maximisation· Iltting-up of a Bureau of Agricultural Costing and pricing on the sines of Bureau of Industrial Costing and Pricing.

ತಮಗೆ ಗೊತ್ತಿರುವ ಹಾಗೆ ಇವತ್ತಿನ ದಿವಸ ಇಂಡಸ್ಟ್ರಿಯಲ್ ವರ್ಕರ್ಸ್ ವೇಜಸ್ಸನ್ನು ಹೆಚ್ಚಿಸುವಾಗ ಪ್ರೈಸ್ ಇಂಡೆಕ್ಸನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ. ಅದರ ಪ್ರಕಾರ ೨೨೦-೪೦ ಪಾಯಿಂಟ್‌ಗಳ ಮೇಲೆ ಹೋದರೆ ತಕ್ಷಣ ವೇಜಸ್ಸನ್ನು ಹೆಚ್ಚಿಸತಕ್ಕ ನೀತಿಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಅಂಥ ವ್ಯವಸ್ಥೆಯನ್ನು ರಾಜ್ಯ ಸರ್ಕಾರದವರು ಏತಕ್ಕೆ ಜಾರಿಗೆ ತರಬಾರದು ? ಇವತ್ತಿನ ದಿವಸ ಇನ್‌ಪುಟ್ಸ್ ಬೆಲೆ ಏನು ? ಆ ಇನ್‌ಪುಟ್ಸ್ ಬೆಲೆಯನ್ನು ಮತ್ತು ನಡುವೆ ಮಾಡಿರತಕ್ಕ ಇನ್‌ವೆಸ್ಟ್‌ಮೆಂಟ್ ಮೇಲೆ ಬರತಕ್ಕ ಲಾಭ ಮತ್ತು ಲೇಬರ್ ಚಾರ್ಜಸ್ ಎಲ್ಲವನ್ನು ಗಣನೆಗೆ ತೆಗೆದುಕೊಂಡು ಈ ಒಂದು ಇನ್‌ಸೆಂಟೀವ್ ಅಥವಾ ರೆಮ್ಯುನರೇಟಿವ್ ಅನ್ನು ಕೊಡದೆ ರೈತನಿಗೆ ಬೇಕಾದಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆಂದು ಹೇಳುವುದಕ್ಕೆ ಬರುವುದಿಲ್ಲ. ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೈತರಿಗೆ ೮೦ ಕೋಟಿ ರೂಪಾಯಿಗಳ ಸಹಾಯವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಯಾವ ಯಾವ ಖಾತೆಯಲ್ಲಿ ಎಷ್ಟೆಷ್ಟು ಕೊಡಲಾಗಿದೆ ಎಂಬುದನ್ನು ತೆಗೆದುನೋಡಿದರೆ ನಿಜವಾಗಿ ಆಶ್ಚರ್ಯವಾಗುತ್ತದೆ. ಹಳ್ಳಿ ಗಾಡಿನಲ್ಲಿ ಅಕಿ ಜೆಷನ್ನಿಗೆ ಕೊಟ್ಟಿರುವ ಹಣವನ್ನು ಅದರಲ್ಲಿ ಸೇರಿಸಿದ್ದಾರೆ. ಸರ್ಕಾರದವರು ಏನು ಒಂದು ಸಹಾಯವನ್ನು ಕೊಡುತ್ತಾರೆ ಅಂಥ ಸಹಾಯ ನಮಗೆ ಧರ್ಮವಾಗಿ ಬೇಕಾಗಿದೆ. ರೈತನಿಗೆ ಸರಿಯಾದ ರೀತಿಯಲ್ಲಿ ರೆಮ್ಯುನರೇಟೀವ್ ಪ್ರೈಸಸ್ ಅನ್ನು ಕೊಟ್ಟಿದ್ದೇ ಆದರೆ ಅವನು ತನ್ನ ಕಾಲ ಮೇಲೆ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ, ಅದನ್ನು ಸ್ಥಾಪನೆ ಮಾಡಿದ್ದರ ಹಿನ್ನಲೆ ಏನಿದೆ ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಸ್ಥಾಪನೆಯಾದಾಗ ನಾನು ಲೋಕಸಭೆಯ ಸದಸ್ಯನಾಗಿದ್ದೆ, ಆಗ ಅಣ್ಣಾರಾವ್ ಸಿಂಧೆಯವರು ಕೂಡ ಲೋಕ ಸಭೆಯ ಸದಸ್ಯರಾಗಿದ್ದರು. ರೈತನಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸುವುದಕ್ಕೆ, ಅವನಿಗೆ ಬೇಕಾದ ಉಪಕರಣಗಳನ್ನು ಸರಬರಾಜು ಮಾಡುವುದಕ್ಕೆ ಈ ಒಂದು ಸಂಸ್ಥೆಯನ್ನು ಇಡೀ ರಾಷ್ಟ್ರದ ಎಲ್ಲ ರಾಜ್ಯಗಳಲ್ಲೂ ಜಾರಿಗೆ ತಂದರು ಆದರೆ ದುರ್ದೈವದಿಂದ ಇವತ್ತಿನ ದಿವಸ ಏನಾಗಿದೆ ಎಂಬ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗದೆ ಒಂದನ್ನು ಮಾತ್ರ ಹೇಳುತ್ತೇನೆ ಉದಾಹರಣೆಗೆ ಉಪಕರಣಗಳನ್ನು ತೆಗೆದುಕೊಳ್ಳೋಣ. ಬರೀ ಟ್ರ್ಯಾಕ್ಟರುಗಳನ್ನು, ಬುಲ್ಡೋಜನರುಗಳನ್ನು ಕೊಟ್ಟು ಬೋರ್‌ವೆಲ್‌ಗಳನ್ನು ತೆಗೆಸಿ ರೈತರಿಗೆ ಸಹಾಯ ಮಾಡುತ್ತಿದ್ದೇವೆ ಎಂದರೆ ಲಕ್ಷಾಂತರ ಜನರಿಗೆ ಬೇಕಾದ ಉಪಕರಣಗಳ ಗತಿ ಏನಾಗಬೇಕು? ಮಾನ್ಯ ಸದಸ್ಯರಾದ ಚೌಡಯ್ಯನವರು ಹೇಳಿದಂತೆ ರೈತನಿಗೆ ಮುಖ್ಯವಾಗಿ ಬೇಕಾದ ನೇಗಿಲು ಮತ್ತು ಇತರ ಉಪಕರಣಗಳು ಸಾಕಷ್ಟು ಸಿಗುತ್ತಿಲ್ಲ. ಇದನ್ನು ಸರ್ಕಾರದವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಏತಕ್ಕೆ ಮಾಡಿಸಬಾರದು ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದನ್ನು ಮಾಡಿಸಿ ರೈತರಿಗೆ ಒದಗಿಸುವ ಬಗ್ಗೆ ಯೋಚನೆ ಮಾಡಬೇಕು. ತಮಗೆಲ್ಲಾ ಗೊತ್ತಿರುವಂತೆ ಸಣ್ಣಪುಟ್ಟ ರೈತರಿಗೆ ಬೇಕಾದ ನಾನಾ ರೀತಿಯ ಉಪಕರಣಗಳ ಕೊರತೆ ಇದೆ. ಅದರ ಕಡೆಗೆ ಅಲ್ಪಸ್ವಲ್ಪ ನಿಗಾ ವಹಿಸಬೇಕೆಂದು ಹೇಳುತ್ತೇನೆ. ಆಗ್ರೋ ಇಂಡಸ್ಟ್ರೀಸ್ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತಿನ ದಿವಸ ಲಕ್ಷಾಂತರ ಜನ ರೈತರ ಆಸ್ತಿಗಳನ್ನು ಅವರು ಕೊಟ್ಟಿರತಕ್ಕ ಸಾಲಕ್ಕಾಗಿ ಮಾರಾಟ ಮಾಡುತ್ತಿದ್ದಾರೆ, ಹರಾಜು ಹಾಕುತ್ತಿದ್ದಾರೆ. ಆದರೆ ಅಲ್ಲಿ ನಡೆಯುತಕ್ಕ ವ್ಯವಹಾರವನ್ನು, ಕಾರ್ಯದಕ್ಷತೆಯನ್ನು ತಮಗೆ ತಿಳಿಸಲಿಷ್ಟಪಡುತ್ತೇನೆ ನಾನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಸಾಲ ಪಡೆದಿದ್ದೆ. ಅದರ ಮುಖಾಂತರ ಉಪಕರಣಗಳನ್ನು ತೆಗೆದುಕೊಂಡಿದ್ದೆ. ನಾನು ಪಡೆದಿದ್ದ ಪೂರ್ಣ ಸಾಲವನ್ನು ೧೯೭೮ ರಲ್ಲೇ ಮರುಪಾವತಿ ಮಾಡಿದ್ದೇನೆ. ಅದರ ಬಗ್ಗೆ ನನಗೆ ಒಂದು ಸರ್ಟಿಫಿಕೇಟನ್ನು ಕೂಡ ಕೊಟ್ಟಿದ್ದಾರೆ. "So and so who has purchased a tractor on hire purchase from us has settled his accounts in full" ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರ. ಆದರೆ ಒಂದು ವಾರದ ಹಿಂದೆ ನನಗೆ ನೋಟೀಸ್ ಕೊಟ್ಟಿದ್ದಾರೆ ತಹಸೀಲ್ದಾರ್ ಕಚೇರಿಯಿಂದ ನೋಟೀಸ್ ಕಳುಹಿಸಿ ನೀವು ೧೦,೪೪೫ ರೂಪಾಯಿಗಳನ್ನು ಮಾಡಿಲ್ಲ, ಈ ನೋಟೀಸ್ ಕಂಡತಕ್ಷಣ ನೋಟೀಸ್ ಚಾರ್ಜಿಯ ಖರ್ಚು ಎರಡು ರೂಪಾಯಿ ಸೇರಿ ಒಟ್ಟು ಮೊತ್ತವನ್ನು ಇಷ್ಟು ದಿವಸದೊಳಗಾಗಿ ಗ್ರಾಮಾಧಿಕಾರಿ ಅಥವಾ ತಾಲ್ಲೂಕ್ ಕಚೇರಿಯ ಸೆಕ್ರೆಟರಿಯವರಿಗೆ ಪಾವತಿ ಮಾಡದಿದ್ದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

೯–೭–೧೯೮೨ ರ ದಿವಸ ಕಳುಹಿಸಿದ್ದಾರೆ. ಇದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಎಲ್ಲಾ ಹಣ ಪಾವತಿ ಮಾಡಿರುವುದು ಯಾವಾಗ, ಇವರು ನೋಟೀಸ್ ಕಳುಹಿಸಿರುವುದು ಯಾವಾಗ ಎಂಬುದನ್ನು ನೋಡಿ. ನಮ್ಮಂಥವರಿಗೆ ಇಂಥ ಕೆಲಸ ಆಗಿರುವಾಗ ಇನ್ನು ಸಾಮಾನ್ಯ ಮನುಷ್ಯರ ಗತಿ ಏನು? ನಾನೇನು ಸ್ಪೆಷಲ್ ಪ್ರಿವಿಲೈಜ್ ಕೇಳುತ್ತಿಲ್ಲ. ವಿದ್ಯಾವಂತ ರೈತನಾದ ನನಗೇ ಈ ರೀತಿ ನೋಟೀಸ್ ಕೊಟ್ಟರೆ ಇನ್ನು ಬಡ ರೈತರ ಗತಿ ಏನು ಎಂದು ಕೇಳುತ್ತಿದ್ದೇನೆ. ಈ ರೀತಿ ತಪ್ಪುತಪ್ಪಾಗಿ ಲೆಕ್ಕ ಹಾಕಿ ಸಾವಿರಾರು ರೈತರ ಆಸ್ತಿಗಳನ್ನು ಹರಾಜು ಹಾಕುತ್ತಿದ್ದಾರೆ. ಅವರು ಹಣ ಕೊಟ್ಟಿದ್ದರೂ ಕೂಡ ಈ ರೀತಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ ಇನ್ನು ಮುಂದೆ ಈ ರೀತಿ ನಡೆಯದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನೂ ರೈತನಾಗಿರುವುದರಿಂದ ಟೊಬ್ಯಾಕೋ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ರೈತರಿಗೆ ಹಾಕತಕ್ಕ ಬಡ್ಡಿಗಳನ್ನು ನೋಡಿದರೆ ನಿಜವಾಗಿಯೂ ರೈತನಾಗಿ ಪಾಪ ಮಾಡಿ ಹುಟ್ಟಿರಬೇಕು ಎಂದೆನಿಸುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಬಡಜನರಿಂದ ಹೆಚ್ಚಿನ ಹಣವನ್ನು ಬಡ್ಡಿ ರೂಪದಲ್ಲಿ ವಸೂಲು ಮಾಡಿ ಬಡಜನರ ಶೋಷಣೆ ಮಾಡುತ್ತಿದ್ದ ಮನಿ ಲೆಂಡರ್ಸ್ ಕಷ್ಟದಿಂದ ಏತಕ್ಕಾಗಿ ರೈತರನ್ನು ಪಾರು ಮಾಡಿದೆವು? ರೈತರಿಗೆ ಅವರಿಂದ ತೊಂದರೆಯಾಗುತ್ತಿದೆ ಎಂಬ ದೃಷ್ಟಿಯಿಂದ ತಾನೆ? ಆದರೆ ಅದೇ ಕೆಲಸವನ್ನು ಮಾಡಲು ಬೇರೊಂದು ವರ್ಗವನ್ನು ಇವತ್ತು ಉತ್ಪತ್ತಿ ಮಾಡಿದ್ದೇವೆ. ನಾನು ಟೊಬ್ಯಾಕೊ ಕಂಪೆನಿಯಲ್ಲಿ ೧೩ ಸಾವಿರ ರೂಪಾಯಿ ಸಾಲ ಪಡೆದಿದ್ದೆ. ಅದರಲ್ಲಿ ಸ್ವಲ್ಪ ತೀರಿಸಿ ಇನ್ನು ೭ ಸಾವಿರ ರೂಪಾಯಿ ಬಾಕಿ ಇದೆ. ಅದಕ್ಕೆ ೭,೦೮೬ ರೂಪಾಯಿ ಬಡ್ಡಿ ಹಾಕಿದ್ದಾರೆ. ಬ್ಯಾರನ್ ಕಟ್ಟಿದ್ದಕ್ಕೆ ಸಬ್ಸಿಡಿ ಕೊಡಬೇಕೆಂದಿದೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಎಷ್ಟು ವರ್ಷಕ್ಕೆ ಆ ಬಡ್ಡಿ?

ಶ್ರೀ ಎಂ.ವಿ. ರಾಜಶೇಖರನ್. ಆರೇಳು ವರ್ಷಕ್ಕೆ. ನಾನು ಏತಕ್ಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ ಇದರ ಹಿನ್ನೆಲೆಯನ್ನು ತಮಗೆ ತಿಳಿಸುವುದಕ್ಕೋಸ್ಕರ ಹೇಳುತ್ತಿದ್ದೇನೆ. ಇದರ ಹಿಂದಿರತಕ್ಕ ವಿಚಾರವನ್ನು ತಿಳಿದುಕೊಳ್ಳಬೇಕು. ಬ್ಯಾರನ್ ಕಟ್ಟಿದರೆ ೨ ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಅದಕ್ಕೆ ಅವರಲ್ಲಿ ಒಂದು ವಿಧಾನ ಇದೆ. ಅಲ್ಲಿರತಕ್ಕ ಅಗ್ರಿಕಲ್ಚರಲ್ ಅಸಿಸ್ಟೆಂಟ್ ರಿಪೋರ್ಟ್ ಕಳುಹಿಸಬೇಕು. ಅದಾದನಂತರ ೧೦ ಸಾವಿರದಲ್ಲಿ ೨ ಸಾವಿರ ರೂಪಾಯಿಗಳನ್ನು ಮನ್ನಾ ಮಾಡುತಾರೆ. ರಿಪೋರ್ಟ್ ಹೋಗದಿದ್ದರೆ ಅದಕ್ಕೂ ಬಡ್ಡಿ ಹಾಕುತ್ತಾರೆ. ಈಗ ನಾನು ಕೊಡಬೇಕಾದ ೭,೦೮೬ ರೂಪಾಯಿ ೪೪ ಪೈಸೆಗೆ ಇವತ್ತಿನ ದಿವಸ ರೂಪಾಯಿ ೧೯.೩೫೭–೪೪ ಕೊಡಬೇಕಾಗಿದೆ. ಈ ರೀತಿ ಬಡ್ಡಿ ಹಾಕಿದರೆ ಯಾವ ರೈತ ಉಳಿಯುವುದಕ್ಕೆ ಸಾಧ್ಯವಾಗುತ್ತದೆ? ರೈತರು ಆಂದೋಳನ ಮಾಡದೆ ಇನ್ನೇನು ಮಾಡಲು ಸಾಧ್ಯ? ಇವತ್ತು ಹಳ್ಳಿಗಾಡಿನ ಸಮಸ್ಯೆಗಳನ್ನು ವಿಚಾರ ಮಾಡುವಾಗ, ರೈತರ ಸಮಸ್ಯೆಗಳನ್ನು ವಿಚಾರ ಮಾಡುವಾಗ ಅವರ ಕಷ್ಟಗಳನ್ನು ಅರಿತು ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನಪಡಬೇಕು. ಮಳೆ ಇಲ್ಲದೆ ರೈತರೆಲ್ಲಾ ಆಕಾಶದ ಕಡೆ ನೋಡುತ್ತಿದ್ದಾರೆ. ಹಣ ಕೊಡುವುದಕ್ಕಾಗುವುದಿಲ್ಲ. ಇದರಿಂದ ಬಡ್ಡಿ ಬೆಳೆಯುತ್ತಿದೆ. ಅವನು ಅಸಲು ಯಾವಾಗ ಕೊಡಬೇಕು, ಬಡ್ಡಿ ಯಾವಾಗ ಕೊಡಬೇಕು ಎಂಬುದನ್ನು ಯೋಚನೆ ಮಾಡಿ. ಬೇರೆ ಬೇರೆ ಕಾರ್ಪೊರೇಷನ್‌ಗಳಲ್ಲಿ ಸಾಲ ತೆಗೆದುಕೊಂಡಿರುವವರಿಗೆ ಬೆಳೆಯಾಗದೆ ಬಡ್ಡಿ ಬೆಳೆದಿದ್ದರೆ ಅದನ್ನು ಮನ್ನಾ ಮಾಡಬೇಕು. ಸಾವಿರಾರು ರೈತರಿಗೆ ಟೊಬ್ಯಾಕೋ ಕಂಪೆನಿಯವರು ನೋಟೀಸ್ ಕೊಟ್ಟಿದ್ದಾರೆ. ಇದು ಬಹಳ ಅನ್ಯಾಯ. ನಾನು ದೋಷಾರೋಪಣೆಯನ್ನು ಈ ಎರಡು ಕಂಪೆನಿಗಳ ಮೇಲೆ ಮಾಡುತ್ತಿಲ್ಲ. ಈಗ ಕೈಗೊಳ್ಳುತ್ತಿರುವ ವಿಧಾನವನ್ನು ಎಲ್ಲಿಯವರೆಗೆ ಬದಲಾವಣೆ ಮಾಡುವುದಿಲ್ಲ ಅಲ್ಲಿಯವರೆಗೆ ಟೊಬ್ಯಾಕೋ ಕಂಪೆನಿ ಮತ್ತು ಆಗ್ರೋ ಇಂಡಸ್ಟ್ರೀಸ್ ಕಂಪೆನಿಯವರು ಏನೂ ಮಾಡುವುದಕ್ಕಾಗುವುದಿಲ್ಲ. ಆದರೆ ಈ ವಿಧಾನವನ್ನು ಬದಲಾವಣೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ವಿಧಾನಸೌಧದಲ್ಲಿ ನಾನಾ ಇಲಾಖೆಗೆ ಸಂಬಂಧಪಟ್ಟಂತೆ ತಜ್ಞರನ್ನು ಅಡಿಷನಲ್ ಸೆಕ್ರೆಟರಿಗಳನ್ನಾಗಿ ನೇಮಕ ಮಾಡಿಕೊಂಡಿದ್ದಾರೆ. ಪಶು ಸಂಗೋಪನಾ ಇಲಾಖೆಯಲ್ಲಿ, ಕಾನೂನು ಇಲಾಖೆಯಲ್ಲಿ, ಮತ್ತು ಒಳಾಡಳಿತ ಇಲಾಖೆಯಲ್ಲಿ ಆಯಾ ಇಲಾಖೆಯಲ್ಲಿ ಪರಿಣತಿ ಹೊಂದಿರುವ ತಜ್ಞರನ್ನು ಅಡಿಷನಲ್ ಸೆಕ್ರೆಟರಿಗಳನ್ನಾಗಿ ನೇಮಕ ಮಾಡಿದ್ದಾರೆ. ಆದರೆ ವ್ಯವಸಾಯ ಇಲಾಖೆಯಲ್ಲಿ ಏತಕ್ಕೆ ಆ ರೀತಿ ಅಡಿಷನಲ್ ಕಾರ್ಯದರ್ಶಿಯವರನ್ನು ಮಾಡಿಲ್ಲ? ಈ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಆಗಬೇಕಾದರೆ ವಿಧಾನಸೌಧದಲ್ಲಿ ಈ ವ್ಯವಸಾಯ ಇಲಾಖೆಗೆ ಒಬ್ಬರು ಅಡಿಷನಲ್ ಕಾರ್ಯದರ್ಶಿಯವರು ಇರಬೇಕು. ಸರ್ಕಾರದವರು ಈ ಕೆಲಸವನ್ನು ಮಾಡಬೇಕೆಂದು

ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ವ್ಯವಸಾಯ ಇಲಾಖೆಗೆ ಒಳ್ಳೆಯ ತಜ್ಞರು ನಿರ್ದೇಶಕರಾಗಿ ಬಂದಿದ್ದಾರೆ. ಬಹಳ ಸಂತೋಷ. ಅವರು ಯಾವ ಜಾತಿಯವರೇ ಆಗಿರಲಿ ಒಳ್ಳೆಯವರು. ಗುಣಕ್ಕೆ ಮತ್ಸರವಿರಬಾರದು. ಚೆನ್ನಾಗಿ ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹ ನೀಡಬೇಕು. ಇಲಾಖೆಯಲ್ಲಿ ತಾಂತ್ರಿಕ ಜ್ಞಾನ ಹೆಚ್ಚಾಗಬೇಕು. ಅದು ಆಗಬೇಕಾದರೆ ಕೃಷಿ ವಿಶ್ವವಿದ್ಯಾನಿಲಯ ಮತ್ತು ಈ ಇಲಾಖೆಯಲ್ಲಿ ಇಂಟರ್‌ಚೇಂಜ್ ಆಗಬೇಕು. ಆ ರೀತಿ ಮಾಡಿ ತಂತ್ರಜ್ಞಾನವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದುವರೆಗೆ ಆಲೂಗಡ್ಡೆಯನ್ನೇ ಉಪಯೋಗಿಸಿ ಆಲೂಗಡ್ಡೆ ಬೆಳೆಯನ್ನು ಬೆಳೆಯುತ್ತಿದ್ದರು. ಆದರೆ ಈಗ ರಾಗಿ ಮತ್ತು ಭತ್ತಕ್ಕೆ ಉಪಯೋಗಿಸಿದಂತೆ ಆಲೂಗಡ್ಡೆ ಬಿತ್ತನೆಗೂ ಬೀಜವನ್ನು ಕಂಡುಹಿಡಿದಿದ್ದಾರೆ. ಆಲೂಗೆಡ್ಡೆಯನ್ನು ಕೊಯ್ದು ಬೀಜವನ್ನಾಗಿ ಮೊದಲು ಉಪಯೋಗಿಸುತ್ತಿದ್ದರು. ಈಗ ಹಾಗೆ ಮಾಡಬೇಕಾಗಿಲ್ಲ ಈ ರೀತಿಯ ತಂತ್ರಜ್ಞಾನವನ್ನು ಅರ್ಥ ಮಾಡಿಕೊಂಡು ಅದನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

೩-೩೦ ಪಿ.ಎಂ.

ಕಡೆಯದಾಗಿ ತೋಟಗಾರಿಕೆ ಇಲಾಖೆಯ ಬಗ್ಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ, ಇವತ್ತಿನ ದಿವಸ ಬೆಂಗಳೂರು ಜಿಲ್ಲೆ ತೆಗೆದುಕೊಳ್ಳೋಣ, ಈ ಜಿಲ್ಲೆಯಲ್ಲಿ ಸಾಕಷ್ಟು ತರಕಾರಿ ಉತ್ಪಾದನೆಯಾಗುತ್ತದೆ. ಇಡೀ ದಕ್ಷಿಣ ರಾಜ್ಯಗಳಿಗೆ ಕೊಡುವಷ್ಟು, ಉತ್ತರ ರಾಜ್ಯಗಳಿಗೆ ಕೊಡುವಷ್ಟು ಅನುಕೂಲ ಪಡೆದಿದೆ ಎಂದರೆ ತಪ್ಪಾಗಲಾರದು. ಬೆಳಿಗ್ಗೆ ೫ ಅಥವಾ ೫-೩೦ರ ಸಮಯದಲ್ಲಿ ಹೊಸಕೋಟೆ, ದೇವನಹಳ್ಳಿ ಮತ್ತು ತುಮಕೂರು ಮಾರ್ಗಗಳಿಂದ ಸಾವಿರಾರು ಗಾಡಿಗಳಲ್ಲಿ ತರಕಾರಿಯನ್ನು ತರುವುದನ್ನು ನೋಡಬಹುದು. ಕೃಷ್ಣರಾಜೇಂದ್ರ ಮಾರುಕಟ್ಟೆ ಹತ್ತಿರ ಬೆಳಗಿನ ೫ ಗಂಟೆ ಸಮಯಕ್ಕೆ ಹೋದರೆ ಗೊತ್ತಾಗುತ್ತದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ತೋಟಗಾರಿಕೆ ಬೇಸಾಯಕ್ಕೆ ಅನುಕೂಲವಾಗುವಂತಹ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು. ಸರ್ಕಾರದವರು ದುಡ್ಡಿನ ಅಭಾವ ಇದೆಯೆಂದು ಹೇಳಬಹುದು. ಎಂ. ವಿ. ಕೃಷ್ಣಪ್ಪನವರು ಇದ್ದ ಕಾಲದಲ್ಲಿ ಬಲ್ಗೇರಿಯಾ ಸರ್ಕಾರದ ನೆರವಿನೊಂದಿಗೆ ರಾಜ್ಯದಲ್ಲಿ ಫ್ರೂಟ್ ಪ್ರೊಸೆಸಿಂಗ್ ಫ್ಯಾಕ್ಟರಿಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಅದರಲ್ಲಿಯೂ ವಿಶೇಷವಾಗಿ ಟೊಮ್ಯಾಟೋ ಹಣ್ಣಿಗೆ ಸಂಬಂಧಪಟ್ಟಂತೆ ಇನ್ನಿತರ ತೋಟಗಾರಿಕೆ ಬೇಸಾಯಕ್ಕೆ ಸಂಬಂಧಪಟ್ಟಂತೆ ನಾನಾ ಕೈಗಾರಿಕೆಗಳನ್ನು ಹಳ್ಳಿಗಾಡಿನಲ್ಲಿ ತೆರೆಯಬಹುದು. ಫಾರ್ಮೋಸಾ ಮತ್ತು ತೈವಾನ್ ದೇಶದವರು ಪೂರ್ವ ಯೂರೋಪ್ ರಾಷ್ಟ್ರಗಳಿಗೆ ಸಾವಿರಾರು ರೂಪಾಯಿ ಬೆಲೆ ಬಾಳುವ ತರಕಾರಿಗಳನ್ನು ಕಳುಹಿಸುತ್ತಿವೆ. ಇದರಿಂದ ಸಾಕಷ್ಟು ಹಣವನ್ನು ಗಳಿಸುತ್ತಾರೆ. ಸಾಕಷ್ಟು ಅನುಕೂಲವನ್ನು ಪಡೆದಿದ್ದಾರೆ. ಇಂಥ ಒಂದು ಅನುಕೂಲವನ್ನು ಮಾಡುವ ದಿಕ್ಕಿನಲ್ಲಿ ತೋಟಗಾರಿಕೆ ಇಲಾಖೆಯವರು ಗಮನಕೊಡಬೇಕೆಂದು ಹೇಳುತ್ತೇನೆ ಇಷ್ಟು ವಿಚಾರಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೂ, ತಮ್ಮೆಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸಿ, ನಾನು ಹೇಳಿರತಕ್ಕಂಥ ಹಲವಾರು ಸಲಹೆಗಳನ್ನು ಸರ್ಕಾರದವರು ಪರಿಶೀಲನೆ ಮಾಡಿ, ಬರೀ ಮಾತಿನ ಚರ್ಚೆಯಾಗದೇ, ಕಾರ್ಯಗತ ಮಾಡುವ ದಿಸೆಯಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ಸರ್ಕಾರದವರು ಈ ಸದನದಲ್ಲಿ ಹೇಳುತ್ತಾರೆಂದು ಆಶಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ವಿಷಯ :—ಹಿಂದೂಪುರದಿಂದ ಬೆಂಗಳೂರು ನಗರದ ಜಯನಗರದ ೫ನೇ ಬ್ಲಾಕಿನಲ್ಲಿ ತಂದು ಹಾಕಿರುವ ಸತ್ತ ೨೫ ಹಸುಗಳು ಮತ್ತು ಎತ್ತುಗಳ ಬಗ್ಗೆ

ಶ್ರೀ ಎಂ. ಚಂದ್ರಶೇಖರ್ —ಹಿಂದೂಪುರದಿಂದ ಬೆಂಗಳೂರು ನಗರದ ಜಯನಗರದ ೫ನೇ ಬ್ಲಾಕಿನಲ್ಲಿ ತಂದು ಹಾಕಿರುವ ಸತ್ತ ೨೫ ಹಸುಗಳು ಮತ್ತು ಎತ್ತುಗಳ ಬಗ್ಗೆ ಮಾನ್ಯ ಸಂಸದೀಯ ಹಾಗೂ ಪಶುಸಂಗೋಪನಾ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೈ. ರಾಮಕೃಷ್ಣ (ಸಂಸದೀಯ ಪಶುಸಂಗೋಪನಾ ಸಚಿವರು).—ತಾ : ೨೦-೭-೧೯೮೨ ರಂದು ಮಧ್ಯಾಹ್ನ ಸಿ.ಪಿ.ಇ. ೯೨೪೯ ನಂಬರಿನ ಲಾರಿಯು ಆಂಧ್ರ ಪ್ರದೇಶದ ಹಿಂದೂಪುರದ ಕಡೆಯಿಂದ